

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಆಗಸ್ಟ್ 21 ಭಾನುವಾರ 2022

ಸಂಪುಟ: 43 | ಸಂಚಿಕೆ: 126 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ತಿಮ್ಮಪ್ಪನ ಸನ್ನಿಧಿಯಲ್ಲಿ ಬಿಜೆಪಿ ಚುನಾವಣಾ ತಯಾರಿ

ಸೆಪ್ಟೆಂಬರ್‌ನಲ್ಲಿ ರಾಜ್ಯದಲ್ಲಿ ಮೂರು ರಥಯಾತ್ರೆ

● ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ನಳಿನ್‌ಕುಮಾರ್ ಕಟೀಲ್ ನೇತೃತ್ವದಲ್ಲಿ ರಾಜ್ಯ ಪ್ರವಾಸ ● ಪ್ರಚೋದಿತ ಮತ ರಾಜಕಾರಣಕ್ಕೆ ತೆರೆ ಎಳೆಯಲು ಬಿಎಸ್‌ವೈ ಸೂಚನೆ



ಬೆಂಗಳೂರು, ಆ.20(ಕೆಎಂಶಿ)– ಮುಂಬರುವ ವಿಧಾನಸಭೆ ಚುನಾವಣೆ ಎದುರಿಸುವ ನೀಲಿನಕ್ಷೆ ಯನ್ನು ರಾಜ್ಯ ಬಿಜೆಪಿ ಮುಖಂಡರು ತಿರುಪತಿ ತಿಮ್ಮಪ್ಪನ ಸನ್ನಿಧಿಯಲ್ಲಿ ರೂಪಿಸಿದ್ದಾರೆ. ಈ ತೀರ್ಮಾನದಂತೆ ಸೆಪ್ಟೆಂಬರ್ ತಿಂಗಳಲ್ಲಿ ಕಮಲದ ಮೂರು ರಥಗಳು ಪ್ರತ್ಯೇಕವಾಗಿ ರಾಜ್ಯ ಪ್ರವಾಸ ಕೈಗೊಳ್ಳಲಿವೆ.

ಕೇಂದ್ರ ಸಂಸದೀಯ ಮಂಡಳಿ ಸದಸ್ಯರಾಗಿ ಆಯ್ಕೆಗೊಂಡಿರುವ ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕಂದಾಯ ಸಚಿವ ಆರ್.ಅಶೋಕ್, ಎರಡು ದಿನಗಳ ತಿರುಪತಿ ಪ್ರವಾಸ ಕೈಗೊಂಡಿದ್ದರು. ಆ ಸಂದರ್ಭದಲ್ಲಿ ರಾಜ್ಯದ ರಾಜಕೀಯ ಸ್ಥಿತಿಗತಿ ಬಗ್ಗೆ ಸಮಾಲೋಚಿಸಿದ್ದಾರೆ. ಯಡಿಯೂರಪ್ಪ ಅವರು ಮುಖ್ಯಮಂತ್ರಿಗಳಿಗೆ ಕೆಲವು ಸಲಹೆಗಳನ್ನು ನೀಡಿದ್ದಾರೆ. ಪ್ರಚೋದಿತ ರಾಜಕೀಯದಿಂದ ಮತ ರಾಜಕಾರಣ ಮಾಡುವುದು ಬೇಡ. ಪ್ರತಿಪಕ್ಷದ ನಾಯಕರ ಮೇಲೆ ಮೊಟ್ಟೆ ಎಸೆಯುವುದು, ಕಪ್ಪು ಬಾವುಟ ಪ್ರದರ್ಶನ, ಘೇರಾವ್ ಮಾಡುವುದನ್ನು ತಕ್ಷಣವೇ ನಿಲ್ಲಿಸಲು ಕ್ರಮ ಕೈಗೊಳ್ಳಬೇಕು ಎಂದು ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿ ಬೊಮ್ಮಾಯಿಗೆ ಖಡಕ್ ಸಲಹೆ ನೀಡಿದ್ದಾರೆ. ಗಣೇಶೋತ್ಸವ, ಶ್ರೀರಾಮನವಮಿ, ಹನುಮ ಜಯಂತಿ ಸೇರಿದಂತೆ ಧಾರ್ಮಿಕ ಆಚರಣೆಗಳು ಮಾಮೂಲಿಯಂತೆ ನಡೆಯುತ್ತವೆ. ಅದಕ್ಕೆ ಪ್ರಚೋದನೆ ಅಗತ್ಯವಿಲ್ಲ. ಆ ಶಿಕ್ಷಣ ಮಂತ್ರಿಯನ್ನು ಕರೆದು ಬುದ್ಧಿ ಹೇಳಿ. ಸಮಸ್ಯೆ ಸೃಷ್ಟಿಸುವ ಹೇಳಿಕೆ ಬೇಡ ಎಂದು ಹಿತೋಪದೇಶ ಮಾಡಿದ್ದಾರೆ.

ಇಂಥಹ ರಾಜಕೀಯದಿಂದ ನಮಗೆ ಮತ ಬರುವುದಿಲ್ಲ. ಕಾರ್ಯಕರ್ತರನ್ನು ಒಗ್ಗೂಡಿಸಬೇಕು. ಜನರ ಮನ ಗೆಲ್ಲಿಸಬೇಕು. ನಮ್ಮ ಕಾರ್ಯಕ್ರಮಗಳನ್ನು ಅವರಿಗೆ ತಲುಪಿಸಬೇಕು. ಇನ್ನು ಮುಂದೆ ವಿಶ್ರಮಿಸುವುದು ಬೇಡ. ನಾನು ಧೂಳೆಬ್ಬಿಸುತ್ತೇನೆ. ನಡೆಯಿರಿ ಪ್ರವಾಸ ಕೈಗೊಳ್ಳೋಣ ಎಂದು ತಿಳಿಸಿದ್ದಾರೆ. ಸಂಘರ್ಷ ಮಾಡುತ್ತಿರುವ ಯುವ ಸಮುದಾಯಕ್ಕೆ ಕಿವಿಮಾತು ಹೇಳಿ ವಿನಾಕಾರಣ ವಿವಾದ ಸೃಷ್ಟಿಸದಂತೆ ಮನವರಿಕೆ ಮಾಡಿಕೊಡಿ ಎಂದು ಹೇಳಿದ್ದಾರೆ. ಅಲ್ಲದೆ, ತಿಮ್ಮಪ್ಪನಿಗೆ ವಿಶೇಷ ಪೂಜೆ ಸಲ್ಲಿಸಿದ ನಂತರ ಚುನಾವಣಾ ತಯಾರಿ ಮತ್ತು ಪ್ರತಿಪಕ್ಷಗಳನ್ನು ಎದುರಿಸುವುದು ಹೇಗೆ ಎಂಬುದರ ಬಗ್ಗೆ ರೂಪುರೇಷೆ ಸಿದ್ಧಪಡಿಸಿದರು.

ಅಂದು ತಿರುಪತಿಯಲ್ಲಿ ತೆಗೆದುಕೊಂಡ ತೀರ್ಮಾನದಂತೆ ಇಂದು ರಾಜ್ಯ ಬಿಜೆಪಿ ಕಚೇರಿಯಲ್ಲಿ ಮುಖಂಡರು ಸಭೆ ಸೇರಿ ಪ್ರವಾಸದ ರೂಪುರೇಷೆ ಅಂತಿಮಗೊಳಿಸಿದ್ದಾರೆ. ▶ 8ನೇ ಪುಟಕ್ಕೆ

ದಸರಾ ಫಲಪುಷ್ಪ ಪ್ರದರ್ಶನದಲ್ಲಿ ಅರಳಲಿದ್ದಾರೆ

ಪುನೀತ್ ರಾಜ್‌ಕುಮಾರ್

ಆಜಾದಿ ಕಾ ಅಮೃತ ಮಹೋತ್ಸವ ಮಹತ್ವದ ಸಂಗತಿಗಳು ಮೂಡಲಿವೆ


[ಸಂಗ್ರಹ ಚಿತ್ರ]


ಮೈಸೂರು, ಆ.20(ಜಿಎ)– ಈ ಬಾರಿ ದಸರಾ ಮಹೋತ್ಸವದ ಫಲಪುಷ್ಪ ಪ್ರದರ್ಶನದಲ್ಲಿ ಅರಳಲಿದ್ದಾರೆ ನಟ ಪುನೀತ್ ರಾಜ್‌ಕುಮಾರ್....! ಆಜಾದಿ ಕಾ ಅಮೃತ ಮಹೋತ್ಸವದ ಮಹತ್ವವೂ ಪುಷ್ಪ ಕಲಾಕೃತಿ ಮೂಲಕ ಎಲ್ಲರ ಗಮನ ಸೆಳೆಯಲಿದೆ.

ಕೊರೊನಾ ಬಾಧೆಯಿಂದ ಕಳೆದ ಎರಡು ವರ್ಷಗಳಿಂದ ವಿಶ್ವವಿಖ್ಯಾತ ದಸರಾ ಮಹೋತ್ಸವ ಸರಳವಾಗಿ ಆಚರಿಸಲ್ಪಟ್ಟಿತ್ತು. ಆದರೆ, ಈ ಬಾರಿ ಅದ್ಧೂರಿ ದಸರಾ ನಡೆಸಲು ರಾಜ್ಯ ಸರ್ಕಾರ ನಿರ್ಧರಿಸಿದ್ದು, ಈಗಾಗಲೇ ಮೈಸೂರಿಗೆ ಗಜಪಡೆ ಆಗಮನದಿಂದ ಸಂಭ್ರಮದ ವಾತಾವರಣ ನಿರ್ಮಾಣವಾಗಿದೆ. ಈ ಬಾರಿಯ ಫಲಪುಷ್ಪ ಪ್ರದರ್ಶನದಲ್ಲಿ ನಟ ಪುನೀತ್ ರಾಜ್‌ಕುಮಾರ್ ಪುಷ್ಪಗಳಲ್ಲಿ ಅರಳಲಿದ್ದು, 75ನೇ ಸ್ವಾತಂತ್ರ್ಯೋತ್ಸವದ ಸಂಭ್ರಮದಲ್ಲಿರುವ ದೇಶಕ್ಕೆ ಆಜಾದಿ ಕಾ ಅಮೃತ ಮಹೋತ್ಸವದ ಮಹತ್ವವನ್ನು ಸಾರಲಿದೆ. ಮೈಸೂರು ದಸರಾ ಎಂದ ತಕ್ಷಣ ಎಲ್ಲರ ನೆನಪಿಗೆ ಬರುವುದು ವಿಜಯದಶಮಿ ದಿನದ ಜಂಬೂಸವಾರಿ. ಅದಕ್ಕೂ ಮುನ್ನ ಇಡೀ ಮೈಸೂರು ನವವಧುವಿನ ರೀತಿ ಶೃಂಗಾರಗೊಂಡು ▶ 8ನೇ ಪುಟಕ್ಕೆ

66 ಇಷ್ಟು ವರ್ಷಗಳ ದಸರಾ ಫಲಪುಷ್ಪ ಪ್ರದರ್ಶನಕ್ಕೂ ಈ ಬಾರಿಗೂ ಬಹಳಷ್ಟು ವ್ಯತ್ಯಾಸವಿರಲಿದ್ದು, ಹೊಸ ಮಾದರಿಗಳನ್ನು ನೋಡಬಹುದಾಗಿದೆ. ಪುನೀತ್ ರಾಜ್‌ಕುಮಾರ್, ಅಮೃತ ಮಹೋತ್ಸವ ಮತ್ತು ಮಕ್ಕಳಿಗೆ ಸಂಬಂಧಿಸಿದಂತೆ ವಿಶೇಷ ಕಲಾಕೃತಿಗಳು ಇರಲಿವೆ. ಫಲಪುಷ್ಪ ಪ್ರದರ್ಶನಕ್ಕಾಗಿ ಈಗಾಗಲೇ 40 ಸಾವಿರಕ್ಕೂ ಅಧಿಕ ಪಾಟ್‌ಗಳನ್ನು ಖರೀದಿ ಮಾಡಲಾಗಿದೆ. ರಾಜ್ಯದ ಪ್ರತಿಷ್ಠಿತ ಸಂಸ್ಥೆಗಳು, ಕೈಗಾರಿಗಳು ಭಾಗವಹಿಸಲು ಅರ್ಜಿಗಳನ್ನು ಪಡೆದುಕೊಂಡಿದ್ದಾರೆ. ಮಳೆ ಬರಲಿಲ್ಲ ಎಂದರೆ ಬಹಳಷ್ಟು ಅಚ್ಚುಕಟ್ಟಾಗಿ, ಅದ್ಭುತವಾಗಿ ಈ ಬಾರಿಯ ದಸರಾ ಫಲಪುಷ್ಪ ಪ್ರದರ್ಶನ ಮೂಡಿ ಬರಲಿದೆ. –ಬಿ.ಎನ್. ಸುವೇದ, ಹಿರಿಯ ಸಹಾಯಕ ನಿರ್ದೇಶಕಿ, ತೋಟಗಾರಿಕೆ ಇಲಾಖೆ

ಸಿದ್ದರಾಮಯ್ಯ ಕಾರಿಗೆ ಮೊಟ್ಟೆ ತೂರಿದ್ದ 'ಕೈ ಕಮಲದ್ದೇ...!?'


ಸಿದ್ದರಾಮಯ್ಯ ಕಾರಿನ ಮೇಲೆ ಮೊಟ್ಟೆ ತೂರಿದ ಸಂಪತ್ ಕಾಂಗ್ರೆಸ್ ಶಾಲು ಧರಿಸಿರುವುದು.


ಆರ್‌ಎಸ್‌ಎಸ್ ಬೈಠಕ್‌ನಲ್ಲಿ ಶಾಸಕ ಅಪ್ಪಚ್ಚು ರಂಜನ್ ಹಿಂದೆ ನಿಂತಿರುವ ಸಂಪತ್

ಮಡಿಕೇರಿ, ಆ. 20– ಕೊಡಗು ಪ್ರವಾಸದ ವೇಳೆ ಕುಶಾಲನಗರ ಬಳಿ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರ ಕಾರಿನ ಮೇಲೆ ಮೊಟ್ಟೆ ಎಸೆದ ಆರೋಪಿ ಯನ್ನು ಕುಶಾಲನಗರ ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಈ ಆರೋಪಿ, ನಾನು ಕಾಂಗ್ರೆಸ್ ಕಾರ್ಯಕರ್ತ ಎಂದು ಮಾಧ್ಯಮಗಳಿಗೆ ತಿಳಿಸಿದ್ದಾನೆ. ಇಂದು ರಾತ್ರಿ ಪೊಲೀಸರು ಆತನನ್ನು ಕುಶಾಲನಗರ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಆತ ಜಾಮೀನಿನ ಮೇಲೆ ಬಿಡುಗಡೆ ಹೊಂದಿದ್ದಾನೆ. ಮೊಟ್ಟೆ ಎಸೆದ ವಿಡಿಯೋ ದೃಶ್ಯ ವೈರಲ್ ಆಗಿದ್ದು, ಅದರಲ್ಲಿ ಮೊಟ್ಟೆ ಎಸೆದ ವ್ಯಕ್ತಿ ಯಾರು ಎಂಬುದು ಕರಾರುವಕ್ಕಾಗಿ ಗೋಚರಿಸಿತ್ತು. ಕುಶಾಲನಗರ ಬಳಿ ಮೊಟ್ಟೆ ಎಸೆದ ಸೋಮವಾರಪೇಟೆಯ ಸಂಪತ್ ಎಂಬಾತನನ್ನು ಕುಶಾಲನಗರ ಗ್ರಾಮಾಂತರ ಠಾಣೆ ಪೊಲೀಸರು ಶನಿವಾರ ಬಂಧಿಸಿದರು. ಈ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ಸಂಪತ್, ತಾನು ಕಾಂಗ್ರೆಸ್ ಕಾರ್ಯಕರ್ತ ಎಂದು ಹೇಳಿಕೊಂಡಿದ್ದಾನೆ. ತಾನು ಮಾಜಿ ಸಚಿವ ಜೀವಿಜಯ ಅವರ ಅಭಿಮಾನಿಯಾಗಿದ್ದು, ಈ ಹಿಂದೆ ಜೆಡಿಎಸ್‌ನಲ್ಲಿದ್ದೆ. ನಂತರ ಅವರು ಕಾಂಗ್ರೆಸ್ ಸೇರಿದಾಗ ತಾನೂ ಕೂಡ ಕಾಂಗ್ರೆಸ್ ಸೇರ್ಪಡೆಯಾಗಿದ್ದಾಗಿ ಆತ ತಿಳಿಸಿದ್ದಾನೆ. ಕುಶಾಲನಗರ ಬಳಿ ಸಿದ್ದರಾಮಯ್ಯ ವಿರುದ್ಧ ಬಿಜೆಪಿ ನಡೆಸಿದ ಪ್ರತಿಭಟನೆಗೂ ನನಗೂ ಯಾವುದೇ ▶ 8ನೇ ಪುಟಕ್ಕೆ

ಬಿಜೆಪಿಯಿಂದ ಬೀದಿ ಪುಂಡರ 'ಆಪರೇಷನ್ ಕಮಲ'!



ಬೆಂಗಳೂರು: ತಮ್ಮ ಕಾರಿನ ಮೇಲೆ ಮೊಟ್ಟೆ ಎಸೆದ ಆರೋಪಿ ಕಾಂಗ್ರೆಸ್ ಕಾರ್ಯಕರ್ತ ಎಂಬ ಸುದ್ದಿ ಪ್ರಸಾರವಾಗುತ್ತಲೇ ಈ ಕುರಿತು ಸರಣಿ ಟ್ವೀಟ್ ಮೂಲಕ ಬಿಜೆಪಿಗೆ ಕುಟುಕಿರುವ ಸಿದ್ದರಾಮಯ್ಯ, ಆಪರೇಷನ್ ಕಮಲ' ಎಂದರೆ ಶಾಸಕರಿಗೆ ಮಾತ್ರ ಅಲ್ಲ.. ಈಗ ಬೀದಿ ಪುಂಡರ ಆಪರೇಷನ್ ಕಮಲ ಕೂಡ ಬಿಜೆಪಿ ನಡೆಸುತ್ತದೆ ಎಂದು ಮಡಿಕೇರಿಯಲ್ಲಿ ಸಾಬೀತಾಗಿದೆ ಎಂದು ಕಿಡಿಕಾರಿದ್ದಾರೆ. ಬಿಜೆಪಿ ವಿರುದ್ಧ ಕಿಡಿಕಾರಿರುವ ಸಿದ್ದರಾಮಯ್ಯ, 'ಮೊಟ್ಟೆ ಎಸೆದ ವ್ಯಕ್ತಿ ಕಾಂಗ್ರೆಸ್ ಕಾರ್ಯಕರ್ತನಾಗಿದ್ದರೆ ಬಿಜೆಪಿ ಶಾಸಕ ಅಪ್ಪಚ್ಚು ರಂಜನ್ ರಾತ್ರೋರಾತ್ರಿ ಪೊಲೀಸ್ ಠಾಣೆಗೆ ಹೋಗಿ ಬಿಡಿಸಿಕೊಂಡು ಯಾಕೆ ಬರಬೇಕಾಗಿತ್ತು? ಕಾಂಗ್ರೆಸ್‌ನವನೆಂದು ಹೇಳಿಕೊಂಡರೆ ಮಾತ್ರ ಪೊಲೀಸರಿಂದ ಬಿಡಿಸ್ತೇನೆ ಎಂದು ಷರತ್ತು ಹಾಕಿ ಬಿಡುಗಡೆ ಮಾಡಿದಿರಾ?.. 'ಆಪರೇಷನ್ ಕಮಲ' ಎಂದರೆ ಶಾಸಕರಿಗೆ ಮಾತ್ರ ಎಂದು ತಿಳಿದುಕೊಂಡಿದ್ದೆವು. ಈಗ ಬೀದಿ ಪುಂಡರ 'ಆಪರೇಷನ್ ಕಮಲ' ಕೂಡ ಬಿಜೆಪಿ ನಡೆಸುತ್ತದೆ ಎಂದು ಮಡಿಕೇರಿಯಲ್ಲಿ ಸಾಬೀತಾಗಿದೆ ಎಂದು ಹೇಳಿದ್ದಾರೆ. ಬಿಜೆಪಿಯ ಇಂತಹ ನಾಟಕಗಳೆಲ್ಲ ಹಳತಾಗಿದೆ. ಮೊಟ್ಟೆ ಎಸೆದವ ಕಾಂಗ್ರೆಸ್ ಪಕ್ಷದವನಾಗಿದ್ದರೆ ಅವನನ್ನು ಮೊದಲು ಜೈಲಿಗೆ ಕಳಿಸಿ. ನಿಮಗ್ಯಾಕೆ ಅವನ ಹಿತರಕ್ಷಣೆಯ ಉಸಾಬರಿ ಎಂದು ಕಿಡಿಕಾರಿದ್ದಾರೆ.

ಸಾಲದ ಹಣ ಕೇಳಿದ ಸ್ನೇಹಿತನ ಹತ್ಯೆ: ಇಬ್ಬರಿಗೆ ಜೀವಾವಧಿ ಶಿಕ್ಷೆ ■ ಪುಟ–4

ರಾಜೀನಾಮೆಗೂ ಒಂದು ಗೌರವ ತಂದುಕೊಟ್ಟವರು ಅರಸು!

● ಮಾಜಿ ಸ್ಪೀಕರ್ ರಮೇಶ್‌ಕುಮಾರ್ ಪ್ರಶಂಸೆ ● ಲೋಕಸಭಾ ಚುನಾವಣೆಯಲ್ಲಿ ತಮ್ಮ ಪಕ್ಷದ ಹಿನ್ನಡೆಯ ನೈತಿಕ ಹೊಣೆ ಹೊತ್ತು ಅರಸು ರಾಜೀನಾಮೆ ದಿಟ್ಟತನಕ್ಕೆ ಶರಣು



ಮೈಸೂರು, ಆ.20(ಎಂಟಿವೈ)– ಲೋಕಸಭಾ ಚುನಾವಣೆಯಲ್ಲಿ ತನ್ನ ಪಕ್ಷಕ್ಕೆ ಹಿನ್ನಡೆಯಾದ ಕಾರಣ ಡಿ.ದೇವರಾಜ ಅರಸ್ ಅವರು ಹಿಂದೆ ಮುಂದೆ ನೋಡದೆ, ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡುವ ಮೂಲಕ ರಾಜೀನಾಮೆಯ ಮಹತ್ವವನ್ನೇ ಉತ್ತುಂಗಕ್ಕೆ ಏರಿಸಿದ್ದರು. ಆದರೆ ಇಂದು ಅಧಿಕಾರಕ್ಕಾಗಿ ಹಪಹಪಿಸುತ್ತಿರುವ ಜನಪ್ರತಿನಿಧಿಗಳು ಎಫ್‌ಐಆರ್ ದಾಖಲಾದರೂ ರಾಜೀನಾಮೆ ನೀಡುವುದಿಲ್ಲ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಮಾಜಿ ಸ್ಪೀಕರ್ ಕೆ.ಆರ್.ರಮೇಶ್ ಕುಮಾರ್ ವಿಷಾದಿಸಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ರಾಣಿ ಬಹದ್ದೂರ್ ಸಭಾಂಗಣದಲ್ಲಿ ದೇವರಾಜ ಅರಸು ಪ್ರತಿಷ್ಠಾನ ಸಮಿತಿ ವತಿಯಿಂದ ಆಯೋಜಿಸಿದ್ದ ಡಿ.ದೇವರಾಜ ಅರಸ್ ಜನ್ಮದಿನದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇವರಾಜ ಅರಸ್ ಅವರು ಸ್ವಾಭಿಮಾನದ ಸಂಕೇತ. ಅವರು ಎಂದಿಗೂ ಅಧಿಕಾರದ ವ್ಯಾಮೋಹಿಯೂ, ಭ್ರಷ್ಟಾಚಾರಿಯೂ ಆಗಿರಲಿಲ್ಲ. ಅವರ ಜೀವಿತಾವಧಿ ಸೇರಿದಂತೆ ಚಿತೆ ಮೇಲೆ ಮಲಗುವವರೆಗೂ ಭ್ರಷ್ಟಾಚಾರಕ್ಕೆ ಅವಕಾಶ ನೀಡಲಿಲ್ಲ. ಆದರೆ ಕೆಲವರು ಅವರನ್ನು ಭ್ರಷ್ಟಾಚಾರಿ ಎಂದು ಜರಿದರು. ದೊಡ್ಡ ಜಾತಿಗೂ ಸೇರಿದವರಲ್ಲದಿದ್ದರೂ, ಕೋಟಿಗಟ್ಟಲೇ ದುಡ್ಡು ಇರದಿದ್ದರೂ ಜನರು ಅವರನ್ನು ಗೆಲ್ಲಿಸಿದರು. ಅಧಿಕಾರದಲ್ಲಿದ್ದಾಗ ಹೆಂಡತಿ–ಮಕ್ಕಳಿಗೂ ಆಸ್ತಿ ಮಾಡಲಿಲ್ಲ. ತಾವು ಅಧಿಕಾರದಲ್ಲಿದ್ದಾಗ ನಡೆದ ಲೋಕಸಭಾ ಚುನಾವಣೆಯಲ್ಲಿ ತಮ್ಮ ಪಕ್ಷಕ್ಕೆ ಹಿನ್ನಡೆಯಾಯಿತು ಎಂಬ ಒಂದೇ ಕಾರಣಕ್ಕೆ ಯಾರಿಗೂ ಹೇಳದೇ–ಕೇಳದೇ ಒಂದು ▶ 6ನೇ ಪುಟಕ್ಕೆ

ಅಂದು ನಾನೇ ಅನರ್ಹ ಮಾಡಿದ್ದವರ ಇಂದು ಪುರಸ್ಕರಿಸುತ್ತಿದ್ದೇನೆ!


ನನ್ನ ದುರದೃಷ್ಟವೋ ಏನೋ? ನಾನು ಸ್ಪೀಕರ್ ಆಗಿದ್ದ ವೇಳೆ ಕೆಲವು ಕಠಿಣ ನಿರ್ಧಾರ ಕೈಗೊಳ್ಳಬೇಕಾಯಿತು. ಕಾನೂನಿನ ಚೌಕಟ್ಟಿನಲ್ಲಿ ಕಾರ್ಯನಿರ್ವಹಿಸುವಾಗ, ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಪಕ್ಷಾಂತರ ನಿಷೇಧ ಕಾಯ್ದೆಗೆ ತುತ್ತಾಗಿದ್ದ ಅಡಗೂರು ಹೆಚ್.ವಿಶ್ವನಾಥ್ ಅವರನ್ನು ನಾನು ಸ್ಪೀಕರ್ ಆಗಿದ್ದ ವೇಳೆ ಅನರ್ಹಗೊಳಿಸಬೇಕಾದ ಸಂದರ್ಭ ಒದಗಿ ಬಂದಿತ್ತು. ಆದರೆ ಇಂದು ನಾನು ಅವರನ್ನು ಸನ್ಮಾನಿಸುತ್ತಿದ್ದೇನೆ. ಅಂದಿನಿಂದ ನಾನು ಮತ್ತು ವಿಶ್ವನಾಥ್ ಅವರು ನೂರಾರು ಬಾರಿ ಮುಖಾಮುಖಿಯಾಗಿದ್ದೇವೆ. ಅನರ್ಹಗೊಳಿಸಿದೆ ಎಂಬ ಕಾರಣಕ್ಕೆ ಅವರು ಎಂದಿಗೂ ನನ್ನ ಮೇಲೆ ಮುನಿಸು ವ್ಯಕ್ತಪಡಿಸಿಲ್ಲ. ನನ್ನ ವಿರುದ್ಧ ಬೇಸರ ವ್ಯಕ್ತಪಡಿಸಿಲ್ಲ. ನಾವಿಬ್ಬರು ದೇವರಾಜ ಅರಸ್ ಅವರ ಶಿಷ್ಯಂದಿರೇ ಆಗಿದ್ದೇವೆ. ಹಾಗಾಗಿ ಅವರು ನನ್ನ ವಿರುದ್ಧ ಮಾತನಾಡಿಲ್ಲ ಎಂದು ಮಾಜಿ ಸ್ಪೀಕರ್ ರಮೇಶ್‌ಕುಮಾರ್ ವಿವರಿಸಿದರು.

ಪ್ರಾಮಾಣಿಕತೆ ಬಗ್ಗೆ ಮಾತನಾಡುವವರನ್ನು ಹುಚ್ಚರಂತೆ ಕಾಣ್ತಾರೆ

● ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗಡೆ ವಿಷಾದ ● ಇವನೂ ತಿನ್ನಲ್ಲ... ತಿನ್ನೋರಿಗೂ ಬಿಡೋದಿಲ್ಲ ಅಂತ ಲೇವಡಿ ಮಾಡ್ತಾರೆ ● ಕಾನೂನು ಮೂಲಕವೂ ಭ್ರಷ್ಟಾಚಾರ ಹತ್ತಿಕ್ಕಲಾಗದು ಎಂಬುದಕ್ಕೆ ಚೀನಾ ಉದಾಹರಣೆ ಕೊಟ್ಟ ನ್ಯಾಯಮೂರ್ತಿ

ಮೈಸೂರು,ಆ.20(ಎಂಟಿವೈ)– ಪ್ರಸ್ತುತ, ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಭ್ರಷ್ಟಾಚಾರವೂ ಸೇರಿದಂತೆ ಅನೀತಿಯ ಪರಿಸ್ಥಿತಿಗೆ ಸಮಾಜವೇ ಕಾರಣ ಎಂದು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ ಹೆಗಡೆ ವಿಷಾದಿಸಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಶನಿವಾರ ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾಪನ ಸಮಿತಿ ವತಿಯಿಂದ ಏರ್ಪಡಿಸಿದ್ದ ಡಿ.ದೇವರಾಜ ಅರಸು ಜನ್ಮದಿನೋತ್ಸವ ಹಾಗೂ 'ಅರಸು ಆದರ್ಶ ಭೂಷಣ' ಪ್ರಶಸ್ತಿ ಪ್ರದಾನ ಸಮಾರಂಭ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಈ ಹಿಂದೆ ಅಪರಾಧ ಮಾಡಿದವರನ್ನು, ಜೈಲಿಗೆ ಹೋಗಿ ಬಂದವರನ್ನು ಜನರು ದೂರವಿಡುತ್ತಿದ್ದರು. ಇಂತಹ ಬೆಳವಣಿಗೆಯಿಂದ ಜನರು ತಪ್ಪು ಮಾಡಲು ಹೆದರುತ್ತಿದ್ದರು. ಆದರೆ ಈಗ ಜೈಲಿಗೆ ಹೋಗಿ ಜಾಮೀನಿನ ಮೇಲೆ ಬಿಡುಗಡೆಯಾಗಿ ಬಂದವರನ್ನು ಹಾರ ಹಾಕಿ ಸ್ವಾಗತಿಸಿ ಮೆರವಣಿಗೆ ಮಾಡಲಾಗುತ್ತಿದೆ. ನಾವು ಇಂದು ಅಧಿಕಾರ ಹಾಗೂ ಶ್ರೀಮಂತಿಕೆಯನ್ನು ರೂಪಿಸುವಂತಹ ಸಮಾಜದಲ್ಲಿ ಜೀವನ ನಡೆಸುತ್ತಿದ್ದೇವೆ ಅವೆರಡೂ ಹೇಗೆ ಬಂದವು ಎನ್ನುವುದನ್ನೂ ಯಾರು ಗಮನಿಸುವುದಿಲ್ಲ. ಪ್ರಾಮಾಣಿಕತೆಗೆ ಬೆಲೆ ಇಲ್ಲದಂತಾಗಿದೆ. ▶ 6ನೇ ಪುಟಕ್ಕೆ



ಮೈಸೂರು ವಿಶ್ವವಿದ್ಯಾನಿಲಯದ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಶನಿವಾರ ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾಪನ ಸಮಿತಿ ವತಿಯಿಂದ ಏರ್ಪಡಿಸಿದ್ದ ಡಿ.ದೇವರಾಜ ಅರಸು ಜನ್ಮದಿನೋತ್ಸವ ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್, ಅರಗು ಮತ್ತು ಬಣ್ಣದ ಕಾರ್ಖಾನೆಯ ಅಧ್ಯಕ್ಷ ರಘು ಆರ್.ಕೌಟಿಲ್ಯ ಅವರಿಗೆ 'ಅರಸು ಆದರ್ಶಭೂಷಣ ಪ್ರಶಸ್ತಿ'ಯನ್ನು ಪ್ರದಾನ ಮಾಡಲಾಯಿತು. ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ ಹೆಗಡೆ, ಮಾಜಿ ಸ್ಪೀಕರ್ ಕೆ.ಆರ್.ರಮೇಶ್‌ಕುಮಾರ್, ಕುಲಪತಿ ಪ್ರೊ.ಜಿ.ಹೇಮಂತಕುಮಾರ್, ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾನ ಸಮಿತಿಯ ಅಧ್ಯಕ್ಷ ಜಾಕೀರ್ ಹುಸೇನ್ ಹಾಗೂ ಇನ್ನಿತರರನ್ನು ಕಾಣಬಹುದು.

'ಮಹಾರಾಜ ಟ್ರೋಫಿ' ಕೆಎಸ್‌ಸಿಎ ಟಿ20 ಪಂದ್ಯಾವಳಿ

ಶಿವಮೊಗ್ಗ ಸ್ಟ್ರೈಕರ್ಸ್, ಬೆಂಗಳೂರು ಬ್ಲಾಸ್ಟರ್ಸ್‌ಗೆ ಜಯ



ಬೆಂಗಳೂರು, ಆ.20- ಇಲ್ಲಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ 'ಮಹಾರಾಜ ಟ್ರೋಫಿ' ಕೆಎಸ್‌ಸಿಎ ಟಿ20 ಪಂದ್ಯಾವಳಿಯಲ್ಲಿ ಮಂಗಳೂರು ಯುನೈಟೆಡ್ ವಿರುದ್ಧ ಶಿವಮೊಗ್ಗ ಸ್ಟ್ರೈಕರ್ಸ್ ಹಾಗೂ ಮೈಸೂರು ವಾರಿಯರ್ಸ್ ವಿರುದ್ಧ ಬೆಂಗಳೂರು ಬ್ಲಾಸ್ಟರ್ಸ್ ಭರ್ಜರಿ ಜಯ ಗಳಿಸಿದೆ.

ಶಿವಮೊಗ್ಗ ಸ್ಟ್ರೈಕರ್ಸ್‌ಗೆ ಜಯ: ಬ್ಯಾಟಿಂಗ್ ಮತ್ತು ಬೌಲಿಂಗ್‌ನಲ್ಲಿ ಮಿಂಚಿದ ಶಿವಮೊಗ್ಗ ಸ್ಟ್ರೈಕರ್ಸ್, ಮಂಗಳೂರು ಯುನೈಟೆಡ್ ವಿರುದ್ಧ 8 ವಿಕೆಟ್‌ಗಳ ಜಯ ಗಳಿಸಿದೆ. ಈ ಮೂಲಕ ಟೂರ್ನಿಯಲ್ಲಿ 2ನೇ ಗೆಲುವು ಸಾಧಿಸಿದೆ.

137 ರನ್ ಗುರಿ ಬೆನ್ನತ್ತಿದ್ದ ಶಿವಮೊಗ್ಗ ಸ್ಟ್ರೈಕರ್ಸ್ ತಂಡದ ನಾಯಕ ಕೃಷ್ಣಪ್ಪ ಗೌತಮ್ ಹಾಗೂ ಸ್ಟಾಲಿನ್ ಹೂವರ್ ಅವರ ಆಕರ್ಷಕ ಅರ್ಧ ಶತಕದ ನೆರವಿನಿಂದ 2 ವಿಕೆಟ್ ಕಳೆದುಕೊಂಡು ಇನ್ನೂ 46 ಎಸೆತಗಳು ಬಾಕಿ ಇರುವಾಗಲೇ ಜಯ ಗಳಿಸಿತು. ನಾಯಕನ ಆಟವಾಡಿದ ಕೆ.ಗೌತಮ್ ಕೇವಲ 35 ಎಸೆತಗಳಲ್ಲಿ 7 ಬೌಂಡರಿ, 4 ಸಿಕ್ಸರ್ ಸಹಿತ 72 ರನ್ ಸಿಡಿಸಿದರೆ, ಸ್ಟಾಲಿನ್ ಹೂವರ್ 35 ಎಸೆತಗಳಲ್ಲಿ 3 ಬೌಂಡರಿ ಹಾಗೂ 4 ಸಿಕ್ಸರ್ ಸಹಿತ ಅಜೇಯ 53 ರನ್ ಬಾರಿಸಿ ತಂಡಕ್ಕೆ ಜಯ ತಂದಿತ್ತರು. ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮಂಗಳೂರು ಯುನೈಟೆಡ್ ತಂಡದ ನಿಕಿನ್ ಜೋಸ್ (38) ಹಾಗೂ ಅಭಿನವ್ ಮನೋಹರ್ (36) ಹೊರತುಪಡಿಸಿದರೆ ಉಳಿದ ಆಟಗಾರರು ರನ್ ಗಳಿಸುವಲ್ಲಿ ವಿಫಲರಾದರು. ಅಂತಿಮವಾಗಿ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 136 ರನ್ ಗಳಿಸಲಷ್ಟೇ ಶಕ್ತವಾಯಿತು. ಶಿವಮೊಗ್ಗ ಪರ ಕೆ.ಗೌತಮ್, ಕಾರಿಯಪ್ಪ ಡಿ.ಅವಿನಾಶ್ ತಲಾ 2 ವಿಕೆಟ್ ಪಡೆದು ಗಮನ ಸೆಳೆದರು. ಆಲ್ ರೌಂಡರ್ ಪ್ರದರ್ಶನ ನೀಡಿದ ಕೆ.ಗೌತಮ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಬೆಂಗಳೂರು ಬ್ಲಾಸ್ಟರ್ಸ್ ಗೆಲುವು: ಸಂಜೆ ನಡೆದ ಪಂದ್ಯದಲ್ಲಿ ಮೈಸೂರು ವಾರಿಯರ್ಸ್ ವಿರುದ್ಧ ಬೆಂಗಳೂರು ಬ್ಲಾಸ್ಟರ್ಸ್ 23 ರನ್‌ಗಳ ಗೆಲುವು ದಾಖಲಿಸಿತು. ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಬೆಂಗಳೂರು ಬ್ಲಾಸ್ಟರ್ಸ್ ತಂಡದ ಜೆ.ಸುಚಿತ್ 40 ರನ್, ಮಯಾಂಕ್ ಅಗರ್ವಾಲ್ 31, ಎಲ್.ಆರ್. ಚೇತನ್ 29, ಕೆ.ವಿ.ಅನೀಶ್ 23 ರನ್‌ಗಳ ಕೊಡುಗೆ ನೀಡಿದರು. ಅಂತಿಮವಾಗಿ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 157 ರನ್ ಗಳಿಸಿತು. ಮೈಸೂರು ವಾರಿಯರ್ಸ್ ಪರ ಶ್ರೇಯಸ್ ಗೋಪಾಲ್ 3 ವಿಕೆಟ್ ಪಡೆದು ಗಮನ ಸೆಳೆದರು.

158 ರನ್‌ಗಳ ಗೆಲುವಿನ ಗುರಿ ಪಡೆದ ಮೈಸೂರು ವಾರಿಯರ್ಸ್‌ಗೆ ಆರಂಭದಲ್ಲಿಯೇ ನಿರಾಸೆ ಎದುರಾಯಿತು. ನಾಯಕ ಕರುಣ್ ನಾಯರ್ 0, ನಿಹಾಲ್ ಉಳ್ಳಾಲ್ 0, ನಿತಿನ್ ಭಿಲ್ಲೆ 3 ರನ್‌ಗಳಿಸಿ ಪೆವಿಲಿಯನ್ ಸೇರಿದರು. ಅನುಭವಿ ಆಲ್ ರೌಂಡರ್ ಶ್ರೇಯಸ್ ಗೋಪಾಲ್(50) ಅಂತಿಮ ಹಂತದವರೆಗೂ ಏಕಾಂಗಿ ಹೋರಾಟ ನಡೆಸಿದರಾದರೂ ಗೆಲುವು ಸಾಧ್ಯವಾಗಲಿಲ್ಲ. ಅಂತಿಮವಾಗಿ ಮೈಸೂರು ವಾರಿಯರ್ಸ್ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 134 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಬೆಂಗಳೂರು ಬ್ಲಾಸ್ಟರ್ಸ್ ಪರ ರಿಷಿ ಬೋಪಣ್ಣ 3, ಜಗದೀಶ್ ಸುಚಿತ್, ರೋನಿತ್ ಮೋರೆ ಹಾಗೂ ಸಂತೋಕ್ ಸಿಂಗ್ ತಲಾ 2 ವಿಕೆಟ್ ಕಬಳಿಸಿದರು.

ಇಂದಿನ ಪಂದ್ಯಗಳು...

ಸಮಯ ಮಧ್ಯಾಹ್ನ 3ಕ್ಕೆ
ಗುಲ್ಬರ್ಗ ಮೈಸ್ಟಿಕ್ಸ್ / ಮೈಸೂರು ವಾರಿಯರ್ಸ್
ಸಮಯ ಸಂಜೆ 7ಕ್ಕೆ
ಬೆಂಗಳೂರು ಬ್ಲಾಸ್ಟರ್ಸ್/ಹುಬ್ಬಳ್ಳಿ ಟೈಗರ್ಸ್

ವಿಶ್ವ ಸಂಸ್ಥೆಗೂ ಮಿಗಿಲಾದ ಪ್ರಶಸ್ತಿ

ಡಿ.ದೇವರಾಜ ಅರಸು ಪ್ರಶಸ್ತಿ ಸ್ವೀಕರಿಸಿದ ಎ.ಹೆಚ್.ವಿಶ್ವನಾಥ್ ಭಾವುಕ ನುಡಿ



ಮೈಸೂರು, ಆ. 20(ಆರ್‌ಕೆ)- ಶೋಷಿತರ ಅಭಿವೃದ್ಧಿ ಹರಿಕಾರರು, ನನ್ನ ನೆಚ್ಚಿನ ಗುರುಗಳಾದ ಮಾಜಿ ಮುಖ್ಯಮಂತ್ರಿ ದಿ. ಡಿ. ದೇವರಾಜ ಅರಸು ಅವರ ಹೆಸರಿನಲ್ಲಿ ನನಗೆ ನೀಡಿರುವ ಪ್ರಶಸ್ತಿಯು ವಿಶ್ವಸಂಸ್ಥೆ ನೀಡುವ ಪ್ರಶಸ್ತಿಗೂ ಮಿಗಿಲಾದ ಪ್ರಶಸ್ತಿ ಎಂದು ವಿಧಾನಪರಿಷತ್ ಸದಸ್ಯ ಎ.ಹೆಚ್. ವಿಶ್ವನಾತ್ ಭಾವುಕ ನುಡಿಗಳನ್ನಾಡಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಏರ್ಪಡಿಸಿದ್ದ ಡಿ. ದೇವರಾಜ ಅರಸುರವರ 107ನೇ ಜನ್ಮದಿನಾಚರಣೆ ಸಮಾರಂಭದಲ್ಲಿ ಪ್ರದಾನ ಮಾಡಿದ ಜಿಲ್ಲಾ ಮಟ್ಟದ ಡಿ. ದೇವರಾಜ ಅರಸು ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, ಇದು ಜಿಲ್ಲಾ ಮಟ್ಟದ ಅರಸು ಹೆಸರಿನಲ್ಲಿ ನೀಡಿರುವ ಪುರಸ್ಕಾರ. ವಿಶ್ವಸಂಸ್ಥೆ ನೀಡುವ ಪ್ರಶಸ್ತಿಗಿಂತಲೂ ನನಗೆ ಮೇಲು ಎಂದರು.

ವಕೀಲನಾಗಿ, ಶಾಸಕ, ಸಂಸದ, ಸಚಿವನಾಗಿ ಸೇವೆ ಸಲ್ಲಿಸಿದ ಮೈಸೂರಲ್ಲಿ, ಆಟವಾಡಿ, ಪಾಠ ಕೇಳಿದ ಊರಲ್ಲಿ ನಿಮ್ಮೆಲ್ಲರ ಸಮ್ಮುಖದಲ್ಲಿ ನೀಡಿರುವ ಈ ಪ್ರಶಸ್ತಿಯು ಡಿ. ದೇವರಾಜ ಅರಸುರವರಿಗೆ ಸಮರ್ಪಣೆ ಎಂದು ಭಾವುಕರಾದ ವಿಶ್ವನಾಥ್, 1978ರಲ್ಲಿ ಮುಖ್ಯಮಂತ್ರಿಯಾಗಿದ್ದ ಅರಸು, ನನಗೆ ಕೆ.ಆರ್. ನಗರದಿಂದ ಸ್ಪರ್ಧಿಸಲು ಮೊಟ್ಟ ಮೊದಲು ಟಿಕೆಟ್ ನೀಡಿದಾಗ ನಾನು 10,000 ಮತಗಳ ಅಂತರದಿಂದ ಗೆದ್ದು ಶಾಸಕನಾದ ಅವಿಸ್ಮರಣೀಯ ಕ್ಷಣವನ್ನು ಸ್ಮರಿಸಿದರು.

ಕಲ್ಯಾಣ ಗುಣ, ನಡವಳಿಕೆ, ಮೇರು ವ್ಯಕ್ತಿತ್ವ, ಸೌಜನ್ಯ, ಸಹನೆಯ ಸಾಕಾರ ಮೂರ್ತಿಗಳಾಗಿದ್ದ ಅರಸು, ಮುಖ್ಯಮಂತ್ರಿಗಳಾದರೂ ಯಾರನ್ನೂ ಏಕವಚನದಿಂದ ಕರೆಯುತ್ತಿರಲಿಲ್ಲ. ರಾಜಪ್ರಭುತ್ವ, ಪ್ರಜಾಪ್ರಭುತ್ವ ಕಂಡಿದ್ದ ಅವರು, ಜನರಿಗಾಗಿ ಹಲವು ಕಲ್ಯಾಣ ಕಾರ್ಯಕ್ರಮಗಳನ್ನು ನೀಡಿದ್ದರು. ಜನ ನೀಡಿದ ಅಧಿಕಾರವನ್ನು ಸಮಾಜದ ಒಳಿತಿಗಾಗಿ ಬಳಸಿದ್ದರು. ಈಗ ಜಾತಿ ರಾಜಕಾರಣದ ಪ್ರಭುತ್ವವನ್ನು ನಾವು ನೋಡುತ್ತಿದ್ದೇವೆ ಎಂದು ವಿಷಾದಿಸಿದರು.

ಪಕ್ಷ ಬದಲಾಯಿಸಿದೆನೆಂದು ನನ್ನ ಬಗ್ಗೆ ಈಗ ಮಾತನಾಡುತ್ತಾರೆ. ಆದರೆ ಕಾಂಗ್ರೆಸ್ ತಾಯಿ ಇದ್ದಂತೆ. ನನ್ನ ಜೆಂಡಾ ಬದಲಾಗಿರಬಹುದು ಅಜೆಂಡಾ ಎಂದಿಗೂ ಬದಲಾಗುವುದಿಲ್ಲ ಎಂದ ಅವರು, ಅರಸು ಅವರ ಪ್ರಶಸ್ತಿಗೆ ಆಯ್ಕೆ ಮಾಡಿ ಗೌರವಿಸಿದ ಸರ್ಕಾರ, ಜಿಲ್ಲಾ ಮಂತ್ರಿ ಹಾಗೂ ಜಿಲ್ಲಾಡಳಿತಕ್ಕೆ ಹೃದಯಪೂರ್ವಕ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಎನಗೆ ನಗು ಬರುತ್ತಿದೆ...! ಅರಸು ಬೆನ್ನಿಗೆ ಚೂರಿ ಹಾಕಿದವರಿಗೇ ಅರಸು ಹೆಸರಲ್ಲಿ ಪ್ರಶಸ್ತಿ...!

- ಸಂಸದ ಶ್ರೀನಿವಾಸ್ ಪ್ರಸಾದರ ವ್ಯಂಗೋಕ್ತಿ
- ಎಂಎಲ್‌ಸಿ ವಿಶ್ವನಾಥ್‌ರಿಗೆ ಪರೋಕ್ಷ ಟಾಂಗ್



ನಂಜನಗೂಡು, ಆ.20-ಸಾಮಾಜಿಕ ನ್ಯಾಯದ ಹರಿಕಾರ ಡಿ.ದೇವರಾಜ ಅರಸು ಜೊತೆಯಲ್ಲೇ ಇದ್ದುಕೊಂಡು ರಾತ್ರೋ ರಾತ್ರಿ ಅವರ ಬೆನ್ನಿಗೆ ಚೂರಿ ಹಾಕಿದವರಿಗೆ ದೇವರಾಜ ಅರಸು ಹೆಸರಿನಲ್ಲೇ ಪ್ರಶಸ್ತಿ ಕೊಡುತ್ತಿರುವುದನ್ನು ನೋಡಿದರೆ ನಗು ಬರುತ್ತಿದೆ ಎಂದು ಚಾಮರಾಜನಗರ ಸಂಸದ ವಿ.ಶ್ರೀನಿವಾಸ ಪ್ರಸಾದ್ ಲೇವಡಿ ಮಾಡಿದರು.

ನಂಜನಗೂಡಿನ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಶನಿವಾರ ನಡೆದ ಮಾಜಿ ಸಿಎಂ ದಿವಂಗತ ಡಿ.ದೇವರಾಜ ಅರಸು ಅವರ 107ನೇ ಜನ್ಮ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮೈಸೂರು ಜಿಲ್ಲಾಡಳಿತದ ವತಿಯಿಂದ ದೇವರಾಜ ಅರಸು ಒಡನಾಡಿಯಾಗಿದ್ದ ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಅವರಿಗೆ ಇಂದು 'ಡಿ.ದೇವರಾಜ ಅರಸು ಪ್ರಶಸ್ತಿ' ಪ್ರದಾನ ಮಾಡಿರುವುದನ್ನು ಪರೋಕ್ಷವಾಗಿ ಉಲ್ಲೇಖಿಸಿ, ವಿಶ್ವನಾಥ್ ಅವರ ಹೆಸರನ್ನು ಪ್ರಸ್ತಾಪಿಸಿ ನಸು ನಕ್ಕು, 'ಏನು ಮಾಡುವುದು ರಾಜಕೀಯ ಅದೆಲ್ಲಾ ನಡೆಯುತ್ತದೆ' ಎಂದು ಬೇಸರ ವ್ಯಕ್ತಪಡಿಸಿದರು. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾರಿಗೆ ಮೊಟ್ಟೆ ಎಸೆದಿರುವುದನ್ನು ಖಂಡಿಸಿದ ಅವರು, ರಾಜಕೀಯವಾಗಿ ಏನೇ ವಿರೋಧಗಳಿರಲಿ ಅದಕ್ಕಾಗಿ ಪ್ರತಿಭಟನೆ ವ್ಯಕ್ತಪಡಿಸಲು ಹಲವಾರು ದಾರಿಗಳಿವೆ. ಹಾಗಿರುವಾಗ ಸಾಂವಿಧಾನಿಕ ಹುದ್ದೆಯಲ್ಲಿರುವವರಿಗೆ ಈ ರೀತಿ ಅವಮಾನ ಮಾಡುವುದು ಸರಿಯಲ್ಲ. ಅದನ್ನು ಒಪ್ಪಲು ಸಾಧ್ಯವೇ ಇಲ್ಲ. ಇಂತಹ ವರ್ತನೆಗಳಿಂದ ಸಮಾಜದಲ್ಲಿ ಅಶಾಂತಿ ಉಂಟಾಗುತ್ತದೆ ಎಂದರು.

ಡಿ.ದೇವರಾಜ ಅರಸು ಅವರು ಮುಖ್ಯಮಂತ್ರಿಗಳಾಗಿದ್ದಾಗ 1972ರಲ್ಲಿ ದಲಿತ ಸಮುದಾಯಕ್ಕೆ ಸೇರಿದ ವೈದ್ಯರೊಬ್ಬರ ಹತ್ಯೆಯಾಗಿತ್ತು. ಆ ಸಂದರ್ಭದಲ್ಲಿ ಕೆ.ಆರ್.ಆಸ್ಪತ್ರೆಯ ವೈದ್ಯರು ಮರಣೋತ್ತರ ಪರೀಕ್ಷಾ ವರದಿಯನ್ನು ತಿರುಚಲು ಪ್ರಯತ್ನಿಸಿದ್ದರು ಎಂಬ ಮಾತುಗಳು ಕೇಳಿ ಬಂದಿತ್ತು. ಆ ವೇಳೆ ಅಶೋಕಪುರಂನ ದಲಿತರೆಲ್ಲರೂ ಸಿದ್ಧಾರ್ಥ ಹಾಸ್ಟೆಲ್‌ಗೆ ಆಗಮಿಸಲಿದ್ದ ಅರಸು ಅವರ ವಿರುದ್ಧ ಭಾರೀ ಪ್ರತಿಭಟನೆ ಮಾಡಲು ಸಿದ್ಧತೆ ಮಾಡಿಕೊಂಡಿದ್ದರು. ಆಗ ಎಸ್ಪಿಯಾಗಿದ್ದ ದಿನಕರನ್ ಅವರು ಪ್ರತಿಭಟನೆ ಬೇಡ ಮನವಿ ಕೊಡಿ ಸಾಕು ಎಂದು ಕೇಳಿಕೊಂಡ ಮೇರೆಗೆ ನಾನೇ ಅರಸು ಅವರಿಗೆ ಮನವಿ ಪತ್ರವನ್ನು ಸಲ್ಲಿಸಿದೆ. ಆಗ ಅವರು ಸಂಬಂಧಪಟ್ಟ ಕೆ.ಆರ್.ಆಸ್ಪತ್ರೆ ವೈದ್ಯರನ್ನು ಕರೆಸಿ ಮರಣೋತ್ತರ ಪರೀಕ್ಷೆ ವರದಿ ನೈಜತೆಯಿಂದ ಕೂಡಿರಬೇಕು ಎಂದು ತಾಕೀತು ಮಾಡಿದರಲ್ಲದೇ ತಾವು ಸಾಮಾಜಿಕ ನ್ಯಾಯದ ಪರ ಇರುವುದನ್ನು ಮನವರಿಕೆ ಮಾಡಿದರು ಎಂದು ತಿಳಿಸಿದ ಪ್ರಸಾದ್, ಎಂತಹ ಸಮಸ್ಯೆಯಾದರೂ ಅದನ್ನು ಶಾಂತಿಯುತವಾಗಿಯೇ ಬಗೆಹರಿಸಿಕೊಳ್ಳಬಹುದು ಎಂಬುದಕ್ಕೆ ಇದೂ ಒಂದು ಉದಾಹರಣೆ ಎಂದು ತಿಳಿಸಿದರು.

ಜೊತೆ ಜೊತೆಯಲಿ ಕಿರುತೆರೆಯಿಂದಲೇ ಅನಿರುದ್ಧ್‌ಗೆ ಗೇಟ್ ಪಾಸ್?

ಬೆಂಗಳೂರು: ಜೀ ಕನ್ನಡದಲ್ಲಿ ಪ್ರಸಾರವಾಗುತ್ತಿರುವ 'ಜೊತೆ ಜೊತೆಯಲಿ' ಧಾರಾವಾಹಿ ಸೆಟ್‌ನಲ್ಲಿ ನಡೆದ ಫೈಟಿಂಗ್ ಕಥೆಗೆ ಇದೀಗ ಟ್ವಿಸ್ಟ್ ಸಿಕ್ಕಿದೆ. ನಟ ಅನಿರುದ್ಧ್‌ಗೆ ಧಾರಾವಾಹಿಯಿಂದಲೇ ಗೇಟ್ ಪಾಸ್ ನೀಡಲಾಗಿದೆ. ಅನಿರುದ್ಧ್ ವಿರುದ್ಧ ದಾಖಲಾದ ದೂರಿನ ಹಿನ್ನೆಲೆ ಅವರನ್ನು ಕೇವಲ ಧಾರಾವಾಹಿಯಿಂದ ಮಾತ್ರವಲ್ಲ, ಕಿರುತೆರೆಯಿಂದಲೇ ಅವರನ್ನು ಬ್ಯಾನ್ ಮಾಡಲಾಗಿದೆ ಎಂದು ಹೇಳಲಾಗಿದೆ.



ಜೊತೆ ಜೊತೆಯಲ್ಲಿ ಸೆಟ್‌ನಲ್ಲಿ ಅನಿರುದ್ಧ್ ಮಾಡುತ್ತಿದ್ದ ಕಿರಿಕಿರಿಯಿಂದ ಇಡೀ ತಂಡವೇ ಬೇಸತ್ತು ಹೋಗಿತ್ತು. ಹೀಗಾಗಿ ಅನಿರುದ್ಧ್ ವಿರುದ್ಧ ನಿರ್ಮಾಪಕರ ಸಂಘಕ್ಕೆ ದೂರು ನೀಡಲಾಗಿತ್ತು. ಈ ಕುರಿತು ಸಭೆ ಕೂಡ ನಡೆದಿದ್ದು, ಸಭೆಯ ನಿರ್ಧಾರದಂತೆ ಅನಿರುದ್ಧ್‌ರನ್ನು ಸೀರಿಯಲ್‌ನಿಂದ ಮಾತ್ರವಲ್ಲ ಕಿರುತೆರೆಯಿಂದಲೇ ಬ್ಯಾನ್ ಮಾಡಲಾಗಿದೆಯಂತೆ. ಆದರೆ ಈ ಕುರಿತು ಯಾವುದೇ ಅಧಿಕೃತ ಮಾಹಿತಿ ಹೊರಬಂದಿಲ್ಲ.

ಜೊತೆ ಜೊತೆಯಲಿ ಧಾರಾವಾಹಿ ಬಹಳ ಕಾಲ ಟಿಆರ್‌ಪಿಯಲ್ಲಿ ನಂಬರ್ ಒನ್ ಸ್ಥಾನದಲ್ಲೇ ಇತ್ತು. ಇದರೊಂದಿಗೆ ಈ ಧಾರಾವಾಹಿ ನಟ ಅನಿರುದ್ಧ್ ಅವರಿಗೂ ಮರು ಜನ್ಮ ನೀಡಿತ್ತು. ಅನಿರುದ್ಧ ಪ್ರತಿಭಾವಂತ ನಟನಾಗಿದ್ದರೂ, ಖ್ಯಾತ ನಟ ವಿಷ್ಣುವರ್ಧನ್, ನಟಿ ಭಾರತಿ ಅವರ ಅಳಿಯನಾಗಿದ್ದರೂ ಕನ್ನಡ ಚಿತ್ರರಂಗದಲ್ಲಿ ಹೇಳಿಕೊಳ್ಳುವಂತಹ ಸಿನಿಮಾಗಳೇನೂ ಅವರಿಗೆ ಸಿಗಲಿಲ್ಲ. ಮೊದಲ ಸಿನಿಮಾ ಚಿತ್ರ ಮಾತ್ರ ದೊಡ್ಡ ಹಿಟ್ ಎನಿಸಿಕೊಂಡಿತ್ತು. ಆಮೇಲೆ ಬಂದಿದ್ದೆಲ್ಲವೂ ಫ್ಲಾಪ್ ಸಿನಿಮಾಗಳೇ. ಇನ್ನೇನು ಅನಿರುದ್ಧ್ ಕನ್ನಡಿಗರ ಮನಸ್ಸಿಂದ ದೂರವಾದರು ಎನ್ನುವಷ್ಟರಲ್ಲಿ ಅವರಿಗೆ ಜೊತೆ ಜೊತೆಯಲಿ ಧಾರಾವಾಹಿ ಪುನರ್‌ಜನ್ಮ ನೀಡಿತ್ತು.

ಯುವ ಸಾಧಕರಿಂದ ಅರ್ಜಿ ಆಹ್ವಾನ

ಮೈಸೂರು, ಆ. 20- ಮೈಸೂರಿನ ವಿನೂತನ ಸಂಸ್ಥೆಯು ಕ್ರೀಡೆ, ಸಂಗೀತ, ನೃತ್ಯ, ಎನ್‌ಸಿಸಿ, ಸಾಹಿತ್ಯ, ವಿಜ್ಞಾನ ಮೊದಲಾದ ಕ್ಷೇತ್ರಗಳಲ್ಲಿ ಅಂತರಾಷ್ಟ್ರ, ರಾಷ್ಟ್ರ ಅಥವಾ ರಾಜ್ಯ ಮಟ್ಟದಲ್ಲಿ ಸಾಧನೆ ಮಾಡಿರುವ ಯುವ ಸಾಧಕರಿಂದ ವಿವಿಧ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಿದೆ. ಅರ್ಹರು ಆ. 30 ರೊಳಗೆ ಅರ್ಜಿ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 8073758164 ಸಂಪರ್ಕಿಸಬಹುದು.

ಗ್ರಾಚ್ಯುಯಿಟಿ ಸೌಲಭ್ಯವೂ ಸೇರಿ ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ

ಅಂಗನವಾಡಿ ಕಾರ್ಯಕರ್ತೆಯರ ಪ್ರತಿಭಟನೆ



ಮೈಸೂರು,ಆ.20(ಪಿಎಂ)-ಗ್ರಾಚ್ಯುಯಿಟಿ ಸೌಲಭ್ಯವೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್ (ಎಐಟಿಯುಸಿ) ವತಿಯಿಂದ ಶನಿವಾರ ಪ್ರತಿಭಟನೆ ನಡೆಸಲಾಯಿತು. ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು, ಗ್ರಾಚ್ಯುಯಿಟಿ ಸೌಲಭ್ಯಕ್ಕೆ ಅರ್ಹರು ಎಂದು 2020ರ ಏ.25ರಂದು ಸುಪ್ರಿಂಕೋರ್ಟ್ ನೀಡಿರುವ ತೀರ್ಪನ್ನು ರಾಜ್ಯದಲ್ಲಿ ಜಾರಿಗೊಳಿಸಲು ಸೂಕ್ತ ನಿಯಮಾವಳಿಗಳನ್ನು ರೂಪಿಸಬೇಕು. ಆ ಮೂಲಕ 1972ರ ಗ್ರಾಚ್ಯುಯಿಟಿ ಕಾಯ್ದೆಯ ಸೌಲಭ್ಯಗಳನ್ನು ಅಂಗನವಾಡಿ ಸಹಾಯಕರು ಮತ್ತು ಕಾರ್ಯಕರ್ತೆಯರಿಗೆ ಒದಗಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯು ರಾಜ್ಯದಲ್ಲಿ ಜಾರಿಗೆ ಬಂದು 42 ವರ್ಷಗಳು ಕಳೆದಿವೆ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಸದರಿ ಯೋಜನೆ ಸ್ವಲ್ಪ ಮಟ್ಟಿಗೆ ಸಮಾಧಾನಕರವಾಗಿದೆ. ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಈ ಯೋಜನೆ ಯಶಸ್ವಿಗಾಗಿ ಹಗಲಿರುಳು ದುಡಿಯುತ್ತಿದ್ದೇವೆ. ಕೆಲಸದ ಭದ್ರತೆ, ಕನಿಷ್ಠ ವೇತನವೂ ಇಲ್ಲದೆ, ಪಿಂಚಣಿ, ಭವಿಷ್ಯನಿಧಿ, ಗ್ರಾಚ್ಯುಯಿಟಿ ಸೌಲಭ್ಯಗಳಿಂದ ವಂಚಿತರಾಗಿ ಕೇವಲ ಗೌರವಧನಕ್ಕಾಗಿ ಶ್ರಮಿಸುತ್ತಿದ್ದೇವೆ. ಗ್ರಾಚ್ಯುಯಿಟಿ ಸೌಲಭ್ಯ ನೀಡಲು ಶೀಘ್ರವೇ ಕ್ರಮ ವಹಿಸಬೇಕು ಎಂದು ಆಗ್ರಹಿಸಿದರು.

ಎಲ್‌ಕೆಜಿ ಮತ್ತು ಯುಕೆಜಿ ಅನ್ನು ಸರ್ಕಾರಿ ಶಾಲೆಗಳಲ್ಲಿ ಆರಂಭಿಸುವ ಪ್ರಕ್ರಿಯೆ ಆರಂಭವಾಗಿದ್ದು, ಇವುಗಳನ್ನು ಅಂಗನವಾಡಿ ಕೇಂದ್ರಗಳಲ್ಲಿ ತೆರೆಯಬೇಕು. ಅಂಗನವಾಡಿ ಕಾರ್ಯಕರ್ತೆಯರನ್ನು ಶಿಕ್ಷಕಿ ಎಂದು ಪರಿಗಣಿಸಬೇಕು. ಅಂಗನವಾಡಿ ಮಕ್ಕಳಿಗೆ ಪಠ್ಯಪುಸ್ತಕ ಮತ್ತು ಸಮವಸ್ತ್ರ ನೀಡಬೇಕು. ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ 50 ಸಾವಿರ ರೂ. ವೈದ್ಯಕೀಯ ಪರಿಹಾರ ಧನ ನೀಡಬೇಕು. ಮಿನಿ ಅಂಗನವಾಡಿ ಕೇಂದ್ರಗಳಿಗೆ ಸಹಾಯಕಿಯರನ್ನು ತುರ್ತಾಗಿ ನೇಮಕ ಮಾಡಬೇಕು ಎಂದು ಒತ್ತಾಯಿಸಿದರು.

ಎರಡು ಅಂಗನವಾಡಿ ಕೇಂದ್ರಗಳಲ್ಲಿ ಪ್ರಭಾರವಾಗಿ ಕಾರ್ಯನಿರ್ವಹಿಸುತ್ತಿರುವ ಕಾರ್ಯಕರ್ತೆಯರಿಗೆ ಪ್ರಭಾರ ಭತ್ಯೆ ಹೆಚ್ಚಳ ಮಾಡಬೇಕು. ಖಾಲಿ ಇರುವ ಕಾರ್ಯಕರ್ತೆ ಮತ್ತು ಸಹಾಯಕಿಯರ ಹುದ್ದೆಗಳನ್ನು ತುರ್ತಾಗಿ ಭರ್ತಿ ಮಾಡಬೇಕು. ಮಹಾರಾಷ್ಟ್ರ ಮಾದರಿಯಲ್ಲಿ ಗಣೇಶ ಹಬ್ಬ ಅಥವಾ ಯುಗಾದಿ ಹಬ್ಬಕ್ಕೆ ವಾರ್ಷಿಕ ಬೋನಸ್ ನೀಡುವ ವ್ಯವಸ್ಥೆ ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು. ಇದಕ್ಕೂ ಮುನ್ನ ಪುರಭವನದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು. ದೊಡ್ಡ ಗಡಿಯಾರ, ಗಾಂಧಿಚೌಕ, ಸಯ್ಯಾಜಿರಾವ್ ರಸ್ತೆ, ಚಿಕ್ಕಗಡಿಯಾರ ವೃತ್ತ, ಡಿ.ದೇವರಾಜ ಅರಸು ರಸ್ತೆ, ಜೆಎಲ್‌ಬಿ ರಸ್ತೆ, ಹುಣಸೂರು ರಸ್ತೆ ಮಾರ್ಗವಾಗಿ ಪ್ರತಿಭಟನಾ ಮೆರವಣಿಗೆಯು ಜಿಲ್ಲಾಧಿಕಾರಿ ಕಚೇರಿ ತಲುಪಿತು. ಸಂಘಟನೆಯ ಮೈಸೂರು ತಾಲೂಕು ಅಧ್ಯಕ್ಷೆ ಭಾಗ್ಯ, ಕಾರ್ಯದರ್ಶಿ ವೈ.ಮಹದೇವಮ್ಮ, ನಗರ ಕಾರ್ಯದರ್ಶಿ ಗಿರಿಜಾ, ಪಿರಿಯಾಪಟ್ಟಣ ತಾಲೂಕು ಅಧ್ಯಕ್ಷ ಭುವನೇಶ್ವರಿ ಸೇರಿದಂತೆ ಜಿಲ್ಲೆಯ ವಿವಿಧ ಅಂಗನವಾಡಿ ಕೇಂದ್ರಗಳ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.


ನಿಧನ



ಪ್ರತಾಪ್ ಕುಮಾರ್

ಮೈಸೂರು, ಆ.20-ಮೈಸೂರಿನ ಕುವೆಂಪುನಗರ ನಿವಾಸಿ, ಉದ್ಯಮಿ ಎಂ.ಪ್ರತಾಪ್ ಕುಮಾರ್(40) ಅವರು ಶನಿವಾರ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ತಾಯಿ ಸರೋಜಮ್ಮ, ಸಹೋದರ ಎಂ.ಪ್ರದೀಪ್ ಕುಮಾರ್ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಎಂ. ಪ್ರತಾಪ್ ಕುಮಾರ್ ನಿಧನಕ್ಕೆ ಪ್ರತಾಪ್ ಸ್ನೇಹ ಬಳಗ ಸಂತಾಪ ಸೂಚಿಸಿದೆ. ಅಂತ್ಯಕ್ರಿಯೆ ಭಾನುವಾರ(ಆ.21) ಬೆಳಗ್ಗೆ 11ಗಂಟೆಗೆ ಮೈಸೂರಿನ ಗದ್ದಿಗೆ ರಸ್ತೆಯಲ್ಲಿರುವ ಮಾರ್ಗೋಡನಹಳ್ಳಿಯಲ್ಲಿ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ – ಕೆ.ಎಂ. ರೇವಣ್ಣ, 6.20 ಗೀತಾರಾಧನ, 6.35 'ಬದುಕು ಬದಲಿಸಿದ ಶೋಧ' ಲೇಖನ ಮತ್ತು ಪ್ರಸ್ತುತಿ-ಸುರೇಂದ್ರ ನಾಥ್ ಸಾತ್ವಿಕ್, 6.40 ಅರಿವಿನ ಶಿಖರ, ಗಾಯನ-ಸಿ. ವಿಶ್ವನಾಥ್ ಮತ್ತು ಪಿ.ಎಸ್. ರಂಜನಿ, ವ್ಯಾಖ್ಯಾನ- ಡಾ. ಹೆಚ್.ಎಂ. ಕಲಾಶ್ರೀ, 6.50 ರೈತರಿಗೆ ಸಲಹೆ, 7.15 ಪ್ರಾಯೋಜಿತ ಕಾರ್ಯಕ್ರಮ 'ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ', ಪ್ರಾಯೋಜಕರು ವಿಕಾಸ್ ಅಕಾಡೆಮಿ, ಕಲಬುರ್ಗಿ, 9.40 ನಮ್ಮ ಆರೋಗ್ಯ, 'ಪ್ರವಾಸ ಮತ್ತು ಆರೋಗ್ಯ' ಕುರಿತು ಡಾ.ಕೆ. ನಾಗೇಂದ್ರ ಪ್ರಸಾದ್ ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ-ಅಕ್ಷಯ ಸಂಸ್ಕೃತಿ ಕೇಂದ್ರದ ಪುಟಾಣಿಗಳಿಂದ ಕಾರ್ಯಕ್ರಮ ವೈವಿಧ್ಯ, 10.30 ಮಕ್ಕಳ ಮಂಟಪ-ನಂದಗೋಕುಲ, ಪ್ರಸ್ತುತಿ- ಕೆ.ಬಿ.ಮೀನಾ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.05ವನಿತಾ ವಿಹಾರ-ಮಾತಿನ ಮಂಟಪ -ಒಗಟು, ಪ್ರಚಲಿತ ವಿದ್ಯಮಾನ ಹಾಗೂ ಸಾಧಕರ ಪರಿಚಯ ಒಳಗೊಂಡ ಕಾರ್ಯಕ್ರಮ, 12.30 ದೇವರನಾಮ-ವಾಗೀಶ್ ಭಟ್, ಕೆ.ಜಿ. ರಾಮಸ್ವಾಮಿ, 12.45 ಜನಪದಗೀತೆ-ಹಂಗಳ ಗೋಪಮ್ಮ ಮತ್ತು ತಂಡ, 1.20 ಭಾವಗೀತೆ-ಜಯಂತಿ ವಿ. ಭಟ್, 3.00 ಅಮೃತ ಸ್ವಾತಂತ್ರ್ಯ ಮಾಲಿಕೆಯಲ್ಲಿ ವಿಶೇಷ ಕಾರ್ಯಕ್ರಮ ಸ್ವರಣಿ 'ಸ್ವರಾಜ್', 3.45 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ- ಪಾಂಚಜನ್ಯ, ಪ್ರಸ್ತುತಿ- ಮೂಡು ಬೆಳ್ಳೆಯ ಯಕ್ಷ ಕೌಸ್ತುಭದ ಕಲಾವಿದರು, 7.00 AIR Nxt ನಮ್ಮ ಕನಸಿಗೆ ನಮ್ಮದೇ ಮಾತು, 9.05 ಚಿಣ್ಣರ ಸುದ್ಧಿ ಪ್ರಚಲಿತ ವಿದ್ಯಮಾನಗಳನ್ನು ಒಳಗೊಂಡ ವಾರ್ತಾ ಸಂಚಿಕೆ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ- ಇಂದ್ರದೀಪ್ ಘೋಶ್- ವಯೋಲಿನ್, 11.00 ಸವಿನೆನಪು

ಇಂದಿನ ಪಂಚಾಂಗ

21.08.2022 ಭಾನುವಾರ, ಮಳೆ ನಕ್ಷತ್ರ : ಮಖೆ 17.08.2022 ರಿಂದ 30.08.2022
ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ ಮಾಸ, ಕೃಷ್ಣ ಪಕ್ಷ,
ತಿಥಿ: ದಶಮೀ, ನಕ್ಷತ್ರ : ರೋಹಿಣಿ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ದತ್ತವಿಜಯಾನಂದ ತೀರ್ಥ ಸ್ವಾಮೀಜಿಯವರ 19ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವ, ದತ್ತಸ್ವಾಮಿಗೆ ತೈಲಾಭಿಷೇಕ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಪ್ಯಾಲೆಸ್ ಸ್ಪೋರ್ಟ್ಸ್ ಕ್ಲಬ್, ಕುವೆಂಪುನಗರ :** ಬೆಳಗ್ಗೆ 7.30ಕ್ಕೆ ಜಿಲ್ಲಾ ಮಟ್ಟದ ಓಟದ ಸ್ಪರ್ಧೆ, ಉದ್ಘಾಟನೆ : ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಅಧ್ಯಕ್ಷತೆ : ಶಾಸಕ ಜಿ.ಟಿ. ದೇವೇಗೌಡ, ಮುಖ್ಯ ಅತಿಥಿಗಳು : ಕ್ಲಬ್ ಅಧ್ಯಕ್ಷ ಜಿ.ಡಿ. ಹರೀಶ್‌ಗೌಡ, ಅತಿಥಿಗಳು : ರಾಜ್ಯ ಒಕ್ಕಲಿಗ ಸಂಘದ ನಿರ್ದೇಶಕ ಡಾ. ಎಂ. ಬಿ. ಮಂಚೇಗೌಡ, ಸುಯೋಗ್ ಆಸ್ಪತ್ರೆ ಛೇರ್ಮನ್ ಡಾ. ಎಸ್.ಪಿ. ಯೋಗಣ್ಣ, ಬೆಳಗ್ಗೆ 9.30ಕ್ಕೆ ಬಹುಮಾನ ವಿತರಣಾ ಸಮಾರಂಭ, ಅಧ್ಯಕ್ಷತೆ : ಕ್ಲಬ್ ಅಧ್ಯಕ್ಷ ಜಿ.ಡಿ. ಹರೀಶ್‌ಗೌಡ, ಮುಖ್ಯ ಅತಿಥಿಗಳು : ಮೇಯರ್ ಸುನಂದ ಪಾಲನೇತ್ರ, ಸ್ಥಳ: ರಾಮಕೃಷ್ಣನಗರ ವೃತ್ತ.

■ **ಮೈಸೂರು ನಗರ ಮತ್ತು ಜಿಲ್ಲಾ ಯಾದವ ಯುವಕ ಸಂಘ, ಶ್ರೀ ಪ್ರಸನ್ನ ನಂಜುಂಡೇಶ್ವರ ಮತ್ತು ಶ್ರೀ ಕೃಷ್ಣ ದೇವಾಲಯ ಆಡಳಿತ ಸಮಿತಿ :** ಶ್ರೀ ಕೃಷ್ಣ ಜಯಂತಿ, ಬೆಳಗ್ಗೆ 9 ಗಂಟೆಗೆ ವಿಶೇಷ ಪೂಜೆ, ಪ್ರಸಾದ ವಿತರಣೆ, ಸಂಜೆ 7 ಗಂಟೆಗೆ ವಿದ್ಯಾರಣ್ಯಪುರಂನ ಸ್ಕಂದ ಭಜನಾ ಮಂಡಳಿ ಅವರಿಂದ ದೇವರನಾಮ ಮತ್ತು ಭಕ್ತಿಗೀತೆಗಳ ಕಾರ್ಯಕ್ರಮ, ಮುಖ್ಯ ಅತಿಥಿಗಳು : ರಾಜ್ಯೋತ್ಸವ ಪ್ರಶಸ್ತಿ ವಿಜೇತ ಸಿ. ಸಂಪತ್, ಸಿ. ದಾಸಪ್ಪ, ಎಂ.ಎಸ್. ರಾಮಚಂದ್ರು, ಸ್ಥಳ: ಶ್ರೀ ನಂಜುಂಡೇಶ್ವರ ದೇವಸ್ಥಾನ, ಗೊಲ್ಲಗೇರಿ.

■ **ಮೈಸೂರು ಡಿಸ್ಟ್ರಿಕ್ಟ್ ಅಮೆಚೂರ್ ಥ್ರೋಬಾಲ್ ಅಸೋಸಿಯೇಷನ್ :**ಡಿಸ್ಟ್ರಿಕ್ಟ್ ಪ್ರೀಮಿಯರ್ ಲೀಗ್ ಸೀಸನ್-1 ಉದ್ಘಾಟನಾ ಸಮಾರಂಭ, ಉದ್ಘಾಟನೆ : ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ. ಪಿ. ಕೃಷ್ಣಯ್ಯ, ಅಧ್ಯಕ್ಷತೆ : ಎಂಡಿಎಟಿಎ ಅಧ್ಯಕ್ಷ ಮಸೂದ್ ಜಾವೀದ್, ಗೌರವ ಅತಿಥಿಗಳು : ಕ್ರೀಡಾ ಪತ್ರಕರ್ತ ಸಿ.ಕೆ. ಮುರಳೀಧರ್, ಮಾನಸ ಸರೋವರ ಪುಷ್ಕರಣಿ ವಿದ್ಯಾಶ್ರಮ ಕಾರ್ಯದರ್ಶಿ ಸ್ವರೂಪಿಣಿ, ಮಾಜಿ ಸಿಂಡಿಕೇಟ್ ಸದಸ್ಯ ಸಿ.ಆರ್. ಹಿಮಾಂಶು, ಸ್ಥಳ: ಮಾನಸಸರೋವರ ಪುಷ್ಕರಣಿ ವಿದ್ಯಾಶ್ರಮ, ವಿಜಯನಗರ 1ನೇ ಹಂತ, ಬೆಳಗ್ಗೆ 9.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯದ ನೌಕರರ ಸಹಕಾರ ಪತ್ತಿನ ಸಂಘ :** ನಿವೃತ್ತ ನೌಕರರಿಗೆ ಸನ್ಮಾನ ಸಮಾರಂಭ ಹಾಗೂ ಪ್ರತಿಭಾ ಪುರಸ್ಕಾರ, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಪತಿ ಪ್ರೊ. ಜಿ. ಹೇಮಂತಕುಮಾರ್, ಮೈಸೂರು ವಿವಿ ಹಣಕಾಸು ಅಧಿಕಾರಿ ಡಾ. ಸಂಗೀತ ಗಜಾನನ ಭಟ್, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಂ.ಎನ್. ಹರೀಶ್‌ಬಾಬು, ಉಪಸ್ಥಿತರು : ಸಂಘದ ಉಪಾಧ್ಯಕ್ಷ ಕೆ.ಬಿ.ಮೂರ್ತಿ, ಸ್ಥಳ: ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಬೆಳಗ್ಗೆ 9.30ಕ್ಕೆ.

■ **ದಿನೇಶ್ ಕೋಚಿಂಗ್ ಸೆಂಟರ್:** ಜಿಲ್ಲಾ ಮಟ್ಟದ ಅಂತರ ಪ್ರೌಢಶಾಲಾ ಕನ್ನಡ ಚರ್ಚಾ ಸ್ಪರ್ಧೆ, ಉದ್ಘಾಟನೆ : ಕೈಗಾರಿಕೋದ್ಯಮಿ ಕೆ.ವಿ. ಅನಂತಶಯನ, ವಿಷಯ ಸೂಚಕರು : ಚಾರ್ಟರ್ಡ್ ಅಕೌಂಟೆಂಟ್ ಎ.ವಿಶ್ವನಾಥ್, ಸ್ಥಳ: ರೋಟರಿ ಪಶ್ಚಿಮ ಸಭಾಂಗಣ, ಸರಸ್ವತಿಪುರಂ, ಬೆಳಗ್ಗೆ 9.30ಕ್ಕೆ.

■ **ಶ್ರೀ ಮಹರ್ಷಿ ವಾಲ್ಮೀಕಿ ಸಮುದಾಯ ಭವನ :** ಶ್ರೀ ಮಹರ್ಷಿ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನನಂದ ಸ್ವಾಮೀಜಿ, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಜ್ಯೋತಿ ಬೆಳಗಿಸುವವರು: ಸಂಸದ ವಿ.ಶ್ರೀನಿವಾಸಪ್ರಸಾದ್, ಶ್ರೀವಾಲ್ಮೀಕಿ ಭಾವಚಿತ್ರ ಅನಾವರಣ: ಸಂಸದ ಪ್ರತಾಪ್‌ಸಿಂಹ, ಮೇಯರ್ ಸುನಂದ ಪಾಲನೇತ್ರ, ಅಧ್ಯಕ್ಷತೆ:ಮೈಸೂರು ಚಾಮರಾಜನಗರ ಜಿಲ್ಲಾ ನಾಯಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಚಿಕ್ಕಣ್ಣ, ಸ್ಥಳ:ಸಮುದಾಯ ಭವನ, ಈಜುಕೊಳದ ರಸ್ತೆ, ಸರಸ್ವತಿಪುರಂ, ಬೆಳಗ್ಗೆ 10ಕ್ಕೆ.

■ **ವಿಶ್ವಋಷಿ ವಾಲ್ಮೀಕಿ ಚಾರಿಟಬಲ್ ಟ್ರಸ್ಟ್ :** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಇಂದಿನ ಸ್ಥಿತಿಗತಿ ಕುರಿತು ಚರ್ಚಾ ಕಾರ್ಯಕ್ರಮ, ಉಪಸ್ಥಿತರು : ರಾಜ್ಯ ಉದ್ಯಮಶೀಲತಾ ಅಭಿವೃದ್ಧಿ ಇಲಾಖೆ ಜಂಟಿ ನಿರ್ದೇಶಕ ಮಂಜುನಾಥ್, ಡಾ. ಹೆಚ್.ಪಿ. ಶೋಭಾ, ನಿವೃತ್ತ ತಹಸೀಲ್ದಾರ್ ಭೀಮಪ್ಪ ತಳವಾರ್, ಸ್ಥಳ: ರೋಟರಿ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆ :** ಪದವಿ ಪ್ರದಾನ ಸಮಾರಂಭ ಮತ್ತು ಪುಸ್ತಕ ಲೋಕಾರ್ಪಣೆ, ಅಧ್ಯಕ್ಷತೆ : ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ, ಚೆನ್ನೈ, ಪೂರ್ವ ಕುಲಪತಿ ಪ್ರೊ. ರಾಮಮೋಹನ ಪಾಠಕ್, ಮುಖ್ಯ ಅತಿಥಿಗಳು : ಶಿಕ್ಷಾ ಎನ್‌ಸಿಇಆರ್‌ಟಿ ಡೀನ್ ಪ್ರೊ. ವೆಂಕಟೇಶಮೂರ್ತಿ, ಉಪಸ್ಥಿತರು : ಆರ್. ಚೇತನ್ ಕುಮಾರ್, ಪ್ರೊ. ಪ್ರತಿಭಾ ಮೊದಲಿಯಾರ್, ಸ್ಥಳ: ಜಗನ್ಮೋಹನ ಅರಮನೆ, ಬೆಳಗ್ಗೆ 10.30ಕ್ಕೆ

■ **ಮೈಸೂರು ಫೋಟೋಗ್ರಫಿ ಅಸೋಸಿಯೇಷನ್:** ವಿಶ್ವ ಛಾಯಾಗ್ರಾಹಣ ದಿನಾಚರಣೆ ಪ್ರಯುಕ್ತ ಛಾಯಾಚಿತ್ರ ಪ್ರದರ್ಶನ, ಸ್ಥಳ: ಸುಚಿತ್ರ ಆರ್ಟ್ ಗ್ಯಾಲರಿ, ಕಲಾಮಂದಿರ, ಬೆಳಗ್ಗೆ 10.30ಕ್ಕೆ.

■ **ವಿಜಯನಗರ 1ನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ :** ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಕೆ.ಕಾಳಿಂಗು, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ವಿಪ್ರ ವೇದಿಕೆ :** ಶ್ರೀ ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಏರ್ಪಡಿಸಿದ್ದ ಮುದ್ದು ಕಂದ ಫೋಟೋ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ, ಮುಖ್ಯ ಅತಿಥಿಗಳು : ಇಳೈ ಆಳ್ವಾರ್ ಸ್ವಾಮೀಜಿ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಶ್ರೀ ಕೃಷ್ಣ ಮಿತ್ರ ಮಂಡಳಿ ಅಧ್ಯಕ್ಷ ಸುಬ್ರಹ್ಮಣ್ಯ, ವೇದಿಕೆ ಅಧ್ಯಕ್ಷ ಅನಿಲ್ ಕುಮಾರ್, ವಿಪ್ರ ಮಹಿಳಾ ಸಂಘದ ಅಧ್ಯಕ್ಷೆ ಡಾ. ಲಕ್ಷ್ಮೀ, ವಿಕ್ರಂ ಅಯ್ಯಂಗಾರ್, ಎನ್.ಎಂ. ನವೀನ್ ಕುಮಾರ್, ಸ್ಥಳ: ತುಮಕೂರು ಗ್ರಾಮೀಣ ಬ್ಯಾಂಕ್ ಮಹಡಿ, ನೃಪತುಂಗ ರಸ್ತೆ, ಬೆಳಗ್ಗೆ 11ಕ್ಕೆ.

■ **ಬೋಗಾದಿ ಶ್ರೀ ನಾಗಲಿಂಗೇಶ್ವರ ಕೃಪಾ ಪೋಷಿತ ನಾಟಕ ಮಂಡಳಿ :** ಕುರುಕ್ಷೇತ್ರ ಅಥವಾ ಧರ್ಮರಾಜ್ಯ ಸ್ಥಾಪನೆ ಪೌರಾಣಿಕ ನಾಟಕ ಪ್ರದರ್ಶನ, ಅಧ್ಯಕ್ಷತೆ: ಶಾಸಕ ಜಿ.ಟಿ.ದೇವೇಗೌಡ, ಉದ್ಘಾಟನೆ: ಶಾಸಕ ಯತೀಂದ್ರ ಸಿದ್ದರಾಮಯ್ಯ, ಉಪಸ್ಥಿತರು: ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಸ್ಥಳ: ಪುರಭವನ, ಬೆಳಗ್ಗೆ 11.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ :** ರಾಜ್ಯ ಮಟ್ಟದ ಯುವ ಜನೋತ್ಸವ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಜಿ. ಹೇಮಂತಕುಮಾರ್, ಉದ್ಘಾಟನೆ : ಎನ್‌ಎಸ್‌ಎಸ್ ಅಧಿಕಾರಿ ಪ್ರತಾಪ್ ಲಿಂಗಯ್ಯ, ಮುಖ್ಯ ಅತಿಥಿಗಳು : ಕೆ.ವಿ. ಖಾದ್ರಿ ನರಸಿಂಹಯ್ಯ, ಪ್ರೊ. ಎ.ಪಿ. ಜ್ಞಾನಪ್ರಕಾಶ್, ಡಾ. ಈ.ಸಿ. ನಿಂಗರಾಜಗೌಡ, ವೈ.ಕೆ. ಪವಿತ್ರ, ಸ್ಥಳ: ರಂಗಮಂದಿರ, ಲಲಿತಕಲಾ ಕಾಲೇಜು, ಮಧ್ಯಾಹ್ನ 12ಕ್ಕೆ.

■ **ಸುಶಿರ ಶ್ರೀ ದೇಶಿಕಾಚಾರ್ಯ ಸಂಗೀತ ಅಕಾಡೆಮಿ :** 20ನೇ ವಾರ್ಷಿಕ ಸಂಗೀತೋತ್ಸವ, ವಿವೇಕ್ ಸದಾಶಿವಂ ಅವರಿಂದ ಹಾಡುಗಾರಿಕೆ, ಸಿ.ಎಸ್. ಚಿನ್ಮಯಿ-ವಯೋಲಿನ್, ಸೂರಿಯಾ ನಂಬಿಸನ್-ಮೃದಂಗಂ, ಎಸ್. ಮಂಜುನಾಥ್-ಘಟಂ, ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾ, ಸಂಗೀತ ಕಲಾನಿಧಿ ಕೆ. ವಾಸುದೇವಾ ಚಾರ್ಯ ಭವನ, ಜೆಎಲ್‌ಬಿ ರಸ್ತೆ, ಲಕ್ಷ್ಮೀಪುರಂ, ಸಂಜೆ 6ಕ್ಕೆ.

■ **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ), ಚಾಮುಂಡಿಬೆಟ್ಟದ ತಪ್ಪಲು :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ ಅವರಿಂದ ಶರಣ ಸಂಸ್ಕೃತಿ ಕುರಿತು ಪ್ರವಚನ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30 ರಿಂದ.

■ **ಸಂಸ್ಕೃತಿ :** ಭರತನಾಟ್ಯ ಕಾರ್ಯಕ್ರಮ, ಸಂಜೆ 6 ರಿಂದ ಶ್ರೀ ನಟರಾಜ ಫರ್‌ಫಾರ್ಮಿಂಗ್ ಆರ್ಟ್ಸ್ ಸೆಂಟರ್‌ನ ವಿದುಷಿ ನಾಗಶ್ರೀ ಫಣೀಂದ್ರ ಕುಮಾರ್ ಅವರ ಶಿಷ್ಯರಿಂದ, 6.45ಕ್ಕೆ ಸಂಸ್ಕೃತಿ ಪ್ರದರ್ಶಕ ಕಲೆಗಳ ಕೇಂದ್ರದ ಡಾ. ಭುವನೇಶ್ವರಿ ಅವರ ಶಿಷ್ಯರಿಂದ, ಸಂಜೆ 7.30 ರಿಂದ ನಂದನ ಫರ್‌ಫಾರ್ಮಿಂಗ್ ಆರ್ಟ್ಸ್ ಸೆಂಟರ್‌ನ ವಿದುಷಿ ವಾರಿಜಾ ನಳಿಗೆ ಅವರ ಶಿಷ್ಯರಿಂದ ಭರತನಾಟ್ಯ ಕಾರ್ಯಕ್ರಮ, ಸ್ಥಳ: ವೀಣೆ ಶೇಷಣ್ಣ ಭವನ, ಗಾನಭಾರತೀ, ಕುವೆಂಪುನಗರ.

■ **ರಂಗಾಯಣ:** ರಂಗಹೃದಯ ಹಾಸನ ಅವರಿಂದ ಪೂಜಾ ರಘುನಂದನ್ ಅವರ ಏಕವ್ಯಕ್ತಿ ರಂಗ ಪ್ರಯೋಗ ತಾಯಿಯಾಗುವುದೆಂದರೆ, ಕಥೆ ಹಾಗೂ ಅಭಿನಯ: ಪೂಜಾ ರಘುನಂದನ್, ಗಾಯನ: ಡಾ. ಸಿಂಧುಶ್ರೀ ಆತ್ರೇಯ, ನಿರ್ದೇಶನ: ಕೃಷ್ಣಮೂರ್ತಿ ಕವತ್ತಾರ್, ಸ್ಥಳ: ಭೂಮಿಗೀತ ರಂಗ ಮಂದಿರ, ಸಂಜೆ 6.30ಕ್ಕೆ

■ **ನೆಲೆ ಹಿನ್ನೆಲೆ, ಕರ್ನಾಟಕ ರಂಗ ಪರಿಷತ್ತು, ಕರ್ನಾಟಕ ಬೀದಿ ನಾಟಕ ಅಕಾಡೆಮಿ :** ಸಿಜಿಕೆ ಬೀದಿ ರಂಗ ದಿನ, ಉದ್ಘಾಟನೆ : ಪ್ರದೇಶ ಅಭಿವೃದ್ಧಿ ಮಂಡಳಿ ನಿರ್ದೇಶಕ ಡಿ. ಚಂದ್ರಶೇಖರಯ್ಯ, ಪ್ರಶಸ್ತಿ ಪ್ರದಾನ: ನಾಟಕ ಅಕಾಡೆಮಿ ಮಾಜಿ ಅಧ್ಯಕ್ಷ ಶ್ರೀನಿವಾಸ ಜಿ.ಕಪ್ಪಣ್ಣ, ಅಧ್ಯಕ್ಷತೆ: ವಾಣಿಜ್ಯ ತೆರಿಗೆಗಳ ಉಪ ಆಯುಕ್ತ ಡಿ.ಎಂ.ಮಂಜುನಾಥ್ ಸೋಸ್ಲೆ, ಮುಖ್ಯ ಅತಿಥಿಗಳು: ಎಪಿಎಂಸಿ ಮಾಜಿ ಉಪಾಧ್ಯಕ್ಷ ಜವರಪ್ಪ, ಪ್ರಾಸ್ತಾವಿಕ ನುಡಿ: ಕರ್ನಾಟಕ ರಂಗ ಪರಿಷತ್ ರಾಜ್ಯ ಸಂಚಾಲಕ ಸಿ.ಎಂ. ನರಸಿಂಹಮೂರ್ತಿ, ಉಪಸ್ಥಿತರು : ನೆಲೆ ಹಿನ್ನೆಲೆ ಕೆ.ಆರ್. ಗೋಪಾಲಕೃಷ್ಣ, ಸ್ಥಳ: ಕಿರುರಂಗಮಂದಿರ, ಕಲಾಮಂದಿರ ಆವರಣ, ಸಂಜೆ 6.15ಕ್ಕೆ.

ಸುತ್ತೂರಿನಲ್ಲಿಂದು

■ **ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ:** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರವಚನ: ಜೆಎಸ್‌ಎಸ್ ಕಾಲೇಜು ಪ್ರಾಧ್ಯಾಪಕ ಪ್ರೊ. ಹೆಚ್.ಬಿ. ದೇವಣ್ಣ, ವಾಚನ : ಜೆಎಸ್‌ಎಸ್ ಪ್ರೌಢಶಾಲೆ ದೈಹಿಕ ಶಿಕ್ಷಕ ಡಿ.ಎಂ. ಸಿದ್ದಲಿಂಗಸ್ವಾಮಿ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಸುತ್ತೂರು ಮಠ, ಸಂಜೆ 6.30ರಿಂದ.

ಮೈಸೂರು ಮಿತ್ರ

ವಿಶೇಷ ರುದ್ರಾಕ್ಷಗಳ ಪ್ರದರ್ಶನ, ಮಾರಾಟ



ಮೈಸೂರು, ಆ.20-ಹೈದರಾಬಾದ್ ಮೂಲದ ಇಂಡಸ್-ನೇಪಾಳ ರುದ್ರಾಕ್ಷ ಸಂಸ್ಥೆಯು ಆ.19ರಿಂದ 26ರವರೆಗೆ ಮೈಸೂರಿನ ಸಿಫಾಯಿ ಗ್ರಾಂಡೆ ಹೋಟೆಲ್‌ನಲ್ಲಿ ನೇಪಾಳದ ರುದ್ರಾಕ್ಷಗಳ ಪ್ರದರ್ಶನ ಮತ್ತು ಮಾರಾಟ ಏರ್ಪಡಿಸಿದೆ. ಪ್ರತೀ ದಿನ ಬೆಳಗ್ಗೆ 10 ರಿಂದ ರಾತ್ರಿ 9ರವರೆಗೆ ಪ್ರದರ್ಶನವಿದ್ದು, ಯಾವ ರುದ್ರಾಕ್ಷಿಯನ್ನು ಯಾವಾಗ ಯಾರು ಧರಿಸಬೇಕೆಂಬುದರ ಬಗ್ಗೆ ಯಾವುದೇ ಪಂಚಾಂಗ, ಕಂಪ್ಯೂಟರ್ ಸಹಾಯವಿಲ್ಲದೇ ವೇದ ಗಣಿತದ ಮೂಲಕ ಜನ್ಮರಾಶಿ, ಜನ್ಮ ನಕ್ಷತ್ರ ನೋಡಿ ತಿಳಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗಾಗಿ 9885211449, 7799211449 ಅನ್ನು ಸಂಪರ್ಕಿಸಬಹುದು.

ಅಂತರ ಶಾಲಾ ವಾಲಿಬಾಲ್ ಪಂದ್ಯಾವಳಿ



ಮೈಸೂರು,ಆ.20(ಎಂಟಿವೈ)- ಮೈಸೂರು ಸ್ಪೋರ್ಟ್ಸ್ ಮತ್ತು ಫಿಟ್ನೆಸ್ ಅಕಾಡೆಮಿ ವತಿಯಿಂದ ಆ.27 ರಂದು ಕುವೆಂಪುನಗರ ಎಂ ಬ್ಲಾಕ್‌ನಲ್ಲಿನ ವಿವೇಕಾನಂದ ಕ್ರೀಡಾಂಗಣದಲ್ಲಿ 16 ವರ್ಷದೊಳಗಿನ ಬಾಲಕರ ಅಂತರಶಾಲಾ ವಾಲಿಬಾಲ್ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಅಕಾಡೆಮಿ ಅಧ್ಯಕ್ಷ ಡಾ.ಎನ್.ಬಿ.ಸುರೇಶ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಇತ್ತೀಚೆಗೆ ಮೈಸೂರಲ್ಲಿ ವಾಲಿಬಾಲ್ ಪಂದ್ಯಾವಳಿಗಳು ಹೆಚ್ಚಾಗಿ ನಡೆಯುತ್ತಿಲ್ಲ. ಕೇವಲ ದಸರಾ ವೇಳೆಯಷ್ಟೇ ಕ್ರೀಡೆಗಳು ನೆನಪಾಗುವಂತಾಗಿದೆ. ಶಾಲಾ ಕಾಲೇಜುಗಳನ್ನು ಹೊರತುಪಡಿಸಿದರೆ, ಹೊರಗಡೆ ಪುರುಷರು ಹಾಗೂ ಮಹಿಳೆಯರಿಗಾಗಿ ವಾಲಿಬಾಲ್ ಪಂದ್ಯಾವಳಿ ನಡೆಯುತ್ತಿಲ್ಲ. ಈ ಕ್ರೀಡೆಗೆ ಅಕಾಡೆಮಿ ಉತ್ತೇಜನ ನೀಡಲು ತರಬೇತಿ ನೀಡಬಯಸಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಅಕಾಡೆಮಿಯ ಪದಾಧಿಕಾರಿಗಳಾದ ಡಾ.ಎಂ.ಪಿ. ಧರ್ಮೇಶ್, ದಿಕ್ಸನ್, ಎಸ್.ಎನ್.ದರ್ಶನ್ ಇದ್ದರು.

ಮಾಜಿ ಸಿಎಂ ಸಿದ್ದರಾಮಯ್ಯ ಕಾರಿನ ಮೇಲೆ ಮೊಟ್ಟೆ ಎಸೆತ ಖಂಡಿಸಿ ಪ್ರತಿಭಟನೆ



ಮೈಸೂರು,ಆ.20(ಪಿಎಂ)- ಮಡಿಕೇರಿಯಲ್ಲಿ ಮಾಜಿ ಮುಖ್ಯಮಂತ್ರಿಗಳೂ ಆದ ವಿಧಾನಸಭೆ ವಿಪಕ್ಷ ನಾಯಕ ಸಿದ್ದರಾಮಯ್ಯನವರ ಕಾರಿನ ಮೇಲೆ ಮೊಟ್ಟೆ ಎಸೆದು, ಕಪ್ಪು ಬಾವುಟ ಪ್ರದರ್ಶಿಸಿದ್ದನ್ನು ಖಂಡಿಸಿ ಅಖಿಲ ಕರ್ನಾಟಕ ಸಿದ್ದರಾಮಯ್ಯನವರ ಅಭಿಮಾನಿಗಳ ಬ್ರಿಗೇಡ್ ವತಿಯಿಂದ ಶನಿವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ನ್ಯಾಯಾಲಯ ಎದುರಿನ ಗಾಂಧಿ ಪುತ್ಥಳಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ನಕಲಿ ಹಿಂದುತ್ವವಾದಿಗಳನ್ನು ಕರೆತಂದು ಸಿದ್ದರಾಮಯ್ಯನವರ ಕಾರಿನ ಮೇಲೆ ಮೊಟ್ಟೆ ಎಸೆದು, ಕಪ್ಪು ಬಾವುಟ ಪ್ರದರ್ಶಿಸಲಾಗಿದೆ. ಇದು ನಕಲಿ ಹಿಂದುತ್ವವಾದಿಗಳ ವಿಕೃತಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಮಾಜದಲ್ಲಿ ಅಶಾಂತಿ ಸೃಷ್ಟಿಸಿ ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರಗಳ ವೈಫಲ್ಯ ಮರೆಮಾಚಲು ಬಾಡಿಗೆ ಗೂಂಡಾಗಳನ್ನು ಬಳಸಿಕೊಂಡು ಈ ರೀತಿಯ ಕೃತ್ಯ ನಡೆಸಲಾಗಿದೆ. ಹಿಂದುತ್ವ, ಹಿಂದು, ಗೋಹತ್ಯೆಯಂತಹ ಸೂಕ್ಷ್ಮ ವಿಷಯಗಳನ್ನು ತೆಗೆದುಕೊಂಡು ಅಶಾಂತಿ ಮೂಡಿಸಿ ಮತ್ತೆ ಅಧಿಕಾರಕ್ಕೆ ಬರಲು ಬಿಜೆಪಿ ಹವಣಿಸುತ್ತಿದೆ ಎಂದು ಕಿಡಿಕಾರಿದರು. ಸಿದ್ದರಾಮಯ್ಯನವರು ಶೋಷಿತರು, ಬಡವರು, ಅಲ್ಪಸಂಖ್ಯಾತರು, ದಮನಿತರ ಪರ ಇದ್ದಾರೆ. ಈ ವರ್ಗಗಳ ದನಿ ಅಡಗಿಸಲು ಈ ರೀತಿ ಕುತಂತ್ರ ಮಾಡಲಾಗುತ್ತಿದೆ ಎಂದು ದೂರಿದರು. ಸಂಘಟನೆಯ ರಾಜ್ಯಾಧ್ಯಕ್ಷ ಹಿನಕಲ್ ಉದಯ್, ಉಪಾಧ್ಯಕ್ಷ ಜೆ.ಮಹದೇವು, ಪ್ರಧಾನ ಕಾರ್ಯದರ್ಶಿ ಕಾಡನಹಳ್ಳಿ ಸ್ವಾಮಿಗೌಡ, ಕಾರ್ಯದರ್ಶಿ ಮಾಕನಹುಂಡಿ ಶಿವು, ಖಜಾಂಚಿ ಸಚಿನ್ ದೊಡ್ಡೇಗೌಡ, ಮುಖಂಡರಾದ ಧನಪಾಲ್, ಮಹೇಶ್, ಹರೀಶ್, ನಿಶಾಂತ್, ಮರಡಿಹುಂಡಿ ಪುಟ್ಟಸ್ವಾಮಿ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

— ಡಿ. ದೇವರಾಜ ಅರಸು 107ನೇ ಜನ್ಮದಿನಾಚರಣೆ —

ಮೈಸೂರಲ್ಲಿ ಮೂರು ದಿನ ನಾನಾ ಕಾರ್ಯಕ್ರಮ



ಮೈಸೂರು, ಆ. 20(ಆರ್‌ಕೆ)- ಮೈಸೂರಲ್ಲಿ ಮಾಜಿ ಮುಖ್ಯಮಂತ್ರಿ, ಶೋಷಿತರ ಅಭಿವೃದ್ಧಿ ಹರಿಕಾರ, ನೊಂದವರ ನಂದಾದೀಪ, ಧೀಮಂತ ನಾಯಕ ದಿ. ಡಿ. ದೇವರಾಜ ಅರಸುರವರ 3 ದಿನಗಳ 107ನೇ ಜನ್ಮದಿನಾಚರಣೆ ಕಾರ್ಯಕ್ರಮ ಆರಂಭವಾಗಿವೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಆಶ್ರಯದಲ್ಲಿ ಮೈಸೂರಿನ ಕಲಾಮಂದಿರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಡಿ. ದೇವರಾಜ ಅರಸು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಜಿಲ್ಲಾ ಉಸ್ತುವಾರಿ ಸಚಿವ ಎಸ್‌.ಟಿ. ಸೋಮಶೇಖರ್ ಚಾಲನೆ ನೀಡಿದರು.

ಶಾಸಕ ಎಲ್. ನಾಗೇಂದ್ರ ಅಧ್ಯಕ್ಷತೆ ವಹಿಸಿದ್ದ ಸಮಾರಂಭದಲ್ಲಿ ಮೇಯರ್ ಸುನಂದಾ ಪಾಲನೇತ್ರ, ಶಾಸಕರಾದ ಜಿ.ಟಿ. ದೇವೇಗೌಡ, ಡಾ. ಯತೀಂದ್ರ ಸಿದ್ದರಾಮಯ್ಯ, ವಿಧಾನಪರಿಷತ್ ಸದಸ್ಯರಾದ ಎ.ಹೆಚ್. ವಿಶ್ವನಾಥ್, ಸಿ.ಎನ್. ಮಂಜೇಗೌಡ, ವಿವಿಧ ನಿಗಮ, ಮಂಡಳಿ ಅಧ್ಯಕ್ಷರಾದ ಎಂ. ಶಿವಣ್ಣ ಎಸ್. ಮಹದೇವಯ್ಯ, ರಘು ಕೌಟಿಲ್ಯ, ಎಂ. ಶಿವಕುಮಾರ್, ಎಂ.ಕೆ. ಶ್ರೀನಿವಾಸ, ಮುಖಂಡರಾದ ಡಿ. ನಾಗಭೂಷಣ್, ಕೆಎಸ್. ಶಿವರಾಂ ಹಾಗೂ ಇತರರು ಪಾಲ್ಗೊಂಡಿದ್ದರು.

ಇದೇ ವೇಳೆ ಅರಸುರವರ ಶಿಷ್ಯ, ಅನುಯಾಯಿಯಾಗಿರುವ ವಿಧಾನಪರಿಷತ್ ಸದಸ್ಯ ಎ.ಹೆಚ್. ವಿಶ್ವನಾಥ್ ಅವರಿಗೆ ಜಿಲ್ಲಾ ಮಟ್ಟದ ಡಿ. ದೇವರಾಜ ಅರಸು ಪ್ರಶಸ್ತಿ ಪ್ರದಾನ ಮಾಡಿ ಆತ್ಮೀಯವಾಗಿ ಅಭಿನಂದಿಸಲಾಯಿತು. ಬಿಸಿಎಂ ಹಾಸ್ಟೆಲ್ ವಿದ್ಯಾರ್ಥಿ ಬಸವರಾಜ್ ವೇದಿಕೆಯಲ್ಲೇ ಅರಸುರವರ ಭಾವಚಿತ್ರ ಬಿಡಿಸಿ, ಅದನ್ನು ವಿಶ್ವನಾಥ್ ಅವರಿಗೆ ಅರ್ಪಿಸಿದರು.

ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ಬಿಸಿಎಂ ಹಾಸ್ಟೆಲ್ ವಿದ್ಯಾರ್ಥಿಗಳನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು. ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ಇಲಾಖೆ ಜಿಲ್ಲಾ ಅಧಿಕಾರಿ ಹೆಚ್.ಎಸ್. ಬಿಂಧ್ಯಾ ಹಾಗೂ ಚಂದ್ರಕಲಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಸದಸ್ಯರಾದ ನಿವೃತ್ತ ಕೆಎಎಸ್ ಅಧಿಕಾರಿ ಕೆ.ಎನ್. ಲಿಂಗಪ್ಪ, ಡಿ. ದೇವರಾಜ ಅರಸು ಕುರಿತು ಭಾಷಣ ಮಾಡಿದರು. ಕಲಾಮಂದಿರದಲ್ಲಿ ಆಯೋಜಿಸಿರುವ 3 ದಿನಗಳ ಕೃಷಿ ವಸ್ತು ಪ್ರದರ್ಶನವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಉದ್ಘಾಟಿಸಿದರು.

ಅರಸು ನೆನಪು, ಫೋಟೋಗಳು, ಪುಸ್ತಕಗಳು, ಕುಂಬಾರಿಕೆ ಕುಟೀರ, ಮೈಸೂರು ಸ್ಯಾಂಡಲ್ ಸೋಪ್, ಕೈಮಗ್ಗ ಮನೆ, ಗಾಣಿಗ ಕುಲಕಸುಬು, ರುದ್ರಾಕ್ಷಿ ಕುಟೀರ, ಪುಸ್ತಕ ಭಂಡಾರ, ಜೇನುತುಪ್ಪ, ಸವಿತ ಸಮಾಜ ಕುಲಕಸುಬಿನ ಉಪಕರಣಗಳು, ಆಯುಷ್ ಗಿಡಮೂಲಿಕೆ, ಧಾನ್ಯ ಕಣಜ, ತೈಲ ಉತ್ಪನ್ನ, ಸೊಪ್ಪು-ತರಕಾರಿ ಸೇರಿದಂತೆ ವಿವಿಧ ಮಳಿಗೆಗಳನ್ನು ವಸ್ತುಪ್ರದರ್ಶನದಲ್ಲಿ ತೆರೆಯಲಾಗಿದೆ ಭಾನುವಾರ ಮತ್ತು ಸೋಮವಾರವೂ ಡಿ. ದೇವರಾಜ ಅರಸು ಸ್ಮರಣೆ ನಾನಾ ಕಾರ್ಯಕ್ರಮಗಳು ನಡೆಯಲಿವೆ.

ದೇವರಾಜ ಅರಸುರಂತಹ ನಾಯಕ ಹಿಂದೆ ಹುಟ್ಟಿಲ್ಲ, ಮುಂದೆಯೂ ಹುಟ್ಟಲ್ಲ

ಶಾಸಕ ಜಿಟಿಡಿ ಅಭಿಮಾನದ ಮಾತು

ಮೈಸೂರು, ಆ.20(ಆರ್‌ಕೆ)-ಡಿ.ದೇವರಾಜ ಅರಸುರವರಂತಹ ನಾಯಕ ಈ ರಾಜ್ಯದಲ್ಲಿ ಈವರೆಗೆ ಹುಟ್ಟಿಲ್ಲ, ಮುಂದೆಯೂ ಹುಟ್ಟಿ ಬರಲು ಸಾಧ್ಯವಿಲ್ಲ ಎಂದು ಶಾಸಕ ಜಿ.ಟಿ.ದೇವೇಗೌಡ ಅವರು ಇಂದಿಲ್ಲಿ ನುಡಿದಿದ್ದಾರೆ.



ಮೈಸೂರಿನ ಕಲಾಮಂದಿರದಲ್ಲಿ ಏರ್ಪಡಿಸಿದ್ದ ಡಿ.ದೇವರಾಜ ಅರಸು ಅವರ 107ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೆಲವರು ಅರಸು ಅವರ ಆದರ್ಶ ಪಾಲಿಸುತ್ತಿದ್ದೇನೆ, ಅವರ ಪ್ರತಿರೂಪ ಎಂದೆಲ್ಲಾ ಬಿಂಬಿಸಿಕೊಳ್ಳುತ್ತಾರೆ. ಮುಖ್ಯಮಂತ್ರಿಗಳಾಗಿ ಈ ರಾಜ್ಯಕ್ಕೆ ಅರಸು ಅವರು ನೀಡಿದ ಜನಪರ ಯೋಜನೆಗಳನ್ನು ಈವರೆಗೆ ಯಾರೂ ಕೊಡಲಿಲ್ಲ ಎಂದ ಜಿಟಿಡಿ, ಅವರ ಆಡಳಿತಾವಧಿಯಲ್ಲಿ ಆಗಿರುವ ಸುಧಾರಣೆಗಳ ಬಗ್ಗೆ ಸಂಶೋಧನೆಯಾಗಬೇಕು ಎಂದರು.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ದೇವರಾಜ ಅರಸು ಹುಟ್ಟಿದ ಜಾಗದಲ್ಲಿ ನೀನು ಸ್ಪರ್ಧಿಸಬೇಕೆಂದು ಹೇಳಿದರು. ಅವರ ಪ್ರೇರಣೆ ಹಾಗೂ ಸಿದ್ದರಾಮಯ್ಯ ಅವರ ಸಹಕಾರದಿಂದ ನಾನು ಶಾಸಕನಾಗಿ ಆಯ್ಕೆಯಾದೆ ಎಂದು ಹುಣಸೂರು ರಾಜಕಾರಣವನ್ನು ಜಿ.ಟಿ.ದೇವೇಗೌಡರು ಮೆಲುಕು ಹಾಕಿದರು. ಈ ರಾಜ್ಯದಲ್ಲಿ ಮುಖ್ಯಮಂತ್ರಿಯಾಗಿ ಸುದೀರ್ಘ ಆಡಳಿತ ನಡೆಸಿ ಹಿಂದುಳಿದ ವರ್ಗ, ದಲಿತರು, ಬಡವರ ಏಳ್ಗೆಗಾಗಿ ದುಡಿದಿದ್ದರಿಂದ ಅರಸು ಅವರು ಜನ ಮಾನಸದಲ್ಲಿ ಚಿರಸ್ಥಾಯಿಯಾಗಿದ್ದಾರೆ. ಅಸಾಧಾರಣ ಸಾಧನೆ ಮಾಡಿ ಮೌನ ಕ್ರಾಂತಿಯ ಹರಿಕಾರನೆನಿಸಿಕೊಂಡಿರುವ ಅವರು, ಮಾನವತಾವಾದಿಯಾಗಿದ್ದರು ಎಂದು ಅವರು ನುಡಿದರು.


ವೃದ್ಧಾಪ್ಯ ವೇತನ, ನಿರುದ್ಯೋಗಿಗಳಿಗೆ ಸ್ಟೈಫಂಡರಿ, ಮಕ್ಕಳಿಗೆ ಪೌಷ್ಟಿಕ ಆಹಾರ, ಭಾಗ್ಯ ಜ್ಯೋತಿಗಳಂತಹ ಯೋಜನೆಗಳನ್ನು ನೀಡಿದ್ದ ಅರಸುರವರು, ಸಾಮಾಜಿಕ, ಆರ್ಥಿಕ ಸಮಾನತೆ, ದುರ್ಬಲ ವರ್ಗದವರಿಗೆ ನೆರವು, ಬೋರ್ಡಿಂಗ್ ಶಾಲೆ, ಉಳುವವನೇ ಹೊಲದೊಡೆಯ, ಹೀಗೆ ಹಲವು ಯೋಜನೆಗಳನ್ನು ಜಾರಿಗೆ ತಂದು ಎಲ್ಲರೂ ಸ್ವಾಭಿಮಾನದಿಂದ ಗೌರವಯುತವಾಗಿ ಬದುಕುವಂತೆ ಮಾಡಿದ್ದರು ಎಂದು ಜಿಟಿಡಿ ಪ್ರಶಂಸಿಸಿದರು.

ಮೈಸೂರು ಜಿಲ್ಲಾಡಳಿತ ಕಚೇರಿಗಳ ಸಂಕೀರ್ಣದ ಆವರಣದಲ್ಲಿ ಡಿ.ದೇವರಾಜ ಅರಸು ಪ್ರತಿಮೆ

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಪ್ರಕಟ

ಮೈಸೂರು, ಆ.20(ಆರ್‌ಕೆ)-ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ನೂತನ ಜಿಲ್ಲಾ ಕಚೇರಿಗಳ ಸಂಕೀರ್ಣದ ಆವರಣದಲ್ಲಿ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ ಪ್ರತಿಮೆ ಸ್ಥಾಪಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದ್ದಾರೆ.

ಕಲಾಮಂದಿರದಲ್ಲಿ ಡಿ.ದೇವರಾಜ ಅರಸು ಅವರ 107ನೇ ಜನ್ಮ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ರಘು ಕೌಟಿಲ್ಯ ಅವರು ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿದ್ದಾಗ ದೇಶಕ್ಕೆ ಮಾದರಿಯಾದ ಅರಸು ಅವರ ಪ್ರತಿಮೆ ನಿರ್ಮಿಸಲು ಪ್ರಸ್ತಾವನೆ ಸಲ್ಲಿಸಿದ್ದರು. ಅದಕ್ಕಾಗಿ 92 ಲಕ್ಷ ರೂ. ಅನುದಾನ ಮಂಜೂರಾಗಿದ್ದು, ಇಷ್ಟರಲ್ಲೇ ಕೆಲಸ ಆರಂಭವಾಗಲಿದೆ ಎಂದರು.



ಉಳುವವನೇ ಭೂಮಿಯ ಒಡೆಯ ಎಂಬ ಕಾನೂನು ತಂದು ಲಕ್ಷಾಂತರ ರೈತರಿಗೆ ಭೂಮಿ ನೀಡಿದ್ದ ಅರಸು ಅವರು, ಹಿಂದುಳಿದ ವರ್ಗದ ಜನರ ಬದುಕಿನ ಆಶಾಕಿರಣವಾಗಿದ್ದರು. ಅವರ ಶಿಷ್ಯ, ರಾಜಕೀಯದಲ್ಲಿ ಸಾಕಷ್ಟು ಏಳು-ಬೀಳುಗಳನ್ನು ಕಂಡಿರುವ ವಿಶ್ವನಾಥ ಅವರಿಗೆ ಡಿ.ದೇವರಾಜ ಅರಸು ಪ್ರಶಸ್ತಿ ನೀಡುತ್ತಿರುವುದು ಅರ್ಥಪೂರ್ಣವಾಗಿದೆ ಎಂದು ಸಚಿವರು ನುಡಿದರು.

ಸಹಕಾರ ಸಚಿವರಾಗಿದ್ದಾಗ ವಿಶ್ವನಾಥ್ ಅವರು ಜಾರಿಗೆ ತಂದಿದ್ದ ಯಶಸ್ವಿನಿ ಯೋಜನೆಯಿಂದ ಲಕ್ಷಾಂತರ ಮಂದಿಗೆ ಉಚಿತ ವೈದ್ಯಕೀಯ ಸೌಲಭ್ಯ ದೊರಕಿತ್ತು. ಇದೀಗ ಅಕ್ಟೋಬರ್ 2 ರಿಂದ ನಮ್ಮ ಸರ್ಕಾರ ಅದಕ್ಕೆ ಮರು ಚಾಲನೆ ನೀಡುತ್ತಿದೆ. ನೇರ ನುಡಿಯ ದಿಟ್ಟ ವ್ಯಕ್ತಿತ್ವ ಹೊಂದಿರುವ ಅವರು ಹಿರಿಯ ಮುತ್ಸದ್ದಿ ಎಂದು ಸೋಮಶೇಖರ್ ನುಡಿದರು.

ವಿಶ್ವನಾಥ್ ಜೆಡಿಎಸ್ ತೊರೆದಿದ್ದರು. ನಾನು ಕಾಂಗ್ರೆಸ್ ಬಿಟ್ಟು ಬಂದಿದ್ದ ಸಂದರ್ಭ ಪುಣೆಯಲ್ಲಿ 14 ದಿನ ಕಾಲ ಕಳೆಯಬೇಕಾಯಿತು. ಆ ವೇಳೆ ದೇವರಾಜ ಅರಸು ಸೇರಿದಂತೆ ಎಲ್ಲಾ ಮುಖ್ಯಮಂತ್ರಿಗಳ ಆಡಳಿತಾವಧಿಯಲ್ಲಾದ ಕೆಲಸಗಳು, ರಾಜಕೀಯ ನಿರ್ಧಾರಗಳು, ನಡವಳಿಕೆಗಳ ಬಗ್ಗೆ ವಿಶ್ವನಾಥ್ ಸುದೀರ್ಘವಾಗಿ ಹೇಳುತ್ತಿದ್ದರಿಂದ ನಮಗೆ 14 ದಿನ ಕಾಲ ಕಳೆದಿದ್ದೇ ಗೊತ್ತಾಗಲಿಲ್ಲ ಎಂದು ಸಚಿವರು ಬಾಂಬೆ ಡೇಸ್ ನೆನಪಿಸಿಕೊಂಡರು.

ಇನ್ನು ಅರ್ಹತೆ ಇದ್ದವರಿಗಷ್ಟೇ ಅವಕಾಶ

ಶಾಸಕ ಜಿ.ಟಿ.ದೇವೇಗೌಡರಿಂದ ವಿದ್ಯಾರ್ಥಿಗಳಿಗೆ ಕಿವಿಮಾತು

ಮೈಸೂರು, ಆ.20(ಎಂಕೆ)- ಈಗ ಶಿಫಾರಸು ನಡೆಯುವುದಿಲ್ಲ. ಅರ್ಹತೆ ಇದ್ದವರಿಗಷ್ಟೇ ಅವಕಾಶ. ಪಾಠದ ಜೊತೆಗೆ ಆಟದಲ್ಲೂ ಮುಂದಿರಬೇಕು. ಗಿಡ-ಮರ ಬೆಳೆಸುವ ಸದ್ಗುಣಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಶಾಸಕ ಜಿ.ಟಿ.ದೇವೇಗೌಡ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಹಾಗೂ ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳ ಕಚೇರಿ ಸಹಯೋಗದೊಂದಿಗೆ ಮೈಸೂರಿನ ಯಲಚನಹಳ್ಳಿ(ಕೆಹೆಚ್‌ಬಿ ಕಾಲೋನಿ)ಯಲ್ಲಿರುವ ಎಸ್.ಎಲ್.ಡಿ. ಎಕ್ಸಲೆಂಟ್ ಪಬ್ಲಿಕ್ ಸ್ಕೂಲ್ ವತಿಯಿಂದ ಆಯೋಜಿಸಿದ್ದ 'ಇಲವಾಲ ಹೋಬಳಿ ಮಟ್ಟದ ಕ್ರೀಡಾಕೂಟ'ದ ಕ್ರೀಡಾ ಜ್ಯೋತಿ ಬೆಳಗಿಸಿ ಮಾತನಾಡಿದ ಅವರು, ಹೋಬಳಿ ಮಟ್ಟದ ಕ್ರೀಡಾಕೂಟದಲ್ಲಿ ಗೆದ್ದವರು ತಾಲೂಕು, ಜಿಲ್ಲಾ, ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಗೆಲ್ಲಬೇಕು. ಹಾಗೆಯೇ ಸೋತವರು ಮತ್ತೆ ಮತ್ತೆ ಗೆಲ್ಲುವ ಪ್ರಯತ್ನ ನಡೆಸಿ ಗೆಲ್ಲಬೇಕು. ಗೆದ್ದು ತಂದೆ-ತಾಯಂದಿರಿಗೆ, ನಾಡಿಗೆ ಕೀರ್ತಿ ತರಬೇಕು ಎಂದು ಪ್ರೋತ್ಸಾಹ ನೀಡಿದರು.

ವಿದ್ಯಾರ್ಥಿಗಳು ಸುಳ್ಳು ಹೇಳಬಾರದು. ನಿತ್ಯ ದೇವರಿಗೆ ನಮಸ್ಕಾರ ಮಾಡುವಂತೆ ತಂದೆ-ತಾಯಿಯಂದಿರಿಗೆ ನಮಸ್ಕರಿಸಿ ಶಾಲೆಗೆ ಬರಬೇಕು. ಉತ್ತಮ ಪ್ರಜೆಗಳಾಗಬೇಕು ಎಂದರಲ್ಲದೆ ಶಾಲೆ ಬಿಟ್ಟಿರುವ ಮಕ್ಕಳನ್ನು ಕರೆದುಕೊಂಡು ಬರಬೇಕು ಎಂದು ವಿದ್ಯಾರ್ಥಿಗಳಿಗೆ ಸೂಚಿಸಿದರು.

ಸ್ವಚ್ಛತೆ ಕಾಪಾಡಿ: ಶಾಲೆ ಆವರಣದಲ್ಲಿ ಸ್ವಚ್ಛತೆ ಕಾಪಾಡುವುದು ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಆಯಾ ಗ್ರಾಪಂನ ಪಿಡಿಓಗಳು, ಶಾಲಾ ಮುಖ್ಯಸ್ಥರು ಗಮನಹರಿಸಬೇಕು ಎಂದು ಸೂಚಿಸಿ, ಪ್ರತಿಯೊಂದು ಶಾಲೆಯಲ್ಲಿಯೂ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದು, ಸದ್ಬಳಕೆ ಮಾಡಿಕೊಳ್ಳುವಂತೆ ತಿಳಿಸಿದರು. ಕ್ರೀಡಾಕೂಟ ಉದ್ಘಾಟಿಸಿದ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ಕ್ರೀಡೆ ಬಹಳ ಮುಖ್ಯವಾಗಿದೆ. ದೈಹಿಕ ಹಾಗೂ ಮಾನಸಿಕವಾಗಿ ಸದೃಢರಾಗಲು ಕ್ರೀಡೆ ಅವಶ್ಯಕವಾಗಿದ್ದು, ಸೋಲು-ಗೆಲುವನ್ನು ಸಮಚಿತ್ತದಿಂದ ಸ್ವೀಕರಿಸುವ ಭಾವನೆ ಬೆಳೆಯುತ್ತದೆ. ಒಟ್ಟಾಗಿ ಸೇರಿ ಆಟವಾಡುವ ಸಾಮೂಹಿಕ ಗುಣವನ್ನು ಸಹ ಕ್ರೀಡೆಯೂ ನಮಗೆ ಕಲಿಸಿಕೊಡುತ್ತದೆ ಎಂದ ಅವರು, ಕ್ರೀಡಾಕೂಟದಲ್ಲಿ ಭಾಗವಹಿಸಿರುವ ಎಲ್ಲಾ ವಿದ್ಯಾರ್ಥಿಗಳಿಗೂ ಶುಭ ಹಾರೈಸಿದರು.



1200 ವಿದ್ಯಾರ್ಥಿಗಳು: ಇಲವಾಲ ಹೋಬಳಿ ಮಟ್ಟದ ಕ್ರೀಡಾಕೂಟದಲ್ಲಿ ಹೋಬಳಿ ವ್ಯಾಪಿಯ ಸರ್ಕಾರಿ ಹಾಗೂ ಖಾಸಗಿ ಹಿರಿಯ ಪ್ರಾಥಮಿಕ ಶಾಲೆಗಳಿಂದ ಸುಮಾರು 1200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿ ಗಮನ ಸೆಳೆದರು.

ಅಂತರರಾಷ್ಟ್ರೀಯ ಕ್ರೀಡಾಪಟು ರಕ್ಷಿತ್ ಪೂಜಾರಿ, ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ, ಜಿಪಂ ಸದಸ್ಯರಾದ ಶಿವಮೂರ್ತಿ, ಅರುಣ್‌ಕುಮಾರ್, ಎಸ್‌ಎಲ್‌ಡಿ ಎಕ್ಸಲೆಂಟ್ ಪಬ್ಲಿಕ್ ಶಾಲೆ ಅಧ್ಯಕ್ಷ ಜಯರಾಮೇಗೌಡ, ಕಾರ್ಯದರ್ಶಿ ಕವಿತಾ, ಖಜಾಂಚಿ ರಾಘವ್, ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ಮಹದೇವ, ಕ್ಷೇತ್ರ ಶಿಕ್ಷಣಾಧಿಕಾರಿ ಎನ್.ಎ.ಮಲ್ಲೇಶ್ವರಿ, ಯೋಗ ಶಿಕ್ಷಕ ಡಾ.ಪಿ.ಎನ್.ಗಣೇಶ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಸಿದ್ದರಾಮಯ್ಯ ಜನಪ್ರಿಯತೆ ಸಹಿಸದೇ ಮೊಟ್ಟೆ ಎಸೆತ

ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆಗೆ ಡಾ.ಮಹದೇವಪ್ಪ ಆಗ್ರಹ



ಮೈಸೂರು, ಆ.20(ಎಂಕೆ)- ಕಾಂಗ್ರೆಸ್ ಮತ್ತು ವಿಪಕ್ಷ ನಾಯಕ ಸಿದ್ದರಾಮಯ್ಯ ಅವರ ಜನಪ್ರಿಯತೆ ಕಂಡು ತನ್ನ ಅಂಗ ಸಂಸ್ಥೆಗಳಿಂದ ಮೊಟ್ಟೆ ಎಸೆಯುವ ಮೂಲಕ ಹೆದರಿಸುವುದಕ್ಕೆ ಬಿಜೆಪಿ ಪ್ರಯತ್ನ ನಡೆಸಿದೆ. ಈ ಪ್ರಕರಣ ಕುರಿತು ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ತನಿಖೆಯಾಗಬೇಕು ಎಂದು ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ ಒತ್ತಾಯಿಸಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ಶನಿವಾರ ಸುದ್ದಿಗೋಷ್ಠಿ ನಡೆಸಿದ ಅವರು, ಸಿದ್ದರಾಮಯ್ಯ ಅವರು ಕೊಡಗು ಜಿಲ್ಲೆಯಲ್ಲಿ ಅತೀವೃಷ್ಟಿಯಿಂದ ಸಂಕಷ್ಟಕ್ಕೆ ಒಳಗಾಗಿದ್ದವರಿಗೆ ಸರ್ಕಾರ ನೀಡಿರುವ ನೆರೆ ಪರಿಹಾರ ಕುರಿತು ಮಾಹಿತಿ ಸಂಗ್ರಹ ಹಾಗೂ ವಸ್ತುಸ್ಥಿತಿಯನ್ನು ಅರಿಯುವುದಕ್ಕಾಗಿ ಪ್ರವಾಸ ಕೈಕೊಂಡಿದ್ದರು. ಈ ಪ್ರವಾಸದ ವೇಳಾಪಟ್ಟಿಯನ್ನು ಜಿಲ್ಲಾಧಿಕಾರಿಗಳು ಸೇರಿದಂತೆ ಸಂಬಂಧಪಟ್ಟ ಅಧಿಕಾರಿಗಳಿಗೂ ಕಳುಹಿಸಲಾಗಿತ್ತು. ವಿಪಕ್ಷ ನಾಯಕರೆಂದರೆ ನೆರಳಿನ ರೂಪದಲ್ಲಿರುವ ಮುಖ್ಯಮಂತ್ರಿಗಳಂತೆ. ಆದರೆ, ಅವರ ಮೇಲೆಯೇ ಮೊಟ್ಟೆ ಎಸೆಯುವ ಕೃತ್ಯ ನಡೆದಿದೆ. ಕೊಡಗು ಜಿಲ್ಲೆ ತನ್ನ ಸಾಂಸ್ಕೃತಿಕ ಬದುಕಿಗೆ, ಸ್ನೇಹಕ್ಕೆ, ಪ್ರೀತಿ ಹಾಗೂ ಅತಿಥಿ ಸತ್ಕಾರಕ್ಕೆ ಹೆಸರುವಾಸಿಯಾಗಿದೆ. ನಾನು ಕೂಡ 2 ಬಾರಿ ಕೊಡಗು ಜಿಲ್ಲೆಯ ಉಸ್ತುವಾರಿ ಸಚಿವನಾಗಿ ಕೆಲಸ ಮಾಡಿದ್ದೇನೆ. ಕೆಲವರಿಂದ ಇವತ್ತು ಕೊಡಗು ಜಿಲ್ಲೆಯ ಘನತೆ ಕುಗ್ಗುವಂತಾಗಿದೆ ಎಂದು ವಿಷಾದಿಸಿದರು.

ದಿನೇದಿನೆ ಬಿಜೆಪಿ ಸರ್ಕಾರದ ಆಡಳಿತ ಕುಗ್ಗುತ್ತಿದೆ. ಅವರದ್ದೇ ಹಿರಿಯ ನಾಯಕರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿ, ಕಣ್ಣೀರು ಹಾಕಿಸಿ ಇಂದು ಅವರಿಗೇನೇ ರೆಡ್ ಕಾರ್ಪೆಟ್ ಹಾಕಿ ಚುನಾವಣಾ ಕಮಿಟಿಗೆ ನೇಮಕ ಮಾಡಿರುವುದನ್ನು ನೋಡಿದರೆ ಸ್ಪಷ್ಟವಾಗಿ ಬಿಜೆಪಿ ಅಲುಗಾಡುತ್ತಿರುವುದು ಕಾಣುತ್ತಿದೆ. ಕಳೆದ 3 ವರ್ಷದ ರಾಜ್ಯ ಬಿಜೆಪಿ ಸರ್ಕಾರದ ಆಡಳಿತದಲ್ಲಿ ಯಾವ ಅಭಿವೃದ್ಧಿಯನ್ನೂ ಕಾಣಲಿಲ್ಲ. ಸ್ವಜನ ಪಕ್ಷಪಾತ, ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ. ಸರ್ಕಾರದ ಏಜೆಂಟ್‌ಗಳಾಗಿ ಕೆಲಸ ಮಾಡುವ ಗುತ್ತಿಗೆದಾರರೇ ಕಮಿಷನ್ ಸರ್ಕಾರ ಎಂದು ದೂರಿದ್ದಾರೆ ಎಂದು ಲೇವಡಿ ಮಾಡಿದರು.

ರಾಜ್ಯದ ಜನರು ಸಿದ್ದರಾಮಯ್ಯ ಅವರ ಅಭಿವೃದ್ಧಿ ಆಡಳಿತವನ್ನು ಸ್ಮರಿಸುತ್ತಿದ್ದಾರೆ. ಅವರ ಜನಪ್ರಿಯತೆಯನ್ನು ಕಂಡು ಸಹಿಸಲಾಗದೆ. ಜನಪರ ಧನಿಯನ್ನು ಅಡಗಿಸುವ ಹುನ್ನಾರ ನಡೆಸಲಾಗಿದೆ. ಕೇಂದ್ರದಲ್ಲಿ ರಾಹುಲ್ ಗಾಂಧಿ, ಸೋನಿಯಾ ಗಾಂಧಿಯವರಿಗೆ ವಿಚಾರಣೆ ಹೆಸರಿನಲ್ಲಿ ಹಿಂಸೆ ನೀಡುತ್ತಿದ್ದೀರಿ. ಹಾಗೆಯೇ ರಾಜ್ಯದಲ್ಲಿ ಸಿದ್ದರಾಮಯ್ಯ ಅವರ ಹೆಸರು ಕೆಡಿಸಿದರೆ ಏನಾದರೂ ರಾಜಕೀಯ ಲಾಭ ಆಗಬಹುದೇನೋ ಎಂಬ ಭ್ರಮೆಯಲ್ಲಿ ಈ ಕೃತ್ಯಗಳನ್ನು ಮಾಡಲು ಮುಂದಾಗಿದ್ದಾರೆ. ಆದರೆ ಇದರಿಂದ ಯಾವುದೇ ಪ್ರಯೋಜನವೂ ಇಲ್ಲ. ಕಾಂಗ್ರೆಸ್ ಪಕ್ಷ ಹೆದರಿಕೊಂಡು ಬಾಯಿ ಮುಚ್ಚಿಕೊಂಡು ಕೂರುವ ಪಕ್ಷವಲ್ಲ ಎಂದರು.

ಸಿದ್ದರಾಮಯ್ಯ ಈ ರಾಜ್ಯ ಕಂಡ ಒಬ್ಬ ಪ್ರಾಮಾಣಿಕ ರಾಜಕಾರಣಿ. ಎಂದೂ ಯಾರನ್ನೂ ತಾರತಮ್ಯ ಮಾಡದೆ ರಾಜ್ಯದ ಅಭಿವೃದ್ಧಿಗಾಗಿ ಶ್ರಮಿಸಿದವರು. ರಾಜ್ಯದ ಉದ್ದಗಲಕ್ಕೂ ಜನರು ಅವರನ್ನು ಇಷ್ಟಪಡುತ್ತಾರೆ. ಅಂತಹವರ ಮೇಲೆ ಬಿಜೆಪಿ, ಆರ್‌ಎಸ್‌ಎಸ್, ಭಜರಂಗದಳ, ಎಬಿವಿಪಿಯವರು ಸೇರಿಕೊಂಡು ಮೊಟ್ಟೆ ಹೊಡೆಯುತ್ತಾರೆ ಎಂದರೆ ಎಂತಹ ಪರಿಸ್ಥಿತಿಗೆ ಕರ್ನಾಟಕ ರಾಜ್ಯವನ್ನು ಬಿಜೆಪಿ ಕೊಂಡೊಯ್ಯುತ್ತಿದೆ ಎಂದು ಪ್ರಶ್ನಿಸಿದ ಅವರು, ಶಾಲಾ ಮಕ್ಕಳಿಗೆ ಸೇರಬೇಕಾದ ಮೊಟ್ಟೆಯನ್ನು ಕದ್ದು ಮಾರಿದ್ದೀರಿ. ಮೊಟ್ಟೆ ತಿನ್ನಬೇಡಿ ಎನ್ನುತ್ತೀರಿ. ಆದರೆ, ಬೀದಿಯಲ್ಲಿ ಮೊಟ್ಟೆ ಎಸೆಯುತ್ತಿದ್ದೀರಿ ಇದು ಯಾವ ಸಂಸ್ಕೃತಿ ಎಂದು ಕಿಡಿಕಾರಿದರು. ಕಾಂಗ್ರೆಸ್ ಜಿಲ್ಲಾಧ್ಯಕ್ಷ ಬಿ.ಜೆ.ವಿಜಯ್‌ಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ನಗರ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ ಶಿವಣ್ಣ, ಭಾಸ್ಕರ್, ಎಡತಲೆ ಮಂಜುನಾಥ್, ಬಸವರಾಜು ಮತ್ತಿತರರು ಉಪಸ್ಥಿತರಿದ್ದರು.

ಮೊಟ್ಟೆ ಮಾತ್ರವಲ್ಲ ಬಟನ್ ಚಾಕು ಸಹ ಎಸೆದರು!

ಮೈಸೂರು, ಆ.20(ಎಂಕೆ)- ಸಿದ್ದರಾಮಯ್ಯ ಅವರ ಕಾರಿನ ಮೇಲೆ ಮೂರು ಕಡೆ ಮೊಟ್ಟೆ ಎಸೆದಿದ್ದಾರೆ. ಅಲ್ಲದೆ ಬಟನ್ ಚಾಕು ಎಸೆದು ಕೊಲೆ ಮಾಡಲು ಯತ್ನಿಸಿದ್ದಾರೆ ಎಂದು ಕೆಪಿಸಿಸಿ ವಕ್ತಾರ ಲಕ್ಷ್ಮಣ್ ಗಂಭೀರ ಆರೋಪ ಮಾಡಿದರು.

ನಾನು ಕೂಡ ಸಿದ್ದರಾಮಯ್ಯ ಅವರ ಜೊತೆ, ಅವರ ಕಾರಿನಲ್ಲೇ ಕೊಡಗಿಗೆ ಹೋಗುತ್ತಿದ್ದೆ. ಸೆಕ್ಯೂರಿಟಿ ಗಾರ್ಡ್‌ಗಳು ಇಲ್ಲದೇ ಇದ್ದಿದ್ದರೆ ಏನಾದರೂ ಅನಾಹುತವಾಗುತ್ತಿತ್ತು. ಮಾಧ್ಯಮಗಳಲ್ಲಿ ಕಾರಿನ ಅಕ್ಕ-ಪಕ್ಕದಲ್ಲಿ ಮೊಟ್ಟೆ ಎಸೆದಿರುವುದನ್ನು ಮಾತ್ರ ನೋಡಿದ್ದೀರಿ. ಆದರೆ ಕಾರಿನ ಗಾಜಿನ ಮೇಲೆಯೇ ಮೊಟ್ಟೆ ಎಸೆಯಲಾಯಿತು. ಮೂರು ಕಡೆ ಮೊಟ್ಟೆ ಎಸೆದರು. ಅಲ್ಲದೆ ಸಿದ್ದರಾಮಯ್ಯ ಅವರ ಕಡೆಗೆ 10 ಅಡಿ ದೂರದಿಂದ ಬಟನ್ ಚಾಕು ಎಸೆದು ಕೊಲೆ ಯತ್ನ ನಡೆಸಿದರು. ಈ ವೇಳೆ ಕಾರು ಸ್ವಲ್ಪ ಮುಂದೆ ಸಾಗಿದ್ದರಿಂದ ಎಸೆದ ಚಾಕು ಕಾರಿಗೆ ತಾಕಿ ಕೆಳಗೆ ಬಿದ್ದಿತ್ತು. ಕೆಳಗೆ ಬಿದ್ದ ಚಾಕನ್ನು ಪೊಲೀಸರೇ ತೆಗೆದುಕೊಂಡು ಹೋದರು. ಇದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಇದನ್ನು ಎಸ್‌ಪಿಯವರಿಗೆ ಹೇಳಿ, ಕೊಲೆ ಯತ್ನ ಪ್ರಕರಣ ದಾಖಲಿಸಬೇಕು ಎಂದು ಒತ್ತಾಯಿಸಿದ್ದೇವೆ. ಸಿದ್ದರಾಮಯ್ಯ ಅವರ ಮೇಲೆ ಅಟ್ಯಾಕ್ ಮಾಡುವ ಸ್ಪಷ್ಟ ಉದ್ದೇಶ ಬಿಜೆಪಿ ಹಾಗೂ ಆರ್‌ಎಸ್‌ಎಸ್‌ನವರದ್ದಾಗಿತ್ತು ಎಂದು ದೂರಿದರು.

ಸಂಪತ್ ಆರ್‌ಎಸ್‌ಎಸ್ ಕಾರ್ಯಕರ್ತ: ಸಿದ್ದರಾಮಯ್ಯ ಅವರ ಕಾರಿನ ಮೇಲೆ ಮೊಟ್ಟೆ ಎಸೆದ ಸಂಪತ್ ಕಾಂಗ್ರೆಸ್ ಕಾರ್ಯಕರ್ತನಲ್ಲ ಆತ ಪಕ್ಕಾ ಆರ್‌ಎಸ್‌ಎಸ್ ಕಾರ್ಯಕರ್ತ ಎಂಬುದಕ್ಕೆ ನನ್ನ ಬಳಿ ಫೋಟೋಗಳಿವೆ. ಅಪ್ಪಚ್ಚು ರಂಜನ್ ಸುಳ್ಳು ಹೇಳಿದ್ದಾರೆ. ಸಂಪತ್ ತಂದೆ ಪಟ್ಟಣ ಪಂಚಾಯಿತಿಯ ಕೌನ್ಸಿಲರ್ ಆಗಿದ್ದರು. ಸಂಪತ್ ಗುತ್ತಿಗೆದಾರನಾಗಿದ್ದು, ಅಪ್ಪಚ್ಚು ರಂಜನ್ ಅವರ ಕಾಮಗಾರಿಗಳನ್ನು ಮಾಡಿಸುತ್ತಿದ್ದಾನೆ. ಮಾಧ್ಯಮಗಳ ದಿಕ್ಕು ತಪ್ಪಿಸಲು ನಡೆಸಿರುವ ಹುನ್ನಾರ ಇದಾಗಿದೆ. ಆತ ಒಂದೇ ಒಂದು ಕಾಂಗ್ರೆಸ್ ಕಾರ್ಯಕ್ರಮದಲ್ಲಿ ಭಾಗವಹಿಸಿಲ್ಲ ಎಂದು ಹೇಳಿದರು.

ನಕ್ಕರೆ ಅದೇ ಸ್ವರ್ಗ

ನ್ಯಾಯಾಧೀಶರು : ದೇವಾಲಯಕ್ಕೆ ಯಾಕೆ ಕನ್ನ ಹಾಕಿದೆ?
ಕಳ್ಳ : ಅದು ನಮ್ಮ ಸಂಪ್ರದಾಯ ಸಾರ್, ಯಾವುದೇ ಕೆಲಸವನ್ನು ದೇವರಿಂದಲೇ ಶುರು ಮಾಡ್ತೀವಿ!

ಮೈಸೂರು ಮಿತ್ರ
ಭಾನುವಾರ, 21 ಆಗಸ್ಟ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ

ನಮ್ಮ ಜೀವನ, ನಾವು ಬದುಕಲಿಕ್ಕಾಗಿಯೇ ಹೊರತು, ಪರರ ಮೆಚ್ಚಿಸಲಿಕ್ಕಾಗಿ ಅಲ್ಲ.–ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಆಳಾಗದವ ಅರಸನಲ್ಲ, ಹಠ ಹಿಡಿದವ ಸಾಮ್ರಾಟನಲ್ಲ

ನಿಮ್ಮ ಪತ್ರಗಳು

ಓಡಾಡಲು ಜಾಗವಿಲ್ಲದಂತೆ ರಸ್ತೆ ಅಗಲೀಕರಣ



ಮಾನ್ಯರೆ,

ಪಿರಿಯಾಪಟ್ಟಣ ತಾಲೂಕಿನ ರಾವಂದೂರು ಮುಂದುವರೆಯುತ್ತಿರುವ ಹೋಬಳಿ ಕೇಂದ್ರವಾಗಿದೆ. ಅನೇಕ ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳ ಕೇಂದ್ರಸ್ಥಾನ ಕೂಡ. ಸುತ್ತಮುತ್ತಲ ಹಳ್ಳಿಗಳ ಜನರು ತಮ್ಮ ಅಗತ್ಯಗಳಿಗೆ ರಾವಂದೂರನ್ನು ಅವಲಂಬಿಸಿದ್ದಾರೆ. ಆರೋಗ್ಯ, ಶಿಕ್ಷಣ, ವಾಣಿಜ್ಯ ಮತ್ತಿತರೇ ಕೆಲಸಗಳಿಗೆ ಇಲ್ಲಿಗೆ ಬರುವುದು ಸರ್ವೇಸಾಮಾನ್ಯ.

ಮೊದಲು ಚಿಕ್ಕದಾಗಿದ್ದ ಇಲ್ಲಿನ ರಸ್ತೆಯನ್ನು ಅಗಲೀಕರಣದ ನೆಪದಲ್ಲಿ ವಿಸ್ತರಿಸುವ ಕೆಲಸವೂ ಮುಗಿದಾಯಿತು. ಆದರೆ ಈಗ ಉಂಟಾಗಿರುವ ಪ್ರಮುಖ ಸಮಸ್ಯೆ ಏನೆಂದರೆ ತಿರುಗಾಡಲು ಜಾಗವಿಲ್ಲದಂತಾಗಿರುವುದು. ಇದನ್ನು ಅದಾವ ಮಾನದಂಡದಲ್ಲಿ ಅಗಲೀಕರಣ ಮಾಡಿದರೋ ಇದನ್ನು ಕಾರ್ಯಗತಗೊಳಿಸಿದ ಲೋಕೋಪಯೋಗಿ ಇಲಾಖೆ ಹಾಗೂ ಅದರ ಕಾರ್ಯಪಾಲಕ ಇಂಜಿನಿಯರ್‌ಗಳು ತಿಳಿಸಬೇಕು.

ಈ ಚಿತ್ರದಲ್ಲಿ ಗಮನಿಸಿ. ರಸ್ತೆ ನಿರ್ಮಾಣವಾದ ಮೇಲೆ ತಿರುಗಾಡಲು ಪಾದಚಾರಿ ಮಾರ್ಗವಿರಬೇಕು. ಜತೆಗೆ ಒಳಚರಂಡಿ ನಿರ್ಮಾಣ ಆಗಬೇಕು. ಅದು ಇಲ್ಲಿ ಆಗಿಲ್ಲ. ಇಲ್ಲಿರುವ ರಸ್ತೆ ಬದಿಯ ಅಂಗಡಿಗಳ ಮಾಲೀಕರು ರಸ್ತೆಗೆ ಅಂಗಡಿಗಳನ್ನು ವಿಸ್ತರಣೆ ಮಾಡಿಕೊಂಡಿದ್ದಾರೆ ಎನಿಸುತ್ತದೆ. ಇವರ ಪ್ರಭಾವವೋ ಅಥವಾ ಬೇರೆ ಬಗೆಯ ಹೋರಾಟಕ್ಕೋ ಅಧಿಕಾರಿಗಳು ಮಣಿದಿದ್ದಾರೆ ಎನಿಸುವುದರಲ್ಲಿ ಸಂದೇಹವಿಲ್ಲ. ಜತೆಗೆ ಸಣ್ಣಪುಟ್ಟ ವಾಹನಗಳು ರಸ್ತೆಯಲ್ಲೇ ನಿಲ್ಲಿಸಿ ರಸ್ತೆ ಸಂಚಾರಕ್ಕೂ ಅಡ್ಡಿಯಾಗಿದೆ. ಹಣ್ಣು ಹಂಪಲು, ತರಕಾರಿಗಳನ್ನು ಮಾರುವ, ಕೊಳ್ಳುವ, ಜತೆಗೆ ತಿರುಗಾಡುವ ಜನರಿಂದ ಇಡೀ ರಸ್ತೆಯೇ ತುಂಬಿ ಹೋಗಿ ಓಡಾಡಲು ಕಷ್ಟಸಾಧ್ಯವೆನಿಸಿದೆ. ಇನ್ನು ಮಕ್ಕಳು, ವಿದ್ಯಾರ್ಥಿಗಳು, ವಯೋವೃದ್ಧರು, ನೌಕರರು, ರೈತರು, ಮಹಿಳೆಯರು ದಿನನಿತ್ಯ ಓಡಾಡಲು ಭಯಪಡುವ ಸ್ಥಿತಿ ಇಲ್ಲಿ ನಿರ್ಮಾಣಗೊಂಡು, ತಿರುಗಾಡುವಾಗ ವಾಹನಗಳು ಮೈಮೇಲೆ ಎಲ್ಲಿ ಎರಗುತ್ತವೋ ಎಂಬ ಭಯದಿಂದ ಜೀವ ಹಿಡಿದೇ ಆತಂಕದಿಂದ ಸಾಗಬೇಕಾಗಿದೆ. ಭಾರಿ ಪ್ರಮಾಣದ ವಾಹನಗಳ ಓಡಾಟವಂತೂ ದುಸ್ತರವೇ ಆಗಿಹೋಗಿದೆ. ಈ ದಿನ ನಿತ್ಯದ ಈ ಗೋಳು ಕೇಳುವ ಜನರು ಯಾರಿದ್ದಾರೆ?

ಪಿರಿಯಾಪಟ್ಟಣದ ಕ್ಷೇತ್ರದ ಮಾಜಿ ಶಾಸಕರು ಇದೇ ಮಾರ್ಗವಾಗಿ ಚಲಿಸುವಾಗ ಈ ಅವ್ಯವಸ್ಥೆ ಕಣ್ಣಿಗೆ ಕಾಣುವುದಿಲ್ಲವೇ? ಈಗ ಹಾಲಿ ಶಾಸಕರು ಇದರ ಬಗ್ಗೆ ಮಾಹಿತಿ ಪಡೆದಿಲ್ಲವೇ? ಇದು ಯಾವುದರ ಲಾಬಿಯೋ, ಸ್ಥಳೀಯ ರಾಜಕಾರಣದ ಪ್ರಭಾವವೋ, ಗೊತ್ತಿಲ್ಲ. ಆದರೆ ಇವು ಹೌದೆಂದು ಸ್ಪಷ್ಟವಾಗಿ ಗೋಚರಿಸುತ್ತದೆ ಅಲ್ಲವೇ? ಹೋಬಳಿ ಬೆಳೆದಂತೆ, ಜನಸಂಖ್ಯೆ ಹೆಚ್ಚಿದಂತೆ ನಾಳೆ ಈ ರಸ್ತೆ ಮತ್ತೆ ವಿಸ್ತಾರಗೊಂಡರೆ ಬೇರೆ ಸಮಸ್ಯೆಗೆ ದಾರಿ ಮಾಡಿದಂತೆ ಆಗುವುದಿಲ್ಲವೇ? ಅನಾಹುತಗಳು ಜರುಗುವ ಮುನ್ನ ಆದಷ್ಟು ಬೇಗ ಕ್ರಮ ಕೈಗೊಳ್ಳಬೇಕೆಂದು ಮನವಿ.

–ವೀರಭದ್ರ, ರಾವಂದೂರು ಎಸ್ ಕೊಪ್ಪಲು, ಪಿರಿಯಾಪಟ್ಟಣ ತಾ.

ಜನಮೆಚ್ಚಿದ ಜನಪ್ರತಿನಿಧಿ ಶಂಕರಲಿಂಗೇಗೌಡರು

ಮಾನ್ಯರೆ,

ಕಳೆದ ಶುಕ್ರವಾರ (5.8.22) 'ಮೈಸೂರು ಮಿತ್ರ'ದಲ್ಲಿ ದಿವಂಗತ ಹೆಚ್.ಎಸ್. ಶಂಕರಲಿಂಗೇಗೌಡರ ಕುರಿತು ಪ್ರಕಟವಾದ ಲೇಖನ ಅರ್ಥಪೂರ್ಣವಾಗಿತ್ತು. ಜನಾನುರಾಗಿಯಾಗಿದ್ದ ಹೆಚ್.ಎಸ್. ಶಂಕರಲಿಂಗೇಗೌಡರು ಚಾಮರಾಜ ಕ್ಷೇತ್ರದಲ್ಲಿ ಸತತ 4 ಬಾರಿ ಶಾಸಕರಾಗಿ ಆಯ್ಕೆಯಾಗಿದ್ದು ಅವರ ಜನಾನುರಾಗಿ ವ್ಯಕ್ತಿತ್ವ, ವೈಯಕ್ತಿಕ ವರ್ಚಸ್ಸು ಅಭಿವೃದ್ಧಿ ಸಾಧನೆಗಳಿಂದ, ಅವರ ನೇರ ಕಟು ನುಡಿ ಬಹುಶಃ ಅವರಿಗೆ ಅಂದಿನ ಬಿಜೆಪಿ ಸರ್ಕಾರದಲ್ಲಿ ಸಚಿವ ಸ್ಥಾನದಿಂದ ವಂಚಿಸಿತು. ಈ ಕೊರಗಿನಿಂದ ಗೌಡರು ಅನಾರೋಗ್ಯಕ್ಕೆ ತುತ್ತಾದರು. ಗೌಡರು ಎಷ್ಟು ಜನಪ್ರಿಯರಾಗಿದ್ದರೆಂದರೆ ಅವರ ನಾಮಪತ್ರ ಸಲ್ಲಿಕೆಗೆ ತಗಲುವ ವೆಚ್ಚವನ್ನು ಜನರೇ ಚಂದಾ ಎತ್ತಿ ಭರಿಸುತ್ತಿದ್ದರು. ಇಂದಿನ ಜನಪ್ರತಿನಿಧಿಗಳು ಚುನಾವಣೆಗಳಿಗೆ ನೂರಾರು ಕೋಟಿ ರೂ. ಖರ್ಚು ಮಾಡುತ್ತಿದ್ದಾರೆ. ಗೌಡರು ಹಣ ಖರ್ಚು ಮಾಡದೇ ಚುನಾವಣೆಗಳಲ್ಲಿ ಗೆಲ್ಲುತ್ತಿದ್ದರು. ನ ಭೂತೋ ನ ಭವಿಷ್ಯತಿ ಎಂಬಂತೆ ಇನ್ನೊಬ್ಬ ಗೌಡರನ್ನು ನೋಡಲು ಅಸಾಧ್ಯ. ಬೇಕ್ ಪಾಯಿಂಟ್ ವೃತ್ತಕ್ಕೆ ಅವರ ಹೆಸರು ನಾಮಕರಣ ಮಾಡಿ ಸೂಕ್ತ ಗೌರವ ಸಲ್ಲಿಸಲು ಮನವಿ.

–ಜಿ.ಪಿ. ರಾಜೇಶ್, ವಿ.ವಿ. ಮೊಹಲ್ಲಾ, ಮೈಸೂರು.

ಮೊಟ್ಟೆ ಎಸೆಯುವುದು ಕೊಡಗು ಸಂಸ್ಕೃತಿಯಲ್ಲ

ಮಾನ್ಯರೆ,

ಕರ್ನಾಟಕ ರಾಜ್ಯದಲ್ಲಿ ಕೊಡಗು ಜಿಲ್ಲೆ ಅದರದೇ ಆದಂತಹ ವಿಶಿಷ್ಟವಾದ ದೇಶವೇ ಮೆಚ್ಚುವಂತಹ ಸಂಸ್ಕೃತಿಯನ್ನು ಹೊಂದಿದೆ. ಇಂತಹ ನೆಲೆಯಲ್ಲಿ ರಾಜ್ಯದ ವಿರೋಧ ಪಕ್ಷದ ನಾಯಕರು ಮತ್ತು ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಮಡಿಕೇರಿಯಲ್ಲಿ ನೆರೆ ಪ್ರವಾಹದಿಂದ ಹಾನಿಗೀಡಾದ ಸ್ಥಳಗಳನ್ನು ವೀಕ್ಷಿಸಲು ತೆರಳಿದ್ದ ಸಂದರ್ಭದಲ್ಲಿ ಯಾರೋ ಕಿಡಿಗೇಡಿಗಳು ವಿಪಕ್ಷ ನಾಯಕರ ಕಾರಿಗೆ ಪ್ರತಿಭಟನೆಯ ನೆಪದಲ್ಲಿ ಮೊಟ್ಟೆಯನ್ನು ಎಸೆದಿದ್ದಾರೆ. ಇದು ನಿಜವಾಗಿಯೂ ತಪ್ಪು. ಮತ್ತೆ ಕೊಡಗಿನ ಜನರು ಅಳವಡಿಸಿಕೊಂಡಿರುವ ಸಂಸ್ಕೃತಿಯು ಸಹ ಅಲ್ಲ. ಒಬ್ಬ ವಿಪಕ್ಷ ನಾಯಕನಾಗಿ ಕರ್ತವ್ಯ ನಿರ್ವಹಿಸಲು ಬಂದವರಿಗೆ ಅಡ್ಡಿಪಡಿಸುವುದು ಸರಿಯಲ್ಲ.

ಪ್ರತಿಭಟನೆ ಮಾಡಲಿ ಅದಕ್ಕೆ ಬೇಡ ಎಂದು ಹೇಳಿಲ್ಲ. ಆದರೆ ಮೊಟ್ಟೆ ಎಸೆಯುವುದು ನ್ಯಾಯವೇ..? ಕೊಡಗು ಜಿಲ್ಲೆಯಲ್ಲಿ ಸರ್ಕಾರದಿಂದ ಆಗಿರುವ ಕೆಲವು ಕಾಮಗಾರಿಯನ್ನು ನೋಡಿ ಅದರಿಂದ ಆದ ಲಾಭ –ನಷ್ಟವನ್ನು ಜನತೆಯ ಪರವಾಗಿ ಸಿದ್ದರಾಮಯ್ಯನವರು ಧ್ವನಿ ಎತ್ತುತ್ತಾರೆ ಎಂಬ ಭಯದಲ್ಲಿ ಇಂತಹ ಅಹಿತಕರ ಘಟನೆಯನ್ನು ನಡೆಸಲು ಯಾರೋ ಕಿಡಿಗೇಡಿಗಳು ಮುಂದಾಗಿದ್ದಾರೆ. ಇನ್ನು ಮುಂದಾದರೂ ಯಾರೇ ನಾಯಕರು ಜಿಲ್ಲೆಯ ಅಭಿವೃದ್ಧಿ ಕೆಲಸಕ್ಕೆ ಬಂದಾಗ ಅಡ್ಡಿಪಡಿಸಬಾರದು

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ವೃತ್ತಿಗಳೇ ಪ್ರವೃತ್ತಿಗಳಾಗಿ ಬಿಡುತ್ತವೆ!!

ನಾವೆಲ್ಲರೂ ನಮ್ಮ ಜೀವನ ನಿರ್ವಹಣೆಗಾಗಿ ವಿವಿಧ ವೃತ್ತಿಗಳನ್ನು/ಕಸಬುಗಳನ್ನು ಮಾಡುತ್ತಿರುತ್ತೇವೆ. ಕೆಲವು ವೃತ್ತಿಗಳು ಪಿತ್ರಾರ್ಜಿತವಾಗಿ, ಅಂದರೆ ಕುಲಕಸುಬಾಗಿ ಬಂದಿರಬಹುದು, ಕೆಲವು ನಮ್ಮ ಇಷ್ಟದ ಕೆಲಸವಾಗಿರಬಹುದು, ಕೆಲವು ಇಷ್ಟವಿಲ್ಲದಿದ್ದರೂ ಜೀವನ ನಿರ್ವಹಣೆಗಾಗಿ ಮಾಡುವ ಅನಿವಾರ್ಯ ಕೆಲಸಗಳಾಗಿರಬಹುದು. ಇಷ್ಟವಿರಲಿ, ಇಲ್ಲದಿರಲಿ ಕೆಲಸ ಮಾಡುವುದು ಒಂದು ರೀತಿಯ ಅನಿವಾರ್ಯ.

ನಮ್ಮ ವಿದ್ಯಾಭ್ಯಾಸ ಪದ್ಧತಿಯಲ್ಲಿ ನಾವು ಓದಿದ ಅಥವಾ ನನಗಿಷ್ಟವಾಗುವ ವಿಷಯದ ಕುರಿತಾದ ಕೆಲಸ ಸಿಗುವುದು ಅಪರೂಪ. ನಾನು ಅನೇಕ ಸರ್ಕಾರಿ ಅಧಿಕಾರಿಗಳನ್ನು ಕೇಳಿದ್ದೇನೆ. ಅವರು ಏನು ಓದಿದ್ದರು? ಎಂದು. ಪದವಿ ಅಥವಾ ಸ್ನಾತಕೋತ್ತರ ಪದವಿ ಗಳಿಸಲು ಯಾವ ವಿಷಯ ತೆಗೆದುಕೊಂಡಿದ್ದರು, ಕೆಲವರು ಸಂಶೋಧನೆ ನಡೆಸಿ ಪಿಎಚ್.ಡಿ ತೆಗೆದುಕೊಂಡಿದ್ದ ವಿಷಯಕ್ಕೂ ಈಗ ಅವರು ಮಾಡುತ್ತಿರುವ ಕೆಲಸದಲ್ಲಿ ಆ ವಿಷಯಗಳ ಉಪಯೋಗವೆಷ್ಟು? ಎಂದು ಪ್ರಶ್ನಿಸಿದಾಗ ಶೇಕಡಾ 90 ರಷ್ಟು ಜನರು ತಾವು ಪದವಿ, ಸ್ನಾತಕೋತ್ತರ ಪದವಿಗಳಲ್ಲಿ ಓದಿದ ಯಾವ ವಿಷಯವೂ ಈಗ ಉಪಯೋಗಕ್ಕೆ ಬರುತ್ತಿಲ್ಲ ಎನ್ನುತ್ತಾರೆ. ಕೆಲಸಕ್ಕೆ ಸೇರಲು ಒಂದು ಡಿಗ್ರಿ ಬೇಕಾಗಿತ್ತು, ಅಷ್ಟನ್ನೇ ಪ್ರಾಧಿಕಾರ ಪರಿಗಣಿಸಿ ಕೆಲಸ ನೀಡಿದೆ. ಇಲ್ಲಿ ನಾವು ಕಾಲೇಜಿನಲ್ಲಿ ಓದಿದ ವಿಷಯಕ್ಕೂ ನಾವು ಈಗ ಮಾಡುತ್ತಿರುವ ಕೆಲಸಕ್ಕೂ ಯಾವುದೇ ಸಂಬಂಧವಿಲ್ಲ. ಅಲ್ಲದೇ ಕಾಲೇಜಿನಿಂದ ಹೊರಬಂದು ಹತ್ತಾರು ವರ್ಷಗಳು ಆಗಿರುವುದರಿಂದ ಆಗ ಕಾಲೇಜಿನಲ್ಲಿ ಓದಿದ ವಿಷಯಗಳೆಲ್ಲಾ ಮರೆತುಹೋಗಿದೆ. ಈಗ ಅವು ಯಾವುವೂ ನೆನಪಿಗೆ ಬರುವುದಿಲ್ಲ ಎಂದು ಹೇಳುತ್ತಾರೆ. ಶಾಲಾ, ಕಾಲೇಜಿನ ಶಿಕ್ಷಕರು, ಉಪನ್ಯಾಸಕರಿಗೆ ಮಾತ್ರ ಅವರು ಕಲಿತ ವಿಷಯ ಬೋಧಿಸುವುದಾದರೆ ನೆನಪಿರುತ್ತದೆ. ಉಳಿದಂತೆ ನಾವು ಕಲಿತಿದ್ದು ಯಾವ ಪ್ರಯೋಜನಕ್ಕೂ ಬರುತ್ತಿಲ್ಲ ಎಂದು ಬಹುತೇಕರು ಹೇಳುತ್ತಾರೆ. ಇದು ಸರ್ಕಾರಿ ವ್ಯವಸ್ಥೆ ಎಂದೇನಲ್ಲ, ಖಾಸಗಿ ಸಂಸ್ಥೆಗಳಲ್ಲೂ ಇದನ್ನೇ ಕಾಣುತ್ತೇವೆ. ಒಬ್ಬ ಇಂಜಿನಿಯರಿಂಗ್ ಪದವೀಧರನೂ ತಾನು ಪಡೆದ ಶಿಕ್ಷಣಕ್ಕಿಂತ ವಿಭಿನ್ನವಾದ ಕೆಲಸ ಮಾಡುವುದನ್ನು ಕಾಣುತ್ತೇವೆ.

ಹೀಗಾದರೆ ನಾವು ಕಾಲೇಜಿನಲ್ಲಿ ಕಲಿಸುತ್ತಿರುವ ವಿಷಯ ಯಾರ ಉಪಯೋಗಕ್ಕಾಗಿ? ಎಂದು ಪ್ರಶ್ನಿಸಬೇಕೆನ್ನಿಸುತ್ತದೆ. ಪದವಿ ಹಾಗೂ ಸ್ನಾತಕೋತ್ತರ ಪದವಿ ಪಡೆದವರು ಒಂದು ನಿರ್ದಿಷ್ಟ ವಿಷಯದಲ್ಲಿ ಸಾಕಷ್ಟು ಜ್ಞಾನಾರ್ಜನೆ ಮಾಡಿರುತ್ತಾರೆ. ಅವರು ಓದಿದ ವಿಷಯದ ಬಗ್ಗೆ ಅವರಿಂದ ಕೆಲಸ ತೆಗೆಸಿಕೊಂಡರೆ ಅವರು ಪಡೆದ ಶಿಕ್ಷಣ ಸಾರ್ಥಕ ಎನಿಸುತ್ತದೆ. ಆದರೆ ಬಹುತೇಕರಿಗೆ ತಾವು ಪಡೆದ ಶಿಕ್ಷಣದ ವಿಷಯಗಳು ಉಪಯೋಗವಾಗುವಂತಹ ಕೆಲಸ ದೊರಕುವುದಿಲ್ಲ.

ನಮ್ಮ ಸರ್ಕಾರಗಳು ಪ್ರತಿ ವಿದ್ಯಾರ್ಥಿಗಳ ಮೇಲೆ ಸಾಕಷ್ಟು ಹಣ ಖರ್ಚು ಮಾಡುತ್ತವೆ. ಆದರೆ ಅವರು ಓದಿದ ವಿಷಯದ ಬಗ್ಗೆ ಅವರಿಗೆ ಕೆಲಸ ಸಿಗುವಂತೆ ಮಾಡುವುದಿಲ್ಲ. ನಾವು ಓದಿದ ವಿಷಯದ ಉಪಯೋಗ ಸಮಾಜಕ್ಕೆ ಒದಗುವಂತೆಯೂ ಆಗುತ್ತಿಲ್ಲ. ಇಂಜಿನಿಯರಿಂಗ್ ಪದವೀಧರರೂ ಸಹಾ ತಾವು ಓದಿದ ಶಾಖೆಗೆ ಸಂಬಂಧಿಸಿದ ಕೆಲಸಕ್ಕಿಂತ ಹೊಸದಾಗಿ, ಕಾಲೇಜಿನ ಹೊರಗಿನ ಕೋರ್ಸ್ ಮಾಡಿದ್ದಲ್ಲಿ ಅದರ ಆಧಾರದ ಮೇಲೆ ಪಡೆದ ಕೆಲಸದಲ್ಲಿ ತೊಡಗಿರುತ್ತಾರೆ. ಹೀಗಾಗುವುದು ದೇಶದ ಹಿತದೃಷ್ಟಿಯಿಂದ ಸರಿ ಎನಿಸುವುದಿಲ್ಲ. ಹಾಗೆ ನೋಡಿದರೆ ಇಂದು ತಾಂತ್ರಿಕ ವಿಷಯದಲ್ಲಿ ಪದವಿ ಪಡೆದವರು ಕಾಲೇಜಿನಲ್ಲಿ ಪಾಠ ಮಾಡುವ ಕೆಲಸವನ್ನೂ ಇಷ್ಟಪಡುವುದಿಲ್ಲ, ಬದಲಾಗಿ ಹೆಚ್ಚು ಸಂಬಳ ಬರುವ ಉದ್ಯೋಗ ಅರಸುತ್ತಾರೆ. ಇದರ ಪರಿಣಾಮವಾಗಿ ಇಂದು ಇಲ್ಲಿ ಪದವಿ ಪಡೆದವರು ಹೆಚ್ಚಿನ ವೇತನದ ಆಸೆಯಿಂದ ವಿದೇಶಗಳಿಗೆ ತೆರಳುತ್ತಾರೆ. ಅಂದರೆ ಅವರ ಮೇಲೆ ಸರ್ಕಾರ ಮಾಡಿದ ವೆಚ್ಚವನ್ನು ನಿರ್ಲಕ್ಷಿಸಿ ಅವರು ಹಣದ ಆಸೆಗಾಗಿ ದೇಶ ಬಿಟ್ಟು ಹೋದಂತಾಗುತ್ತದೆ. ಈಗಿನ ನಮ್ಮ ದೇಶದ ಪರಿಸ್ಥಿತಿಯಲ್ಲಿ ನಮಗೆ ವಿದ್ಯಾವಂತರ, ಬುದ್ಧಿವಂತರ ಅವಶ್ಯಕತೆ ಇದೆ. ಹಾಗಾಗಿ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆ ಬೇಕೆನಿಸುತ್ತದೆ. ಹೊಸ ಶಿಕ್ಷಣ ನೀತಿ ಈ ಬಗ್ಗೆ ಹೇಗೆ ಕ್ರಮ ತೆಗೆದುಕೊಳ್ಳುತ್ತದೆ ಎಂಬುದನ್ನು ಮುಂದಿನ ದಿನಗಳಲ್ಲಿ ಕಾದು ನೋಡಬೇಕಾಗುತ್ತದೆ.

ಇದು ಒಂದು ಭಾಗವಾದರೆ ನಾವು ಮಾಡುವ ಉದ್ಯೋಗವೇ ನಮ್ಮನ್ನು ಆವರಿಸಿಕೊಂಡು ಬಿಡುತ್ತಿರುವುದನ್ನೂ ನಾವು ಗಮನಿಸಬೇಕು. ಕೊನೆಗೆ ನಾವು ಮಾಡುವ ವೃತ್ತಿಯೇ ನಮ್ಮ ಜೀವನವೂ ಆಗಿಬಿಡುತ್ತದೆ. ಇಂತಹ ವೃತ್ತಿಗಳಲ್ಲಿ ಕೆಲಸ ಮಾಡುವವರು ನಿವೃತ್ತರಾದಾಗ ಅವರಿಗೆ ಬೇರೆ ಕೆಲಸವೇ ಗೊತ್ತಿಲ್ಲದಂತಾಗಿ ಬಿಡುತ್ತದೆ ಎಂಬುದನ್ನೂ ಗಮನಿಸಬೇಕು. ನಾವು ಮಾಡುವ ಉದ್ಯೋಗಕ್ಕೆ ಅನುಗುಣವಾಗಿ ನಮಗೆ ಸ್ನೇಹಿತರೂ ಸಿಕ್ಕಿರುತ್ತಾರೆ. ನಮ್ಮ ಉದ್ಯೋಗ ನಮ್ಮ ಮೇಲೆ ಎಷ್ಟರಮಟ್ಟಿನ ಪರಿಣಾಮ ಬೀರಿರುತ್ತದೆ ಎಂದರೆ ನಮ್ಮ ಕನಸಿನಲ್ಲೂ ಅದು ಮುಂದುವರೆದಿರುತ್ತದೆ. ನಮಗೆ ಬೀಳುವ ಕನಸು ಬಹುತೇಕ ನಾವು ಮಾಡುವ ಉದ್ಯೋಗಕ್ಕೆ ಸಂಬಂಧಿಸಿದ್ದಾಗಿರುತ್ತದೆ ಎಂಬುದೂ ಗಮನಾರ್ಹ ವಿಚಾರವೇ. ಒಬ್ಬ ಶಾಲಾ ಶಿಕ್ಷಕನಿಗೆ, ಶಿಕ್ಷಣ ಕ್ಷೇತ್ರದವರೇ ಹೆಚ್ಚಾಗಿ ಸ್ನೇಹಿತರಾಗಿರುತ್ತಾರೆ. ಅವರು ಕನಸಿನಲ್ಲಿ ತಮ್ಮ ಶಾಲೆಗೆ ಸಂಬಂಧಿಸಿದ ವಿಷಯವನ್ನೇ ಕಾಣುತ್ತಾರೆ. ಒಬ್ಬ ವ್ಯಾಪಾರಿ ತಾನು ಲಾಭಕೋರನಾಗಿದ್ದರೆ ಅವನ ಸ್ನೇಹಿತರೂ ಸಾಮಾನ್ಯವಾಗಿ ಅಂತಹ ಮನೋಭಾವದವರೇ ಆಗಿರುತ್ತಾರೆ. ಇದಕ್ಕೆ ಕೆಲವು ಅಪವಾದಗಳಿರಬಹುದು, ಇಲ್ಲವೆಂದಲ್ಲ. ಹಾಗೆಯೇ ಒಬ್ಬ ಪ್ರಾಮಾಣಿಕ ವ್ಯಾಪಾರಿಯ ಸ್ನೇಹ ವೃಂದವೂ ಪ್ರಾಮಾಣಿಕರದ್ದೇ ಆಗಿರುತ್ತದೆ ಎಂದು ಹೇಳಬಹುದು. ಒಬ್ಬ ಮೂಟೆ ಹೊರುವವನ ಗೆಳೆಯರು ಶ್ರಮಜೀವಿಗಳೇ ಆಗಿರುತ್ತಾರೆ. ವೈದ್ಯರ ಬಳಗ ವೈದ್ಯಕೀಯ ಕ್ಷೇತ್ರವೇ ಆಗಿರುತ್ತದೆ. ಅದೇ ರೀತಿ ವಿವಿಧ ಉದ್ಯೋಗದಲ್ಲಿರುವವರು ಅಂತಹ ಸ್ನೇಹಿತರನ್ನೇ ಸಾಮಾನ್ಯವಾಗಿ ಪಡೆದಿರುತ್ತಾರೆ. ಒಬ್ಬ ಅರ್ಚಕ ದೈವಭಕ್ತರ ಗುಂಪಿನಲ್ಲಿ ಗುರುತಿಸಿಕೊಳ್ಳಲು ಇಷ್ಟಪಡುತ್ತಾನೆ.

> ಇದರ ಅರ್ಥ ನಾವು ಮಾಡುತ್ತಿರುವ ಕೆಲಸದ ಜೊತೆಗೆ ಇತರೆ ವಿಷಯಗಳ ಬಗ್ಗೆಯೂ ಆಸಕ್ತಿ ಹೊಂದಿರಬೇಕು. ಕುತೂಹಲಕ್ಕಾದರೂ ಇತರೆಯವರು ಮಾಡುತ್ತಿರುವ ಕೆಲಸ ಏನೆಂದು ತಿಳಿದುಕೊಂಡಿರಬೇಕು. ಕಾರಿನ ಮಾಲೀಕನಾದ ಮೇಲೆ ಹೇಗೆ ಕಾರಿನ ಬಗ್ಗೆ ಸ್ವಲ್ಪವಾದರೂ ತಿಳುವಳಿಕೆ ಹೊಂದಬೇಕಾದುದು ಅನಿವಾರ್ಯವೋ ಹಾಗೆ ಮತ್ತೊಂದು ವಿಷಯವೂ ತನಗೇ ಸಂಬಂಧಿಸಿದ್ದು ಎಂಬ ಮನೋಭಾವ ಬೆಳೆಸಿಕೊಳ್ಳಬೇಕು. ನಾವು ಕೂಪಮಂಡೂಕದಂತೆ ತನಗೆ ಗೊತ್ತಿರುವಷ್ಟೇ ಪ್ರಪಂಚ ಎಂದು ಭಾವಿಸಬಾರದು.

ಇಂತಹ ವೃತ್ತಿ ನಿರತರ ಬದುಕು ಹೇಗಿರುತ್ತದೆ? ಎಂದು ಅವಲೋಕಿಸಿದಾಗ ವಿಸ್ಮಯ ವಿಷಯಗಳು ಕಂಡುಬರುತ್ತವೆ. ಯಾವ ಉದ್ಯೋಗವೇ ಆಗಲಿ ಯಾರಿಗೂ ಸಂಪೂರ್ಣವಾದ ಸಮಾಧಾನ ನೀಡಿರುವುದಿಲ್ಲ. ದೂರದ ಬೆಟ್ಟ ನುಣ್ಣಗೆ ಎಂಬ ಗಾದೆ ಮಾತಿನಂತೆ ಸಾಮಾನ್ಯವಾಗಿ ನಾವು ಮಾಡುತ್ತಿರುವ ಉದ್ಯೋಗವನ್ನು ನಾವು ಪ್ರೀತಿಸುವುದಕ್ಕಿಂತ ಮತ್ತೊಬ್ಬರು ಮಾಡುತ್ತಿರುವ ಉದ್ಯೋಗವೇ ಶ್ರೇಷ್ಠ ಎಂಬಂತಹ ಭಾವನೆ ಬರುವುದು ಸಹಜ. ತಾನು ಮಾಡುತ್ತಿರುವ ಉದ್ಯೋಗದಲ್ಲಿ ಇಂತಹುದೊಂದು ಇಲ್ಲದಿದ್ದರೆ, ಅಥವಾ ಇಂತಹುದೊಂದು ಇದ್ದರೆ ಚೆನ್ನಾಗಿರುತ್ತದೆ ಎಂಬ ಭಾವನೆ ಸಾಮಾನ್ಯವಾಗಿರುತ್ತದೆ. ಅದು ತನ್ನ ಮೇಲಧಿಕಾರಿಯ ಬಗ್ಗೆ ಇರಬಹುದು, ತನ್ನ ಸಹೋದ್ಯೋಗಿಗಳ ಬಗ್ಗೆ ಇರಬಹುದು. ನಮಗೆ ಅವರು ಸ್ವಲ್ಪ ಗದರಿ ಮಾತನಾಡಿದರೂ ಅಥವಾ ನಮ್ಮನ್ನು ತೆಗಳಿ ಮಾತನಾಡಿದರೂ ನಾವು ಅವರ ವಿರುದ್ಧ ಒಂದು ರೀತಿಯ ಸೇಡಿನ ಮನೋಭಾವ ಬೆಳೆಸಿಕೊಂಡು ಬಿಟ್ಟಿರುತ್ತೇವೆ. ನಾವು ಇಷ್ಟಪಡದ ಅಂತಹ ವ್ಯಕ್ತಿಗೆ ಏನಾದರೂ ಕೇಡಾಗಲಿ ಎಂದು ಬಯಸುತ್ತೇವೆ. ಅದರ ಬದಲು ಅಂತಹ ವ್ಯಕ್ತಿಯ ಬಗ್ಗೆ ತನಗೆ ಏನು ಇಷ್ಟವಾಗುತ್ತಿಲ್ಲ ಎಂಬುದನ್ನು ಅವಲೋಕಿಸಬೇಕು, ಕೇಡು ಬಯಸುವವರಿಗೆ ಕೇಡೇ ಆಗುತ್ತದೆ ಎಂಬಂತೆ ನಾವು ಅಂತಹ ಮತ್ಸರದಿಂದ ನಾವೇ ಕುಗ್ಗಿ ಹೋಗುತ್ತೇವೆ. ಸ್ನೇಹದಿಂದ ಸಂಪಾದಿಸಬಹುದೇ ಹೊರತು ಕಳೆದುಕೊಳ್ಳುವುದು ಏನೂ ಇಲ್ಲ ಎಂಬ ಬಗ್ಗೆ ನಮಗೆ ಅರಿವಿದ್ದರೆ ಒಳ್ಳೆಯದು.

ಇಂತಹ ಸೇಡಿನ ಮನೋಭಾವದವರಿಗೆ ಅವರ ಕನಸಿನಲ್ಲಿ ಅಂತಹ ವ್ಯಕ್ತಿಗೆ ತಾನೇ ತೊಂದರೆ ನೀಡಿದಂತೆ ಕಂಡುಬರುತ್ತದೆ, ಇದರಿಂದ ತಾತ್ಕಾಲಿಕವಾಗಿ ಮನಸ್ಸು ಮುದ ಹೊಂದುತ್ತದೆ. ಆದರೆ ನಿದ್ರೆ ಕಳೆದ ಮೇಲೆ ಯಥಾಸ್ಥಿತಿ ಎಂಬುದರ ಅರಿವು ಮೂಡಬೇಕು.

ಇಂತಹ ವೃತ್ತಿಯಲ್ಲೇ ಜೀವನ ಕಳೆದು ನಿವೃತ್ತರಾದವರ ಬಗ್ಗೆ ಗಮನಿಸಿದರೆ, ಅವರು ತಾವು ಮಾಡುತ್ತಿದ್ದ ವೃತ್ತಿಗೆ ಹೊರತಾದದ್ದನ್ನು ಗಮನಿಸಿರುವುದಿಲ್ಲ ಅಥವಾ ಕಲಿತುಕೊಂಡಿರುವುದಿಲ್ಲ. ಇಂತಹವರು ನಿವೃತ್ತರಾದ ಮೇಲೆ ಅವರಿಗೆ ದುಡಿದು ಸಂಪಾದಿಸುವ ಅನಿವಾರ್ಯತೆ ಉಂಟಾದರೆ ಅವರು ತಲ್ಲಣಿಸಿ ಹೋಗುತ್ತಾರೆ. ಅವರಿಗೆ ಅವರು ಮಾಡುತ್ತಿದ್ದ ಕೆಲಸ ಬಿಟ್ಟು ಬೇರೆ ಗೊತ್ತಿರುವುದಿಲ್ಲ, ಜೊತೆಗೆ ವಯಸ್ಸೂ ಆಗಿರುತ್ತದೆ, ತಮ್ಮನ್ನು ತೆಗಳಿ ಯಾರಾದರೂ ಮಾತನಾಡಿದರೂ ಅವರಿಗೆ ಸಹಿಸಿಕೊಳ್ಳಲಾಗುವುದಿಲ್ಲ. ಆಗ ಅವರ ಪಾಡು ಬಹಳ ಹೀನಾಯವಾಗುತ್ತದೆ.

ಇದರ ಅರ್ಥ ನಾವು ಮಾಡುತ್ತಿರುವ ಕೆಲಸದ ಜೊತೆಗೆ ಇತರೆ ವಿಷಯಗಳ ಬಗ್ಗೆಯೂ ಆಸಕ್ತಿ ಹೊಂದಿರಬೇಕು. ಕುತೂಹಲಕ್ಕಾದರೂ ಇತರೆಯವರು ಮಾಡುತ್ತಿರುವ ಕೆಲಸ ಏನೆಂದು ತಿಳಿದುಕೊಂಡಿರಬೇಕು. ಕಾರಿನ ಮಾಲೀಕನಾದ ಮೇಲೆ ಕಾರಿನ ಬಗ್ಗೆ ಸ್ವಲ್ಪವಾದರೂ ತಿಳುವಳಿಕೆ ಹೊಂದಬೇಕಾದುದು ಅನಿವಾರ್ಯವೋ ಹಾಗೆ ಮತ್ತೊಂದು ವಿಷಯವೂ ತನಗೇ ಸಂಬಂಧಿಸಿದ್ದು ಎಂಬ ಮನೋಭಾವ ಬೆಳೆಸಿಕೊಳ್ಳಬೇಕು. ನಾವು ಕೂಪಮಂಡೂಕದಂತೆ ತನಗೆ ಗೊತ್ತಿರುವಷ್ಟೇ ಪ್ರಪಂಚ ಎಂದು ಭಾವಿಸಬಾರದು.

ಇದರ ಜೊತೆಗೆ ನಾವು ಮಾಡುತ್ತಿರುವ ಕೆಲಸದಲ್ಲಿ ನಾವೆಷ್ಟು ತಲ್ಲೀನರಾಗಿದ್ದೇವೆ ಎಂಬ ಬಗ್ಗೆಯೂ ನಮ್ಮನ್ನು ನಾವು ಪ್ರಶ್ನಿಸಿಕೊಳ್ಳಬೇಕು. ನಮ್ಮ ಕೆಲಸದಲ್ಲಿ ನಮ್ಮನ್ನು ನಾವು ಹೆಚ್ಚಾಗಿ ತೊಡಗಿಸಿಕೊಂಡರೆ ಅದರಿಂದ ನಾವು ಮಾಡುತ್ತಿರುವ ಉದ್ಯೋಗಕ್ಕೆ ನ್ಯಾಯ ಒದಗಿಸಿದಂತಾಗುತ್ತದೆ ಅಲ್ಲದೇ ನಮ್ಮ ಮನೋಭಾವವೂ ಚಿಕಿತ್ಸಕ ರೂಪ ಪಡೆಯುತ್ತದೆ. ಹೇಗೋ ವೇತನ ಬರುತ್ತದೆ, ಏನೋ ಒಂದಷ್ಟು ಮಾಡಿದರಾಯಿತು ಎಂಬ ಮನೋಭಾವ ನಮ್ಮನ್ನು ಸಣ್ಣವರಾಗಿಸುತ್ತದೆ.

ಇಲ್ಲಿ ಸರ್ ಸಿ.ವಿ. ರಾಮನ್ ಅವರ ಒಂದು ಘಟನೆ ನೆನಪಿಸಿಕೊಳ್ಳಬಹುದು. ಅವರು ಭೌತ ವಿಜ್ಞಾನಿಯಾಗಿದ್ದರು. ಒಮ್ಮೆ ರಾತ್ರಿ ವೇಳೆ ಕಾರಿನಲ್ಲಿ ಹೋಗುತ್ತಿದ್ದರು. ಆಗ ಮಳೆ ಬಂದು ನಿಂತಿದ್ದು ರಸ್ತೆಯೆಲ್ಲಾ ಕೆಸರಾಗಿತ್ತು. ದೀಪದ ಹುಳುಗಳು ದಾರಿಯಲ್ಲಿದ್ದ ದೀಪಗಳ ಬಳಿ ಸುಳಿದು, ರೆಕ್ಕೆ ಕಳೆದುಕೊಂಡು ಸತ್ತು ಬೀಳುತ್ತಿದ್ದುದನ್ನು ಅವರು ಕಂಡರು. ರಾಮನ್‌ರವರು ಕಾರಿನ ಚಾಲಕನಿಗೆ ಕಾರು ನಿಲ್ಲಿಸಲು ಹೇಳಿದರು. ಕಾರು ನಿಂತ ಮೇಲೆ ಅವರು ಕಾರಿನಿಂದ ಕೆಳಗಿಳಿದು ಕೆಸರಿನಲ್ಲಿ ನಡೆದುಕೊಂಡು ಹೊರಟು ದೀಪದ ಕಂಬದ ಬಳಿ ನಿಂತರು. ಅಲ್ಲಿ ಹುಳುಗಳಿಂದ ಬಿದ್ದ ರೆಕ್ಕೆಗಳನ್ನು ನಿಧಾನವಾಗಿ ಎತ್ತಿಕೊಂಡು ತಮ್ಮ ಜೇಬಿಗೆ ಹಾಕಿಕೊಳ್ಳುತ್ತಿದ್ದರು. ಆ ಸಮಯಕ್ಕೆ ಅವರ ಸ್ನೇಹಿತ ಅದೇ ಮಾರ್ಗದಲ್ಲಿ ಬಂದರು. 'ಏನು ಮಾಡುತ್ತಿದ್ದೀರಾ? ಏನನ್ನಾದರೂ ಕಳೆದುಕೊಂಡು ಹುಡುಕುತ್ತಿದ್ದೀರಾ? ನಾನೂ ಸಹಾಯ ಮಾಡಲೇ? ಎಂದು ಕೇಳಿದರು. ಅದಕ್ಕೆ ರಾಮನ್‌ರವರು 'ಇಲ್ಲಿ ಹುಳುಗಳ ರೆಕ್ಕೆ ಬಿದ್ದಿದೆಯಲ್ಲಾ ಅವುಗಳನ್ನು ಸಂಗ್ರಹಿಸುತ್ತಿದ್ದೇನೆ. ನಾಳೆ ಸರ್ಕಾರಿ ಶಾಲೆಯಲ್ಲಿ ಪಾಠ ಮಾಡಲು ಹೋಗಬೇಕು. ಅಲ್ಲಿಗೆ ಈ ರೆಕ್ಕೆಗಳನ್ನು ತೆಗೆದುಕೊಂಡು ಹೋಗುತ್ತೇನೆ. ಅಲ್ಲಿ 'ಗ್ರೇಟಿಂಗ್ ಉಪಕರಣ' (ವಕ್ರೀಭವನ ಹೊಂದುವ ಆಯತಾಕಾರದ ಗಾಜಿನ ಫಲಕ) ಇರುತ್ತೆ? ಈ ರೆಕ್ಕೆಗಳನ್ನು ಗ್ರೇಟಿಂಗ್ ಆಗಿ ಬಳಸಿಕೊಳ್ಳಬಹುದು. ಬೆಳಕಿನ ಕಿರಣ, ಈ ರೆಕ್ಕೆಗಳಲ್ಲಿ ವಕ್ರೀಭವನ ಹೊಂದುತ್ತದೆ. ಅದಕ್ಕಾಗಿ ಈ ರೆಕ್ಕೆಗಳನ್ನು ತೆಗೆದು ಜೇಬಿನಲ್ಲಿ ಹಾಕಿಕೊಳ್ಳುತ್ತಿದ್ದೇನೆ ಎಂದರು. ಅವರ ಸ್ನೇಹಿತರೂ ಇವರೊಡನೆ ಕೈಜೋಡಿಸಿದರು. ಒಂದು ಗಂಟೆಯ ಪಾಠಕ್ಕಾಗಿ ಇಷ್ಟೆಲ್ಲಾ ಸಿದ್ಧತೆ ಮಾಡುತ್ತಿದ್ದ ರಾಮನ್‌ರವರು ಸಹಜವಾಗಿ ವಿಶ್ವ ಗುರುತಿಸುವ ವಿಜ್ಞಾನಿಯಾದರು. ಇಂತಹ ಮನೋಭಾವ ನಮ್ಮಲ್ಲಿ ಮೂಡಬೇಕು. ಸಂಬಳಕ್ಕಾಗಿ ಅಲ್ಲದೇ ಮಾಡುತ್ತಿರುವ ಕೆಲಸದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು. ಆಗ ಸಿಗುವ ಆನಂದವೇ ಆನಂದ.

ಸಾಲದ ಹಣ ಕೇಳಿದ ಸ್ನೇಹಿತನ ಹತ್ಯೆ: ಇಬ್ಬರಿಗೆ ಜೀವಾವಧಿ ಶಿಕ್ಷೆ

ವಿಜಯನಗರ ನಾಲ್ಕನೇ ಹಂತದಲ್ಲಿ ಐದು ವರ್ಷದ ಹಿಂದೆ ನಡೆದಿದ್ದ ಹತ್ಯೆ ಪ್ರಕರಣ

ಮೈಸೂರು, ಆ.20(ಎಸ್‌ಬಿಡಿ)– ಸಾಲದ ಹಣ ವಾಪಸ್ ನೀಡುವಂತೆ ಒತ್ತಾಯಿಸಿದ್ದ ಸ್ನೇಹಿತನನ್ನೇ ಅಮಾನುಷವಾಗಿ ಹತ್ಯೆ ಮಾಡಿದ್ದ ಇಬ್ಬರಿಗೆ ಮೈಸೂರಿನ 7ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಕೆ.ದೊಡ್ಡೇಗೌಡ ಜೀವಾವಧಿ ಶಿಕ್ಷೆ ವಿಧಿಸಿದ್ದಾರೆ.

ಮೈಸೂರು ಸಮೀಪದ ಬೆಳವಾಡಿ ಗ್ರಾಮದ ಲೇಟ್ ರಾಜಲಿಂಗಶೆಟ್ಟಿ ಪುತ್ರ ಜಯರಾಮ್(34) ಅವರನ್ನು 5 ವರ್ಷದ ಹಿಂದೆ ವಿಜಯನಗರ 4ನೇ ಹಂತದಲ್ಲಿ ಹತ್ಯೆ ಮಾಡಿದ ಅವರ ಸ್ನೇಹಿತರಾದ ಅನಿಲ್ ಕುಮಾರ್ ಹಾಗೂ ಮಹೇಶ್‌ಗೆ ಶಿಕ್ಷೆ ವಿಧಿಸಲಾಗಿದೆ. ಮೂರನೇ ಆರೋಪಿಯಾಗಿದ್ದ ವಿದ್ಯಾರಣ್ಯಪುರಂನ ಸತೀಶ್ ವಿರುದ್ಧ ಸಾಕ್ಷ್ಯಾಧಾರ ಲಭ್ಯವಾಗದ ಕಾರಣ ಅವರನ್ನು ಬಿಡುಗಡೆ ಮಾಡಲಾಗಿದೆ.

20 ಸಾವಿರಕ್ಕೆ ದುಷ್ಕೃತ್ಯ: ಬೆಳವಾಡಿಯ ಜಯರಾಮ್, ಹೂಟಗಳ್ಳಿ ದೊಡ್ಡಕೆರೆ ಪ್ರದೇಶದಲ್ಲಿ ಬಾಡಿಗೆ ಮನೆಯಲ್ಲಿದ್ದ ಕೆ.ಟಿ.ಸ್ಟ್ರೀಟ್‌ನ ಅನಿಲ್ ಕುಮಾರ್ ಹಾಗೂ ಮೇಗಳಕೊಪ್ಪಲು ಅಂಬೇಡ್ಕರ್ ಕಾಲೋನಿ ನಿವಾಸಿ ಮಹೇಶ್ ಮೈಸೂರು ಹೊರವಲಯದ ಕಾರ್ ಶೋ ರೂಂ ಹಾಗೂ ಸರ್ವೀಸ್ ಸ್ಟೇಷನ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದರು. ಒಂದೇ ಕಡೆ ಕೆಲಸ ಮಾಡುತ್ತಿದ್ದ ಕಾರಣ ಸಹಜವಾಗಿ ಇವರು ಸ್ನೇಹಿತರಾಗಿದ್ದರು. ಹಾಗೆಯೇ ಅನಿಲ್ ಕುಮಾರ್ ಸ್ನೇಹಿತ ಜಯರಾಮ್‌ನಿಂದ 20 ಸಾವಿರ ರೂ. ಸಾಲ ಪಡೆದಿದ್ದ. ನಂತರ ಸಾಲ ವಾಪಸ್ ಕೇಳಿದ ಸಂದರ್ಭದಲ್ಲಿ ಇಬ್ಬರ ನಡುವೆ ಜಗಳವಾಗಿತ್ತು. ಸಾಲದ ಹಣ ವಾಪಸ್ ನೀಡುವಂತೆ ಪದೇ ಪದೇ ಒತ್ತಾಯಿಸಿದ್ದ ಜಯರಾಮ್, ಈ ಬಗ್ಗೆ ಕಾರ್ ಶೋ ರೂಂನ ಮುಖ್ಯಸ್ಥರ ಗಮನಕ್ಕೆ ತಂದು ಅವರಿಂದಲೂ ಬುದ್ಧಿ ಹೇಳಿಸಿದ್ದರು. ಇದರಿಂದ ಸಿಟ್ಟಿಗೆದ್ದ ಅನಿಲ್ ಕುಮಾರ್, ಸ್ನೇಹಿತರೊಂದಿಗೆ ಸೇರಿ ಜಯರಾಮ್‌ನನ್ನು ಹತ್ಯೆ ಮಾಡಿದ.

ಜೊತೆಯಲ್ಲಿದ್ದೇ ಸ್ಕೆಚ್: ಸಾಲದ ಹಣಕ್ಕಾಗಿ ಪೀಡಿಸುತ್ತಿದ್ದ ಜಯರಾಮ್‌ನನ್ನು ಹತ್ಯೆ ಮಾಡಲು ಯೋಚಿಸಿದ ಅನಿಲ್ ಕುಮಾರ್, ಈ ಬಗ್ಗೆ ಆತನ ಸ್ನೇಹಿತರಾದ ಮಹೇಶ್ ಜೊತೆ ಮಾತನಾಡಿದ್ದ. ಜಯರಾಮ್‌ನನ್ನು ಹತ್ಯೆ ಮಾಡುವ ಬಗ್ಗೆ 2017ರ ಮೇ 27ರಂದು ಸಂಜೆ ತಾವು ಕೆಲಸ ಮಾಡುವ ಸ್ಥಳದಲ್ಲೇ ಗೌಪ್ಯವಾಗಿ ಸ್ಕೆಚ್ ಸಿದ್ಧಪಡಿಸಿದ್ದರು. ಇದಕ್ಕೆ ಮಾಜಿ ಸಹೋದ್ಯೋಗಿ ಸತೀಶ್ ಸಹಕಾರವನ್ನೂ ಕೇಳಿದ್ದರು. ಈ ವೇಳೆ ಜಯರಾಮ್ ಸಹ ಅಲ್ಲಿಯೇ ಕೆಲಸ ಮಾಡುತ್ತಿದ್ದ. ಆದರೆ ಸ್ನೇಹಿತರೇ ತಮ್ಮ ಹತ್ಯೆಗೆ ಯೋಜನೆ ರೂಪಿಸುತ್ತಿದ್ದಾರೆ ಎನ್ನುವುದು ತಿಳಿದಿರಲಿಲ್ಲ.

ಅಮಾನುಷವಾಗಿ ಕೊಲೆ: ಅಂದು ರಾತ್ರಿ ಕೆಲಸ ಮುಗಿದ ನಂತರ ಜಯರಾಮ್ ತನ್ನ ಸಹೋದ್ಯೋಗಿ ಜೊತೆ ಊರಿಗೆ ಹೊರಟಾಗ ಮಹೇಶ್ ತಾನೂ ಜೊತೆಯಲ್ಲಿ ಬರುವುದಾಗಿ ಕೇಳಿಕೊಂಡ. ಇದರ ಹಿಂದಿನ ಸಂಚು ಅರಿಯದ ಜಯರಾಮ್, ಮಹೇಶ್‌ನನ್ನೂ ತನ್ನ ಬೈಕ್‌ನಲ್ಲಿ ಕೂರಿಸಿಕೊಂಡು ಹೊರಟಿದ್ದಾನೆ. ರಾತ್ರಿ ಸುಮಾರು 8.30ರ ವೇಳೆ ವಿಜಯನಗರದ 4ನೇ ಹಂತ, ಹೈಟೆನ್ಷನ್ ಡಬಲ್ ರೋಡ್‌ನಲ್ಲಿ ತೆರಳುವಾಗ ಮೂತ್ರ ವಿಸರ್ಜನೆ ನೆಪ ಹೇಳಿ ಮಹೇಶ್, ಬೈಕ್ ನಿಲ್ಲಿಸಲು ಹೇಳಿದ್ದಾನೆ. ಬೈಕ್ ನಿಲ್ಲಿಸುತ್ತಿದ್ದಂತೆ ಮಹೇಶ್ ಕೆಳಗಿಳಿದಿದ್ದು, ಅಷ್ಟರಲ್ಲೇ ಪೂರ್ವ ಯೋಜನೆಯಂತೆ ಆ ಸ್ಥಳದಲ್ಲೇ ಕಾದು



ಕುಳಿತಿದ್ದ ಅನಿಲ್ ಕುಮಾರ್, ಚಾಕುವಿನಿಂದ ಚುಚ್ಚುವಂತೆ ಕೂಗಿಕೊಳ್ಳುತ್ತಾನೆ. ಆಗ ಜಯರಾಮ್‌ನನ್ನು ಬೈಕ್‌ನಿಂದ ಎಳೆದು ಕೆಳಗೆ ಬೀಳಿಸಿದ ಮಹೇಶ್, ತಾನು ತಂದಿದ್ದ ಡ್ರ್ಯಾಗನ್‌ನಿಂದ ಜಯರಾಮ್ ಹೊಟ್ಟೆಗೆ ಚುಚ್ಚುತ್ತಾನೆ. ಅನಿಲ್ ಕುಮಾರ್ ಅದೇ ಡ್ರ್ಯಾಗನ್ ತೆಗೆದುಕೊಂಡು ಜಯರಾಮ್‌ನ ಬೆನ್ನಿಗೆ ಚುಚ್ಚುತ್ತಾನೆ. ಇದರಿಂದ ಬೈಕ್‌ನಲ್ಲಿದ್ದ ಮತ್ತೋರ್ವ ಹೆದರಿ ಅಲ್ಲಿಂದ ಓಡಿ ಹೋಗುತ್ತಾನೆ. ನಂತರ ಮಹೇಶ್, ಜಯರಾಮ್ ಎರಡೂ ಕಾಲುಗಳನ್ನು ಬಿಗಿಯಾಗಿ ಹಿಡಿದುಕೊಂಡರೆ, ಅನಿಲ್ ಕುಮಾರ್, ಜಯರಾಮನ ಹೊಟ್ಟೆ ಮೇಲೆ ಕುಳಿತುಕೊಂಡು ಮನಬಂದಂತೆ ಎದೆ, ಮುಖ, ಕೈಗಳಿಗೆ ಚುಚ್ಚಿ ಅಮಾನುಷವಾಗಿ ಹತ್ಯೆ ಮಾಡಿ, ಪರಾರಿಯಾಗುತ್ತಾರೆ.

ನೆರವಾದ ಸಾಕ್ಷ್ಯಾಧಾರ: ಘಟನೆ ಸಂಬಂಧ ವಿಜಯಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆದರೆ ಜಯರಾಮ್ ಮೇಲೆ ಹಲ್ಲೆ ನಡೆಸಿದಾಗ ಜೊತೆಯಲ್ಲಿದ್ದ ವ್ಯಕ್ತಿ, ಹೆದರಿಕೆಯಿಂದ ಪೊಲೀಸರಿಗೆ ಮಾಹಿತಿ ನೀಡಿರಲಿಲ್ಲ. ಪ್ರಕರಣದ ತನಿಖೆ ನಡೆಸಿದ ಅಂದಿನ ಇನ್‌ಸ್ಪೆಕ್ಟರ್ ಗುರುಪ್ರಸಾದ್, ಘಟನೆ ನಡೆದ ಸಮಯದಲ್ಲಿ ಆ ಮಾರ್ಗದಲ್ಲಿ ಸಾಗಿದ್ದ ವಾಹನ ಸವಾರರ ಪತ್ತೆ ಹಚ್ಚಿ ಪ್ರತ್ಯಕ್ಷ ಸಾಕ್ಷ್ಯ ಸಂಗ್ರಹಿಸಿದ್ದರು. ಗುರುಪ್ರಸಾದ್ ವರ್ಗಾವಣೆ ಬಳಿಕ ಇನ್‌ಸ್ಪೆಕ್ಟರ್ ಪಿ.ಎನ್.ಅನಿಲ್ ಕುಮಾರ್ ತನಿಖೆ ಮುಂದುವರೆಸಿ, ಪ್ರಕರಣ ಸಂಬಂಧ' ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಮೈಸೂರಿನ 7ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಕೆ.ದೊಡ್ಡೇಗೌಡ, ಅನಿಲ್ ಕುಮಾರ್ ಹಾಗೂ ಮಹೇಶ್ ಸೇರಿಕೊಂಡು ಜಯರಾಮ್‌ನನ್ನು ಹತ್ಯೆ ಮಾಡಿರುವುದು ಸಾಕ್ಷ್ಯಾಧಾರಗಳಿಂದ ಸಾಬೀತಾದ ಹಿನ್ನೆಲೆಯಲ್ಲಿ ಇಬ್ಬರಿಗೂ ಜೀವಾವಧಿ ಶಿಕ್ಷೆ ಹಾಗೂ ತಲಾ 37 ಸಾವಿರ ರೂ. ದಂಡ ವಿಧಿಸಿ, ಶುಕ್ರವಾರ ಸಂಜೆ ತೀರ್ಪು ನೀಡಿದರು. ಹತ್ಯೆ ಮಾಡಿದ ನಂತರ ಅನಿಲ್ ಕುಮಾರ್ ಹಾಗೂ ಮಹೇಶ್‌ನನ್ನು ಸತೀಶ್ ತನ್ನ ಬೈಕ್‌ನಲ್ಲಿ ಕೂರಿಸಿಕೊಂಡು ಪರಾರಿಯಾಗಲು ಸಹಕರಿಸಿದ ಎಂದು ಆರೋಪಿಸಲಾಗಿತ್ತು. ಆದರೆ ಸೂಕ್ತ ಸಾಕ್ಷ್ಯಾಧಾರ ಲಭ್ಯವಾಗದ ಕಾರಣ ಸತೀಶ್‌ನನ್ನು ಪ್ರಕರಣದಿಂದ ಬಿಡುಗಡೆಗೆ ಸೂಚಿಸಿದರು. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ಕೆ.ನಾಗರಾಜ ವಾದ ಮಂಡಿಸಿದ್ದರು.

ರಾಜಸ್ಥಾನದಲ್ಲಿ ಭೀಕರ ರಸ್ತೆ ಅಪಘಾತಕ್ಕೆ ಆರು ಮಂದಿ ಬಲಿ

20ಕ್ಕೂ ಹೆಚ್ಚು ಜನರಿಗೆ ಗಾಯ: ಪ್ರಧಾನಿ ಮೋದಿ ಸಂತಾಪ

ಜೈಪುರ, ಆ.20– ರಾಜಸ್ಥಾನದ ಪಾಲಿ ಜಿಲ್ಲೆಯಲ್ಲಿ ಶುಕ್ರವಾರ ರಾತ್ರಿ ಸಂಭವಿಸಿದ ಭೀಕರ ರಸ್ತೆಅಪಘಾತದಲ್ಲಿ 6 ಜನರು ಸಾವನ್ನಪ್ಪಿದ್ದು, 20 ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.



ಯಾತ್ರಾರ್ಥಿಗಳನ್ನು ಹೊತ್ತೊಯ್ಯುತ್ತಿದ್ದ ಟ್ರಾಕ್ಟರ್‌ಗೆ ಟ್ರಕ್ ಡಿಕ್ಕಿ ಹೊಡೆದ ಪರಿಣಾಮ 6 ಮಂದಿ ಜೀವ ಕಳೆದುಕೊಂಡಿದ್ದಾರೆ ಎಂದು ಸುಮೇರ್‌ಪುರ ಪೊಲೀಸ್ ಠಾಣೆ ಪ್ರಭಾರಿ ರಾಮೇಶ್ವರ ಭಾಟಿ ಹೇಳಿದ್ದಾರೆ. ಯಾತ್ರಾರ್ಥಿಗಳು ಜೈಸಲ್ಮೇರ್‌ನ ರಾಮದೇವ್ರಾದ ಬಾಬಾ ರಾಮ್‌ದೇವ್ ದೇವಾಲಯದಿಂದ ಹಿಂದಿರುಗುತ್ತಿದ್ದ ವೇಳೆ ಈ ಅವಘಡ ಸಂಭವಿಸಿದೆ. ಘಟನೆ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಟ್ವೀಟ್ ಮಾಡಿ ಶೋಕ ವ್ಯಕ್ತಪಡಿಸಿದ್ದಾರೆ.

ರಾಜಸ್ಥಾನದ ಪಾಲಿಯಲ್ಲಿ ಸಂಭವಿಸಿದ ಅಪಘಾತ ದುಃಖಕರವಾಗಿದೆ. ಈ ದುಃಖತಪ್ತ ಕುಟುಂಬಗಳೊಂದಿಗೆ ನಾವಿದ್ದೇವೆ, ಗಾಯಗೊಂಡವರು ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ನಾನು ಪ್ರಾರ್ಥಿಸುತ್ತೇನೆ ಎಂದು ಮೋದಿ ಟ್ವೀಟ್‌ನಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ
21-8-2022

ವಿಜಯನಗರದ ಮುಡಾ ಕ್ರೀಡಾಂಗಣ ‘ಬಯಲು ಬಾರ್’









ಎ.ಗಣೇಶ್

ಮೈಸೂರಿನ ವಿಜಯನಗರ ಮೊದಲ ಹಂತದಲ್ಲಿ ಸಾರ್ವಜನಿಕರ ಕೋಟ್ಯಾಂತರ ರೂ. ಹಣ ವ್ಯಯಿಸಿ ನಿರ್ಮಿಸಿರುವ ಕ್ರೀಡಾ ಸಮುಚ್ಛಯ ಈಗ ಬಯಲು ಬಾರ್, ಅನೈತಿಕ ಚಟುವಟಿಕೆಯ ತಾಣವಾಗಿದೆ.

ಕ್ರೀಡಾಪಟುಗಳು, ಕ್ರೀಡಾಸಕ್ತರು ಹಾಗೂ ವಾಯುವಿಹಾರಿಗಳಿಗೆ ಅನುಕೂಲವಾಗಲಿ ಎಂಬ ಸದುದ್ದೇಶದೊಂದಿಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕೋಟ್ಯಾಂತರ ರೂ. ವ್ಯಯಿಸಿ ಈ ಕ್ರೀಡಾಂಗಣ ನಿರ್ಮಿಸಲಾಯಿತು. ಆರಂಭದಲ್ಲಿ ಸದ್ಬಳಕೆಯಾಗುವ ವಾತಾವರಣ ಕಂಡುಬಂದಿತ್ತಾದರೂ ನಂತರದಲ್ಲಿ ದುರ್ಬಳಕೆಗೆ ಗುರಿಯಾಯಿತು. ಆಗಾಗ್ಗೆ ಕ್ರೀಡಾಂಗಣದಲ್ಲಿನ ನಿರ್ಮಾಣ ಹಾಗೂ ಪರಿಕರಗಳ ದುರಸ್ತಿಗೂ ಲಕ್ಷಾಂತರ ರೂ. ಖರ್ಚು ಮಾಡಲಾಗುತ್ತಿದೆ. ಆದರೆ ಸುಸ್ಥಿತಿ ಕಾಪಾಡುಕೊಳ್ಳುವಲ್ಲಿ ನಮ್ಮ ಮುಡಾ ಆಡಳಿತ ವ್ಯವಸ್ಥೆ ಸಂಪೂರ್ಣ ವಿಫಲವಾಗಿದೆ.

ಕತ್ತಲಾದರೆ ಗತಿಯೇ ಬದಲು: ಕತ್ತಲಾದರೆ ಸಾಕು ಈ ಕ್ರೀಡಾಂಗಣದ ಗತಿಯೇ ಬದಲಾಗುತ್ತದೆ. ಸಮೀಪದಲ್ಲಿರುವ ಕಲ್ಯಾಣ ಮಂಟಪದಲ್ಲಿ ವಿವಾಹ ಮಹೋತ್ಸವಕ್ಕೆ ಬರುವವರಿಗೆ ಕ್ರೀಡಾಂಗಣವೇ ಓಪನ್ ಬಾರ್. ಅಕ್ಕಪಕ್ಕದಲ್ಲಿರುವ ಮದ್ಯದಂಗಡಿಗಳಿಂದ ಪಾರ್ಸಲ್ ತಂದು, ಕ್ರೀಡಾಂಗಣದಲ್ಲಿ ಕುಳಿತು ಸ್ವಚ್ಛಂದವಾಗಿ ಸೇವಿಸುತ್ತಾರೆ. ಮದ್ಯಗೋಷ್ಠಿ ಬಳಿಕ ಬಾಟೆಲ್‌ಗಳು, ಸಿಗರೇಟ್ ಪ್ಯಾಕ್‌ಗಳು, ಸಿಗರೇಟ್ ತುಂಡುಗಳು, ತಿಂಡಿ ತಿನಿಸುಗಳ ತ್ಯಾಜ್ಯ, ಪ್ಲಾಸ್ಟಿಕ್ ಕವರ್‌ಗಳನ್ನು ಎಲ್ಲೆಂದರಲ್ಲಿ ಬಿಸಾಡಿ ಹೋಗುತ್ತಾರೆ. ಕೆಲವರಂತೂ ಓವರ್‌ಹೆಡ್ ಟ್ಯಾಂಕ್ ಮೇಲೆ ಕುಳಿತು ಮದ್ಯ ಸೇವನೆ ಮಾಡುತ್ತಾರೆ. ಮದ್ಯಪ್ರಿಯರು ಈ ಕ್ರೀಡಾಂಗಣವನ್ನು ‘ಓಪನ್ ಪಾರ್ಟಿ ಹಾಲ್’ನಂತೆ ಬಳಸಿಕೊಳ್ಳುತ್ತಿದ್ದಾರೆ.



‘ಡ್ರಗ್ಸ್’ ಘಾಟಿನ ಆತಂಕ: ಮದ್ಯಗೋಷ್ಠಿ ಮೀರಿ ಈ ಕ್ರೀಡಾಂಗಣದಲ್ಲಿ ಡ್ರಗ್ಸ್ ಘಾಟು ಬೀರುತ್ತಿರುವುದು ಆತಂಕಕಾರಿ ಸಂಗತಿ. ಪುಂಡರ ಗುಂಪು ಕ್ರೀಡಾಂಗಣದಲ್ಲಿ ಸುತ್ತಾಡಿಕೊಂಡು ಡ್ರಗ್ಸ್ ಸೇವಿಸಿ ಮೋಜುಮಸ್ತಿ ಮಾಡುವುದನ್ನು ಸ್ಥಳೀಯರು ಗಮನಿಸಿದ್ದಾರೆ. ಇದನ್ನು ಸಾಕ್ಷೀಕರಿಸುವಂತೆ ಕ್ರೀಡಾಂಗಣದ ಚರಂಡಿ ಹಾಗೂ ಮೂಲೆಗಳಲ್ಲಿ ಬಳಸಿ ಬಿಸಾಡಿದ ಸಿರಂಜ್‌ಗಳು, ಮಾದಕ ವಸ್ತು ಸೇವನೆಗೆ ಬಳಸಬಹುದಾದ ರೋಲಿಂಗ್ ಪೇಪರ್‌ನ ಕವರ್‌ಗಳು ಸಿಗುತ್ತವೆ. ಕ್ರೀಡಾಂಗಣಕ್ಕೆ ಹೊಂದಿಕೊಂಡಂತೆ ಶಾಲಾ-ಕಾಲೇಜುಗಳಿವೆ, ಹೆಣ್ಣುಮಕ್ಕಳ ಹಾಸ್ಟೆಲ್ ಹಾಗೂ ಸಾಹಿತ್ಯ ಭವನವಿದೆ. ಹಾಗಾಗಿ ಕ್ರೀಡಾಂಗಣ ಮದ್ಯಗೋಷ್ಠಿ ಹಾಗೂ ಡಗ್ಸ್ ಸೇವನೆಗೆ ಬಳಕೆಯಾಗುತ್ತಿರುವುದರಿಂದ ಸಹಜವಾಗಿ ಆತಂಕ ಹೆಚ್ಚಾಗಿದೆ. ಹಗಲಲ್ಲಿ ಆಟವಾಡಲೆಂದು ಬರುವ ಮಕ್ಕಳು, ಅಲ್ಲಿ ಬಿದ್ದಿರುವ ಮಾದಕ ವಸ್ತುಗಳ ತ್ಯಾಜ್ಯಗಳನ್ನು ಗಮನಿಸಿ, ಕುತೂಹಲಕ್ಕಾದರೂ ದಾರಿ ತಪ್ಪಬಹುದಾದ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ.

ಅಸಹ್ಯಕರ ವಾತಾವರಣ: ಕ್ರೀಡಾಂಗಣ ಬ್ಯಾಸ್ಕೆಟ್ ಬಾಲ್, ಜಿಮ್, ಟೆನಿಸ್ ಮತ್ತು ಫುಟ್‌ಬಾಲ್ ಗ್ರೌಂಡ್ ಒಳಗೊಂಡಿದ್ದು, ನಿತ್ಯವೂ ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಇಲ್ಲಿಗೆ ಬರುತ್ತಾರೆ. ಅಲ್ಲದೆ ಮುಂಜಾನೆ ಹಾಗೂ ಸಂಜೆ ವಿಜಯನಗರ, ಜಯಲಕ್ಷ್ಮಿಪುರಂ, ಮಹದೇಶ್ವರ ಬಡಾವಣೆ ಇನ್ನಿತರ ಅಕ್ಕಪಕ್ಕದ ಬಡಾವಣೆ ನಾಗರಿಕರು ವಾಯುವಿಹಾರಕ್ಕೆ ಬರುತ್ತಾರೆ. ಆದರೆ ಕ್ರೀಡಾಂಗಣದ ಅಸಹ್ಯಕರ ವಾತಾವರಣದಿಂದ ಮುಜುಗರ ಪಡುವಂತಾಗಿದೆ. ಇಲ್ಲಿನ ಅವ್ಯವ ಸ್ಥೆಯನ್ನು ಸಹಿಸಲಾಗದೆ ಅದೆಷ್ಟೋ ಹಿರಿಯ ನಾಗರಿಕರು ರಸ್ತೆಯಲ್ಲೇ ವಾಯು ವಿಹಾರ ಮುಗಿಸಿ, ಮನೆಗೆ ವಾಪಸ್ಸಾಗುವುದು ಸಾಮಾನ್ಯವಾಗಿದೆ.

ನಿರ್ವಹಣೆ-ಭದ್ರತೆ ವೈಫಲ್ಯ: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಈ ಕ್ರೀಡಾಂಗಣದ ನಿರ್ವಹಣೆಯನ್ನು ಸಂಪೂರ್ಣವಾಗಿ ಮರೆತಿದೆ. ಏನಾದರೂ ಕಾಮಗಾರಿಗಳಿದ್ದರೆ ಮಾತ್ರ ಅಧಿಕಾರಿಗಳು ಇತ್ತ ಪಾದ ಬೆಳೆಸುತ್ತಾರೆ. ಸ್ವಚ್ಛತೆಯಂತೂ ಇಲ್ಲಿ ಮರೀಚಿಕೆಯಾಗಿದೆ. ಕನಿಷ್ಠ ಸೂಕ್ತ ಭದ್ರತಾ ವ್ಯವಸ್ಥೆಯನ್ನಾದರೂ ಮಾಡಿದ್ದರೆ ಅನೈತಿಕ ಚಟುವಟಿಕೆಗಳನ್ನು ನಿಯಂತ್ರಿಸಬಹುದಿತ್ತು. ಸಮರ್ಪಕ ವಿದ್ಯುತ್ ದೀಪದ ವ್ಯವಸ್ಥೆ, ಕಾವಲುಗಾರರ ನಿಯೋಜನೆ, ಸಿಸಿಟಿವಿ ಕ್ಯಾಮರಾ ಅಳವಡಿಕೆ, ಈ ರೀತಿಯ ಕ್ರಮಗಳಿಂದ ಕ್ರೀಡಾಂಗಣದ ಅಸ್ತಿತ್ವವನ್ನು ಕಾಯ್ದುಕೊಳ್ಳಬಹುದಿತ್ತು. ಆದರೆ ಇದು ಮುಡಾಗೆ ಅಹಿತವಾಗಿರಬಹುದು.

ಅರ್ಹ ಸಂಸ್ಥೆಗೂ ವಹಿಸುತ್ತಿಲ್ಲ: ಕ್ರೀಡಾಂಗಣದ ಒಳಭಾಗದಲ್ಲಿರುವ ವಿದ್ಯುತ್ ದೀಪಗಳನ್ನು ಸರಿಪಡಿಸಬೇಕು, ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಬೇಕು, ಶೌಚಾಲಯಗಳನ್ನು ನಿರ್ಮಿಸಬೇಕು, ಮೋರಿಗಳನ್ನು ರಿಪೇರಿ ಮಾಡಬೇಕು ಹೀಗೆ ಹಲವು ಬೇಡಿಕೆಗಳನ್ನು ನಾಗರಿಕರು ಹಲವು ಬಾರಿ ಮುಡಾದ ಮುಂದಿಟ್ಟರೂ ಪ್ರಯೋಜನವಾಗಿಲ್ಲ. ನಿರ್ವಹಣೆ ಸಾಧ್ಯವಾಗದಿದ್ದರೆ ಅರ್ಹ ಕ್ರೀಡಾ ಸಂಸ್ಥೆಗಳಿಗಾದರೂ ಜವಾಬ್ದಾರಿ ವಹಿಸುತ್ತಿಲ್ಲ. ಕ್ರೀಡಾಂಗಣ ಹಾಳಾಗುತ್ತಿರುವುದನ್ನು ಗಮನಿಸಿದ ಕೆಲ ಕ್ರೀಡಾ ಸಂಸ್ಥೆಗಳು ನಿರ್ವಹಣೆಗೆ ಮುಂದೆ ಬಂದು, ಮುಡಾಗೆ ತಮ್ಮ ಇಂಗಿತ ವ್ಯಕ್ತಪಡಿಸಿವೆ. ಆದರೆ ಸೂಕ್ತ ರೀತಿಯಲ್ಲಿ ಒಪ್ಪಂದ ಮಾಡಿಕೊಂಡು ಪ್ರತಿಷ್ಠಿತ ಕ್ರೀಡಾ ಸಂಸ್ಥೆಗೆ ನಿರ್ವಹಣೆ ವಹಿಸುವ ಪ್ರಯತ್ನಕ್ಕೂ ಮುಂದಾಗದಿರುವುದು ನಿಜಕ್ಕೂ ದುರಂತದ ಸಂಗತಿ. ■

ನಾಗರಿಕರ ‘ಸ್ವಚ್ಛ ಮೇವಾ ಜಯತೇ’



ಸ್ಥಳೀಯ ಸಂಸ್ಥೆಗಳ ನಿರ್ಲಕ್ಷ್ಯ, ಉಡಾಫೆಯಿಂದ ಬೇಸತ್ತು ಸಾರ್ವಜನಿಕರೇ ಕ್ರೀಡಾಂಗಣದ ಸ್ವಚ್ಛತೆಗಿಳಿದಿದ್ದಾರೆ. ಇಲ್ಲಿನ ನಾಗರಿಕರು ಮತ್ತು ವಾಯು ವಿಹಾರಿಗಳು ‘ಸ್ವಚ್ಛ ಮೇವಾ ಜಯತೇ’ ಘೋಷ ವಾಕ್ಯದೊಂದಿಗೆ ಕಾಡಿನಂತಿದ್ದ ಕ್ರೀಡಾಂಗಣವನ್ನು ಸ್ವಚ್ಛಗೊಳಿಸಿ, ಅದರ ಸ್ವರೂಪ ಬದಲಿಸುವ ಪ್ರಯತ್ನ ಮಾಡಿದ್ದಾರೆ.

ಕರ್ನಾಟಕ ಜಲಮಂಡಳಿ ನಿವೃತ್ತ ಉಪ ಮುಖ್ಯ ಇಂಜಿನಿಯರ್ ವಿಶ್ವನಾಥ್, ತಮ್ಮ ಮಗನನ್ನು ಈ ಕ್ರೀಡಾಂಗಣದಲ್ಲಿರುವ ಬ್ಯಾಸ್ಕೆಟ್ ಬಾಲ್ ಕೋರ್ಟ್‌ಗೆ ಪ್ರತಿನಿತ್ಯ ಕರೆದುಕೊಂಡು ಬರುತ್ತಾರೆ. ಒಮ್ಮೆ ಕ್ರೀಡಾಂಗಣದ ದುಸ್ಥಿತಿ ಕಂಡ ಅವರು, ಕುಡಿಯುವ ನೀರಿನ ಪೈಪ್‌ಗೆ ಹೊಸ ನಲ್ಲಿ ಅಳವಡಿಸಿದರು. ನಂತರ ಕ್ರೀಡಾಂಗಣದ ಸೂಕ್ತ ಸ್ಥಳದಲ್ಲಿ 25ಕ್ಕೂ ಹೆಚ್ಚು ಗಿಡಗಳನ್ನು ನೆಟ್ಟಿದ್ದಲ್ಲದೆ ನಿತ್ಯ ಕಾರಿನಲ್ಲಿ ನೀರು ತಂದು ಹಾಕುವ ಮೂಲಕ ಪೋಷಣೆ ಮಾಡಿದ್ದಾರೆ.

ಇವರ ಕಾರ್ಯವನ್ನು ಗಮನಿಸಿದ ರೈಲ್ವೆ ನಿವೃತ್ತ ಅಧಿಕಾರಿ ಎಂ.ಎಚ್.ವೆಂಕಟೇಗೌಡ, ತಾವು ಸೇರಿಕೊಂಡು ಕ್ರೀಡಾಂಗಣದ ಸ್ವಚ್ಛತೆಗೆ ಪಣತೊಟ್ಟರು. ನಂತರ ಅವರಿಗೆ ಬಾಲ್ಯ ಫೌಂಡೇಷನ್ ಸಂಸ್ಥೆಯ ಸಂಸ್ಥಾಪಕರಾದ ಕೆ.ಎಸ್.ಅನಿಲ್, ಟ್ರಸ್ಟಿಗಳಾದ ಉಮಾ ಅನಿಲ್, ಕೆ.ಎ.ಶ್ರೀನಿಧಿ, ಪಾಲಿಕೆ ಸದಸ್ಯರಾದ ಎಂ.ಯು.ಸುಬ್ಬಯ್ಯ, ಕೆ.ವಿ.ಶ್ರೀಧರ್ ಹಾಗೂ ಪೌರಕಾರ್ಮಿಕರು ಕೈಜೋಡಿಸಿದ್ದಾರೆ. ಕಳೆದ ವರ್ಷ ಗಾಂಧಿ ಜಯಂತಿಯಂದು ಸತತವಾಗಿ ಮೂರು ಗಂಟೆಗಳ ಕಾಲ ಸಂಪೂರ್ಣ ಕ್ರೀಡಾಂಗಣದಲ್ಲಿ ಸ್ವಚ್ಛತಾ ಕಾರ್ಯ ನಡೆಸಿ ಪ್ಲಾಸ್ಟಿಕ್, ಗಾಜು, ಬಿಯರ್ ಬಾಟಲ್, ಕಾಡಿನಂತೆ ಬೆಳೆದ ಪೊದೆಗಳನ್ನು ಸ್ವಚ್ಛಗೊಳಿಸಿ ಮೂರು ಲಾರಿಯಷ್ಟು ತ್ಯಾಜ್ಯ ಸಂಗ್ರಹಿಸಿದ್ದರು.

ಆದರೆ ಅವರು ಒಂದು ಕಡೆಯಿಂದ ಸ್ವಚ್ಛಗೊಳಿಸಿಕೊಂಡು ಬರುತ್ತಿದ್ದರೆ, ಮತ್ತೊಂದೆಡೆ ಪುಂಡರು ಕ್ರೀಡಾಂಗಣದಲ್ಲಿ ಮೋಜು ಮಸ್ತಿ ಮಾಡಿ ಹಾಳು ಮಾಡುತ್ತಿದ್ದಾರೆ. ಈಗಲೂ ಯಾವ ಮೂಲೆಯಲ್ಲಿ ನೋಡಿದರು ಬೀಯರ್ ಬಾಟಲ್, ಮಾದಕ ದ್ರವ್ಯಗಳನ್ನು ಬಳಸಿರುವ ಸಿರೇಂಜ್‌ಗಳು ಕಾಣಸಿಗುತ್ತವೆ. ಕೆಲ ಯುವಕರು ಇಲ್ಲಿಯೇ ಬೈಕ್ ರೇಸ್, ವೀಲ್ಹಿಂಗ್ ಮಾಡಿ ಜನರ ಜೀವಕ್ಕೆ ಕಂಟಕವಾಗಿದ್ದಾರೆ.

ಕಾಡಿನಂತಿದ ನಗರಾಭಿವೃದ್ಧಿ ಪ್ರಾಧಿಕಾರ ಕ್ರೀಡಾಂಗಣದವನ್ನು ನಾಗರಿಕರು ಮತ್ತು ವಾಯುವಿಹಾರಿಗಳ ಸಹಕಾರದಿಂದ ಹಣ ಸಂಗ್ರಹಿಸಿ ಸ್ವಚ್ಛಗೊಳಿಸುವ ಮೂಲಕ ಅದರ ಸ್ವರೂಪ ಬದಲಾವಣೆ ಮಾಡುವ ಪ್ರಯತ್ನ ಮಾಡಿದ್ದೇವೆ. ಅಧಿಕಾರಿಗಳು ನಮಗೆ ಸಹಕಾರ ನೀಡಿ ಮೋಜು ಮಸ್ತಿ ಮಾಡಲು ಬರುವ ಪುಂಡರಿಗೆ ಕಡಿವಾಣ ಹಾಕಬೇಕಿದೆ. ಇದರೊಟ್ಟಿಗೆ ಮೂಲ ಸೌಕರ್ಯಗಳನ್ನೂ ಒದಗಿಸಬೇಕು. ಭದ್ರತಾ ಸಿಬ್ಬಂದಿಯನ್ನೂ ನಿಯೋಜಿಸಬೇಕು ಎಂದು ರೈಲ್ವೆ ನಿವೃತ್ತ ಅಧಿಕಾರಿ ಎಂ.ಹೆಚ್.ವೆಂಕಟೇಗೌಡ ಹಾಗೂ ನಿವೃತ್ತ ಶಿಕ್ಷಕಿ ಸಿಂಥಿಯಾ ಆಗ್ರಹಿಸಿದ್ದಾರೆ.

ವಾರಭವಿಷ್ಯ



21.8.2022 ರಿಂದ 27.8.2022

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ
ರವಿ-ಸಿಂಹ, ಚಂದ್ರ-ವೃಷಭ, ಮಿಥುನ, ಕಟಕ, ಸಿಂಹ, ಕುಜ-ವೃಷಭ, ಬುಧ-ಕನ್ಯಾ, ಗುರು-ಮೀನ, ಶುಕ್ರ-ಕಟಕ, ಶನಿ-ಮಕರ, ರಾಹು-ಮೇಷ ಮತ್ತು ಕೇತು-ತುಲಾ



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, ‘ಭಾವಸಾರ ರತ್ನ’
‘ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು’, ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ,
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು
ಮೊ: 9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)



ಕೆಲವೊಂದು ಗ್ರಹಗಳ ಅಡ್ಡ ಪರಿಣಾಮಗಳ ನಡುವೆ ನಿಮ್ಮ ರಾಶ್ಯಾಧಿಪತಿ ಉಚ್ಛ ಚಂದ್ರನ ಸಹಯೋಗದಲ್ಲಿರುವ ಪರಿಣಾಮ ವೃತ್ತಿ ಹಾಗೂ ವ್ಯವಹಾರ ಕ್ಷೇತ್ರದಲ್ಲಿ ಅದೃಷ್ಟ ಒಲಿಯುವುದು. ಆರೋಗ್ಯದಲ್ಲಿ ಸುಧಾರಣೆ ಉಂಟಾಗಲಿದೆ. ವಿದ್ಯುತ್ ಉಪಕರಣ ವ್ಯಾಪಾರಿಗಳಿಗೆ ಹೆಚ್ಚಿನ ಲಾಭವಾಗುವುದು. ತಾಮ್ರ, ರಜತ ಪದಾರ್ಥಗಳು ಮನೆಗೆ ಬರುವ ಸಂಭವ. ಮಾತೃಶ್ರೀಯವರ ಆಶೀರ್ವಾದದಿಂದ ಕಾರ್ಯ ಸಾಧನೆ ಆಗುವುದು. -ಶ್ರೀ ಗಣಪತಿಗೆ ಗರಿಕೆ ಸಮರ್ಪಣೆ, ಶುಭಸಂಖ್ಯೆ-8.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)



ವಾರದಾರಂಭಕ್ಕೆ ಚಂದ್ರಮನ ಶುಭ ಸಂಚಾರದಿಂದ ಗೌರವಾರ್ಹ ಹುದ್ದೆಯನ್ನು ಅಲಂಕರಿಸುವ ಸಾಧ್ಯತೆ ಇದೆ. ಆಸ್ತಿ-ಪಾಸ್ತಿ, ಧನ-ಕನಕ ಹೊಂದುವ ಯೋಗವಿದೆ. ಮುತ್ತು-ಹವಳ ವ್ಯಾಪಾರಿಗಳಿಗೆ ಬಹು ಲಾಭ ಉಂಟು. ಅಪರಿಚಿತರೊಂದಿಗೆ ಹಣಕಾಸಿನ ವ್ಯವಹಾರ ಮಾಡಿದ್ದಲ್ಲಿ ನಷ್ಟಕ್ಕೆ ಗುರಿಯಾಗುವಿರಿ. ನಿಮ್ಮ ರಾಶಿಸ್ಥಿತ ಕೇತುವಿನಿಂದ ವಿಷಕಾರಿ ವಸ್ತು ಸೇವನೆಯಿಂದ ಆರೋಗ್ಯ ಕೆಡಬಹುದು. ಕರುಳು ಸಂಬಂಧಿ ಕಾಯಿಲೆ ಕಾಡಬಹುದು. - ಶ್ರೀ ಸಪ್ತಮಾತೃಕಾ ದೇವಿ ದರ್ಶನ, ಶುಭಸಂಖ್ಯೆ-5.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)



‘ಶಶಿ-ಮಂಗಳ’ ಯೋಗ ಪ್ರಭಾವದಿಂದ ಹಿತೈಷಿಗಳ ಸಹಾಯ ಹಸ್ತದ ಪರಿಣಾಮ ಗಹನವಾದ ಕಾರ್ಯವೊಂದು ಕೈಗೂಡುವ ಸಾಧ್ಯತೆ ಇದೆ. ನಿಮ್ಮ ಅಭಿಲಾಷೆಯ ವಸ್ತುಗಳು ಅಯಾಚಿತವಾಗಿ ಮನೆಗೆ ಬರುವುದು. ಹೊಸ ಆವಿಷ್ಕಾರಗಳಿಂದ ಸಾಮಾಜಿಕ ಮನ್ನಣೆ ದೊರೆಯುವುದು. ಇದುವರೆಗೆ ಕಾಯ್ದಿರಿಸಿದ್ದ ವಸ್ತುವಿಗೆ ಹೆಚ್ಚಿನ ಲಾಭ ದೊರೆಯುವುದು. ಗಣ್ಯ ವ್ಯಕ್ತಿಗಳ ಮಿಲನ ಶುಭ ಫಲವನ್ನು ನೀಡಲಿದೆ. ನಿಮ್ಮ ವಾಗ್ದಾನಗಳನ್ನು ಪೂರೈಸಿಕೊಳ್ಳಿ. - ಶ್ರೀ ಚಾಮುಂಡಿ ದರ್ಶನ, ಶುಭಸಂಖ್ಯೆ-3

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)




ವಿಕ್ರಮ ಸ್ಥಾನದಲ್ಲಿ ಶನಿದೇವನೂ, ಪಂಚಮದಲ್ಲಿ ಗುರುದೇವನೂ ನಿಮ್ಮ ಕಠಿಣ ಪರಿಶ್ರಮಕ್ಕೆ ಸೂಕ್ತ ಪ್ರತಿಫಲ ನೀಡಲಿದ್ದಾರೆ. ಸಿಮೆಂಟ್, ಕಬ್ಬಿಣ, ಮರಮುಟ್ಟುಗಳ ವ್ಯಾಪಾರ ಉತ್ತಮ ಲಾಭವನ್ನು ತಂದುಕೊಡುವುದು. ಉನ್ನತ ಶಿಕ್ಷಣಾರ್ಥಿಗಳಿಗೆ ಉತ್ತಮ ಶ್ರೇಣಿಯ ಫಲ ದೊರೆಯಲಿದೆ. ಪುತ್ರ-ಪುತ್ರಿಯರು ಹೆಮ್ಮೆ ಪಡುವ ಕೆಲಸ ಮಾಡುವರು. ವ್ಯಯಸ್ಥಿತ ಕೇತು ಧರ್ಮ ಬಾಹಿರ ಕೆಲಸಗಳಿಗೆ ಪ್ರೇರಣೆ ನೀಡಬಹುದು. ಎಚ್ಚರ ತಪ್ಪದಿರಿ. - ಶ್ರೀಸುಬ್ರಹ್ಮಣ್ಯ ಸ್ವಾಮಿ ಉಪಾಸನೆ, ಶುಭಸಂಖ್ಯೆ-8.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)



ಬುದ್ಧಿವಂತಿಕೆ ಮತ್ತು ಕುಶಲತೆ ಈ ಸಪ್ತಾಹದಲ್ಲಿ ಉನ್ನತ ಮಟ್ಟದಲ್ಲಿರುತ್ತದೆ. ನಿಮ್ಮ ಕಾರ್ಯಕ್ಷೇತ್ರದಲ್ಲಿ ಎದುರಾಗುವ ಸವಾಲುಗಳನ್ನು ಎದುರಿಸಲು ಚಂದ್ರ ಸಂಚಾರ ಸಹಾಯವಾಗಲಿದೆ. ಔದ್ಯಮಿಕ ಮಿಷನರಿ ರಿಪೇರಿದಾರರಿಗೆ ಉತ್ತಮ ಆದಾಯವಾಗುವುದು. ಅಷ್ಟಮ ಶನಿಯೂ ಇದ್ದು, ನಿಮ್ಮ ಗೌರವ ಪ್ರತಿಷ್ಠೆಗಳಿಗೆ ಕುಂದಾಗದಂತೆ ನಡೆದುಕೊಳ್ಳಿ. ಸಜ್ಜನರ ಸಂಗದಿಂದ ಜೀವನದ ಗತಿ ಬದಲಾಗಲಿದೆ. - ಶ್ರೀ ರಾಮ ಜಯರಾಮ ಜಯಜಯರಾಮ ಮಂತ್ರ ಜಪಿಸಿ, ಶುಭಸಂಖ್ಯೆ-1.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)



ಯಾವುದೇ ಮಹತ್ತರವಾದ ಯೋಜನೆಗಳನ್ನು ನಿಧಾನವಾಗಿ ಚಿಂತಿಸಿ ಕಾರ್ಯರೂಪಕ್ಕೆ ತನ್ನಿ. ಹೆಂಗಳೆಯರ ಸ್ನೇಹ ಮೈ-ಮನಗಳಲ್ಲಿ ಪುಳಕ ಉಂಟು ಮಾಡಲಿದೆ. ವನಿತಾ ಮಣಿಯರು ನೂತನ ವಸ್ತ್ರಾಭರಣ, ಪ್ರಸಾಧನ ವಸ್ತುಗಳಿಗೆ ಧಾರಾಳ ಹಣ ವ್ಯಯಿಸುವರು. ವಾರಮಧ್ಯೆ ಗುರು ದರ್ಶನದಿಂದ ಗುರಿ ಸ್ಪಷ್ಟವಾಗುತ್ತದೆ. ಪಂಚಮ ರಾಹು ದುಡುಕು ಹಾಗೂ ಮುಂಗೋಪಕ್ಕೆ ಕಾರಣೀಭೂತನಾಗುವುದು, ತಾಳ್ಮೆಗೆಡದಿರಿ. - ಶ್ರೀ ಶಿರಡಿ ಸಾಯಿ ಬಾಬಾ ದರ್ಶನ, ಶುಭಸಂಖ್ಯೆ-4.

ಕಟಕ (ಹೀ.ಹು.ಹೆ.ಹೊ.ಡ.ಡಿ.ಡು)



ನಿಮ್ಮಲ್ಲಿರುವ ಅಪಾರ ಕ್ರಿಯಾ ಶಕ್ತಿಯನ್ನು ಉತ್ತಮ ಕಾರ್ಯಗಳಿಗೆ ಬಳಸಿಕೊಳ್ಳುವುದರಿಂದ ಜನಮನ್ನಣೆ ಗಳಿಸುವಿರಿ. ವ್ಯಾಪಾರ ಮತ್ತು ಕೃಷಿಯಿಂದ ಉತ್ತಮ ಧನ ಸಂಪಾದನೆ ಆಗುವುದು. ವಿದ್ಯಾರ್ಜನೆಯಲ್ಲಿ ತೀವ್ರ ಗ್ರಹಣ ಶಕ್ತಿಯನ್ನು ಪ್ರದರ್ಶಿಸುವಿರಿ. ಹೋಟೆಲ್ ಹಾಗೂ ಕೇಟರಿಂಗ್ ವ್ಯವಹಾರಿಗಳಿಗೆ ಹೇರಳ ಧನ ಲಾಭವಾಗುವುದು. ಪಾಲುದಾರಿಕೆ ವ್ಯಾಪಾರದಲ್ಲಿ ನಷ್ಟ, ಆರ್ಥರೈಟೀಸ್ ತೊಂದರೆ ಕಾಡಬಹುದು. - ಶ್ರೀ ದುರ್ಗಾಷ್ಟಕ ಪಠಿಸಿ, ಶುಭಸಂಖ್ಯೆ-6.

ಮಕರ (ಬೊ.ಜ.ಜೆ.ಶಿ.ಶು.ಶೆ.ಶೊ.ಗ.ಗಿ.)



ಗ್ರಹಗಳ ಶುಭಾಶುಭ ಪ್ರಭಾವದ ನಡುವೆ ಒಳ್ಳೆಯದು ಕೆಟ್ಟದನ್ನು ಆಯ್ಕೆ ಮಾಡುವವರು ನೀವೆ. ಗೃಹ ಹಾಗೂ ಕಚೇರಿ ಕೆಲಸಗಳು ಮಂದಗತಿಯಲ್ಲಿ ಸಾಗುವುದು. ಇದಕ್ಕೆ ನಿಮ್ಮ ಆಲಸಿತನ ಕಾರಣವಾಗಿದೆ. ಜನ್ಮಸ್ಥ ಶನಿದೇವನಿದ್ದು ಆತುರದ ವಾಹನ ಚಾಲನೆಯಿಂದ ತೊಂದರೆಗೆ ಗುರಿಯಾಗುವಿರಿ. ವಾರದ ಕಡೆಗೆ ವೇದಾಧ್ಯಯನ, ಆಧ್ಯಾತ್ಮ ವಿಷಯಗಳಲ್ಲಿ ಆಸಕ್ತಿ ಮೂಡುವುದು. ಜಲಾಶಯಗಳ ಹತ್ತಿರ ದುಃಸಾಹಸ ಮಾಡದಿರಿ. - ಓಂ ಅಚ್ಯುತಾನಂದ ಗೋವಿಂದ ಎಂಬ ಮಂತ್ರ ಜಪಿಸಿ, ಶುಭಸಂಖ್ಯೆ-2.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)




ವಾರದಾರಂಭಕ್ಕೆ ನಿಮ್ಮ ಮನೋವಿಕಾರಗಳಿಗೆ ಕಡಿವಾಣ ಹಾಕುವುದು. ಅಸೂಯಾಪರರು ನಿಮ್ಮ ಉನ್ನತಿಗೆ ಅಡ್ಡಗಾಲು ಹಾಕುವರು. ವಿಚಿತ್ರ ಪ್ರೇಮ ಪ್ರಸಂಗಗಳು ತೊಂದರೆಗೆ ಈಡು ಮಾಡುವ ಸಾಧ್ಯತೆ. ವಾರದ ಕಡೆಗೆ ನಿಮ್ಮ ರಾಶಿಗೆ ಬರುವ ಚಂದ್ರ ನಿಮ್ಮ ಹಲವು ಮನೋಭೀಷ್ಟಗಳನ್ನು ಪೂರೈಸಲಿರುವನು. ನಿಮ್ಮ ವ್ಯಾಪಾರ ಅಭಿವೃದ್ಧಿಗೆ ಪೂರಕವಾದ ವಾತಾವರಣ ಉಂಟಾಗುವುದು. ವಾಹನ ನಿಧಾನವಾಗಿ ಚಲಿಸಿ, ಕ್ಷೇಮವಾಗಿ ಮನೆ ತಲುಪಿ. - ಶ್ರೀ ಸೂರ್ಯಾಷ್ಟಕ ಪಠಿಸಿ, ಶುಭಸಂಖ್ಯೆ-1.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)




ನವಗ್ರಹಗಳ ಶುಭ ಸಂಯೋಗದ ಫಲ ಸ್ವರೂಪವಾಗಿ ಇಚ್ಛಿತ ಕಾರ್ಯಸಿದ್ಧಿ, ನ್ಯಾಯಾಲಯ ವಿಚಾರಗಳಲ್ಲಿ ಜಯಶೀಲತೆ, ಆಸ್ತಿ-ಪಾಸ್ತಿ ಗಳಿಕೆಯಂಥ ಶುಭ ಫಲಗಳನ್ನು ನಿರೀಕ್ಷಿಸಬಹುದು. ಸಾಮಾಜಿಕವಾಗಿ ನಿಮ್ಮ ಗೌರವ ಪ್ರತಿಷ್ಠೆಗಳು ವೃದ್ಧಿಸಲಿದೆ. ಪರೋಪಕಾರ ಬುದ್ಧಿಯಿಂದ ಜನಾನುರಾಗ ಗಳಿಸುವಿರಿ. ನಿಮ್ಮ ರಾಶಿ ಸ್ಥಿತ ಶನಿದೇವನಿಂದ ಸ್ವೇಚ್ಛಾಚಾರದಿಂದ ತೊಂದರೆಗೆ ಗುರಿಯಾಗುವಿರಿ. ಮಹಿಳೆಯರು ನಿಮ್ಮ ಆಭರಣಗಳ ಬಗ್ಗೆ ಎಚ್ಚರಿಕೆಯಿಂದ ಇರಿ. - ಶ್ರೀ ಶನಿ ಸ್ತೋತ್ರ ಪಠಿಸಿ, ಶುಭಸಂಖ್ಯೆ-1.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)



ಇದು ನಿಮಗೆ ಸಮತೋಲನವಾದ ವಾರ. ವರ ನೀಡುವ ಬೃಹಸ್ಪತಿಗೆ ಶನಿದೇವ ಅಡ್ಡ ನಿಂತಿದ್ದಾನೆ. ವಿದ್ಯಾರ್ಜನೆ ಸುಗಮವಾಗಿ ಸಾಗಲು ಬುದ್ಧಿಕಾರಕ ಬುಧ ಅನುಕೂಲಕರನಾಗಿದ್ದಾನೆ. ಸ್ಪರ್ಧಾತ್ಮಕ ಪರೀಕ್ಷೆ ಬರೆಯಲು ಅಡ್ಡಿಯಿಲ್ಲ. ಮನೆಯಲ್ಲಿ ಸಣ್ಣಪುಟ್ಟ ಕಿರಿಕಿರಿಗಳನ್ನು ದೊಡ್ಡದು ಮಾಡಲು ಹೋಗಬೇಡಿ. ಸರ್ಕಾರಿ ನೌಕರರಿಗೆ ಬಡ್ತಿ ದೊರೆಯುವ ಸಾಧ್ಯತೆ ಇರುತ್ತದೆ. ವಾರಾಂತ್ಯಕ್ಕೆ ಶಾರ್ಟ್ ಟೂರ್ಸ್, ಧರ್ಮಕ್ಷೇತ್ರ ಸಂದರ್ಶನಗಳು ಉಂಟಾಗಲಿದೆ. - ಶ್ರೀ ವಿಷ್ಣುಪೂಜೆ, ಶುಭಸಂಖ್ಯೆ-9.


ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)



ಹೆಚ್ಚಿನ ಗ್ರಹಗಳು ದುಃಸ್ಥಾನದಲ್ಲಿ ಗೋಚರಿಸುತ್ತಿದ್ದು, ಯಾವುದೇ ಮಹತ್ವದ ವಿಷಯಗಳನ್ನು ಪೂರ್ವ ವಿಮರ್ಶೆ ಇಲ್ಲದೇ ಮಾಡಬೇಡಿ. ವಿದ್ಯಾರ್ಥಿಗಳು ಸೋಮಾರಿತನದಿಂದ ಶಿಕ್ಷಣದಲ್ಲಿ ಹಿಂದೆ ಬೀಳುವರು. ಇತರರ ಉಸಾಬರಿಗೆ ಹೋಗುವುದರಿಂದ ತೊಂದರೆಯನ್ನು ಆಹ್ವಾನಿಸಿದಂತೆ. ವಾರಮಧ್ಯೆ ಉತ್ತಮ ಜನರ ಸಂಪರ್ಕ ನಿಮ್ಮ ವೃತ್ತಿ ಜೀವನಕ್ಕೆ ಉನ್ನತಿಯನ್ನು ತರಲಿದೆ. ಕಾರ್ಮಿಕರಿಗೆ ಸರ್ಕಾರದಿಂದ ಸಹಾಯ ದೊರೆಯಲಿದೆ. - ಶ್ರೀ ಗುರುರಾಯರ ಅರ್ಚನೆ, ಶುಭಸಂಖ್ಯೆ-6.

ಮಕ್ಕಳ ಚಿತ್ರ ಕಥೆ: ಏಕೆ ನಗುತ್ತಿದ್ದೀರಿ...?

-ಹೆಚ್.ಜಿ.ಎನ್.ಪ್ರಸಾದ್, ಮೊ: 9845376199



ಭಗತ್‌ಸಿಂಗ್, ಸುಖದೇವ್, ರಾಜಗುರು ಸ್ವಾತಂತ್ರ್ಯದ ಕನಸು ಕಂಡ ಈ ಮೂವರನ್ನು ನ್ಯಾಯಾಲಯದ ತೀರ್ಪಿನ ಪ್ರಕಾರ ಮರುದಿನ ಗಲ್ಲಿಗೇರಿಸಬೇಕಿತ್ತಾದರೂ ದೇಶಾಭಿಮಾನಿಗಳ ಪ್ರತಿಭಟನೆಗೆ ಹೆದರಿ ಬ್ರಿಟಿಷ್ ಸರ್ಕಾರ ಒಂದು ದಿನ ಮುಂಚಿತವಾಗಿಯೇ ಅವರನ್ನು ನೇಣಿಗೇರಿಸಲು ನಿರ್ಧರಿಸಿತ್ತು.




ಸೆರೆಮನೆಯ ಅಧಿಕಾರಿಗಳು ಈ ವಿಷಯವನ್ನು ಯುವಕರಿಗೆ ಹೇಳಿದಾಗ, ಅವರಲ್ಲಿ ಮೊದಲು ಗಲ್ಲಿಗೇರುವ ಅವಕಾಶ ಯಾರದಿರಬೇಕು..? ಎಂಬುದರ ಬಗ್ಗೆ ಪೈಪೋಟಿ ಶುರುವಾಯಿತು. ಅವರಿಗದು ಮಾತೃಭೂಮಿಯ ಮುಕ್ತಿಗಾಗಿ ಬಲಿದಾನಗೈಯ್ಯುವ ಭಾಗ್ಯ




ಸಾವು ಪ್ರತ್ಯಕ್ಷವಾಗಿ ಎದುರು ನಿಂತಾಗಲೂ ಅವರಲ್ಲಿ ಭಯ ಲವಲೇಶವೂ ಇರಲಿಲ್ಲ. ತಮ್ಮ ಜೀವ ತೆಗೆವ ನೇಣಿನ ಕುಣಿಕೆಯನ್ನು ಅವರು ಚುಂಬಿಸಿದರು. ಮನದಲ್ಲಿ ಅದೇನನ್ನೋ ಸಾಧಿಸಿದ ತೃಪ್ತಿ. ಮೊಗದಲ್ಲಿ ಚೈತನ್ಯದ ಚಿಲುಮೆ. ಸಾಯಲು ಹೊರಟವರ ಮುಖದಲ್ಲಿ ನಗು.



ಯುವಕರ ಮುಖದಲ್ಲಿನ ನಗು ಕಂಡು ಬ್ರಿಟಿಷ್ ಅಧಿಕಾರಿಗಳಿಗೆ ಆಶ್ಚರ್ಯ, ಒಬ್ಬ ಅಧಿಕಾರಿ ಕೇಳಿದ... ‘ಯಾಕೆ ನಗುತ್ತಿದ್ದೀರಿ...?’.



ಬಲಿದಾನಕ್ಕೆ ಸಿದ್ಧವಾಗಿದ್ದ ಯುವಕರಲ್ಲಿ ಒಬ್ಬ ಹೇಳಿದ ‘ಸಾರ್... ನೀವು ಅದೃಷ್ಟವಂತರು’. ಬ್ರಿಟಿಷ್ ಅಧಿಕಾರಿಗೆ ಮತ್ತಷ್ಟು ಅಚ್ಚರಿ. ‘ಕ್ಷಣದಲ್ಲಿ ಹೆಣವಾಗಿ ಉರುಳುವ ನೀವು ನಮ್ಮ ಅದೃಷ್ಟವನ್ನೇಕೆ ಹೊಗಳ್ತೀರಿ..?’. ಎಂದು ಪ್ರಶ್ನಿಸಿದ.



ಅದಕ್ಕೆ ಆ ಯುವಕ ನಗುತ್ತಲೇ ಉತ್ತರಿಸುತ್ತಾನೆ ‘ತನ್ನ ತಾಯ್ನಾಡಿನ ಮುಕ್ತಿಗಾಗಿ, ಸ್ವಾತಂತ್ರ್ಯಕ್ಕಾಗಿ ಈ ಯುವಕ ಅದೆಷ್ಟು ಆನಂದದಿಂದ, ಸಂತೋಷದಿಂದ. ಸಂಭ್ರಮಗಳಿಂದ ಬಲಿದಾನ ಮಾಡುತ್ತಾನೆ. ಎಂಬುದನ್ನು ನೋಡುವ ಅದೃಷ್ಟ 30 ಕೋಟಿ ಭಾರತೀಯರಲ್ಲಿ ನಿಮ್ಮ ಐದು ಜನರಿಗೆ ಮಾತ್ರ ಸಿಗುತ್ತಿದೆ... ನೀವೇ ಅದೃಷ್ಟವಂತರು...!!! ಎಂದು ನಗುತ್ತಲೇ ಉತ್ತರಿಸಿದ

ಬಡವರು, ದೀನ ದಲಿತರ ನೋವಿಗೆ ಸ್ಪಂದಿಸಿದ
ಮಹಾನ್ ಚೇತನ ಡಿ.ದೇವರಾಜ ಅರಸು



ಮಂಡ್ಯ ಆ20– ಬಡವರು, ದೀನ ದಲಿತರು, ಹಿಂದುಳಿದ ವರ್ಗದವರ ನೋವಿಗೆ ಸ್ಪಂದಿಸಿ ಸಮಾಜದಲ್ಲಿ ಹಲವಾರು ಬದಲಾವಣೆಗಳನ್ನು ತಂದ ಮಹಾನ್ ಚೇತನ ಡಿ.ದೇವರಾಜ ಅರಸು ಅವರು ಸದಾಕಾಲವೂ ಸ್ಮರಣೀಯರಾಗಿದ್ದಾರೆ ಎಂದು ರೇಷ್ಮೆ ಹಾಗೂ ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ ತಿಳಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಶನಿವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಮಂಡ್ಯ ಇವರ ಸಂಯುಕ್ತಾಶ್ರಯದಲ್ಲಿ ಸಾಮಾಜಿಕ ಪರಿವರ್ತನೆಯ ಹರಿಕಾರ ರಾಜ್ಯದ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ 107ನೇ ಜನ್ಮ ದಿನಾಚರಣೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಸಾಮಾಜಿಕ ಕ್ರಾಂತಿಯ ಹರಿಕಾರರಾದ ಡಿ.ದೇವರಾಜ ಅರಸು ಅವರು ತಮ್ಮ ಆಡಳಿತ ಅವಧಿಯಲ್ಲಿ ಮಲ ಹೊರುವ ಪದ್ಧತಿ ನಿಷೇಧ, ಜೀತ ಪದ್ಧತಿ ನಿಷೇಧ, ಭೂ ಸುಧಾರಣೆ ಕಾಯ್ದೆ ಮುಂತಾದ ಜನರಿಗೆ ಉಪಯುಕ್ತವಾದ ಯೋಜನೆಗಳನ್ನು ಜಾರಿಗೆ ತಂದರು. ಅವರು ನಡೆದ ದಾರಿ ಎಲ್ಲರಿಗೂ ದಾರಿದೀಪ ಎಂದರು.

ಪ್ರಗತಿಪರ ಚಿಂತಕ ನಾಗತಿಹಳ್ಳಿ ರಮೇಶ್ ಮಾತನಾಡಿ, ದೇವರಾಜ ಅರಸರು ತಳ ಸಮುದಾಯದವರು. ಈ ನಾಡಿನ ಕಣ್ಣುಗಳು ಎಂದು ಭಾವಿಸಿ ಎಲ್ಲರ ಬದುಕು ಹಸಿರಾಗಲು ನಿರಂತರವಾಗಿ ದುಡಿದವರು. ಅವರ ಈ ಸುದೀರ್ಘದ ಹಾದಿಯಲ್ಲಿ ನಾವೆಲ್ಲರೂ ಸಾಗಬೇಕು ಎಂದರು.

ನಗರಸಭೆ ಅಧ್ಯಕ್ಷ ಹೆಚ್.ಎಸ್.ಮಂಜು ಮಾತನಾಡಿದರು. ಕರ್ನಾಟಕ ಸರ್ಕಾರವು ಪ್ರತಿಷ್ಠಾಪಿಸಿರುವ ಡಿ.ದೇವರಾಜ ಅರಸು ಜಿಲ್ಲಾ ಮಟ್ಟದ ಪ್ರಶಸ್ತಿಗೆ ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ವಿ.ಆಂಜನಪ್ಪ ಆಯ್ಕೆಯಾಗಿದ್ದು, ಇದೇ ಸಂದರ್ಭದಲ್ಲಿ ಸಚಿವರು ಪ್ರಶಸ್ತಿ ನೀಡಿ ಗೌರವಿಸಿದರು.

ಕಾರ್ಯಕ್ರಮದಲ್ಲಿ ಜಿಪಂ ಸಿಇಓ ಶಾಂತ ಎಲ್.ಹುಲ್ಮನಿ, ಹಿಂದುಳಿದ ಕಲ್ಯಾಣ ಇಲಾಖೆಯ ಅಧಿಕಾರಿ ಶ್ರೀನಿವಾಸ್, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಬಿ.ರಂಗೇಗೌಡ, ಮುಡಾ ಅಧ್ಯಕ್ಷ ಶ್ರೀನಿವಾಸ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಎಸ್.ರಾಜಮೂರ್ತಿ, ವಿವಿಧ ಸಂಘ ಸಂಸ್ಥೆಗಳ ಮುಖಂಡರಾದ ಸಂದೇಶ್, ಸುರೇಶ್, ಅಮ್ಜದ್ ಪಾಷ್, ದೊಡ್ಡಯ್ಯ, ರಾಜು, ಕೃಷ್ಣ ಇದ್ದರು.

ಉತ್ತಮ ಗುಣ, ನಡತೆ ಬೆಳೆಸಿಕೊಳ್ಳಲು ವಿದ್ಯಾರ್ಥಿಗಳಿಗೆ ಸಲಹೆ



ನಾಗಮಂಗಲ, ಆ.20– ನಮ್ಮ ಸುತ್ತ ಮುತ್ತಲಿನ ಪರಿಸರದಲ್ಲಿ ಹೂವು ಅರಳಿ ಸುಗಂಧ ಪಸರಿಸುವಂತೆ ಪ್ರತಿಯೊಬ್ಬರೂ ಉತ್ತಮ ಗುಣ, ನಡತೆಯನ್ನು ಜೀವನದಲ್ಲಿ ಬೆಳೆಸಿಕೊಂಡು ಸಮಾಜಕ್ಕೆ ಉತ್ತಮ ಸಂದೇಶ ನೀಡಬೇಕು ಎಂದು ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ಪಟ್ಟಣದ ಟಿ.ಬಿ.ಬಡಾವಣೆಯ ಆದಿಚುಂಚನಗಿರಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಆಯೋಜಿಸಿದ್ದ ಸಾಂಸ್ಕೃತಿಕ ಮತ್ತು ಕ್ರೀಡಾ ಕಾರ್ಯಕ್ರಮದ ಸಮಾರೋಪದಲ್ಲಿ ಅವರು ಮಾತನಾಡಿದರು. ವಿದ್ಯಾರ್ಥಿಗಳು ವಿದ್ಯೆಯೊಂದಿಗೆ ಉತ್ತಮ ಸಂಸ್ಕಾರವನ್ನು ಬೆಳೆಸಿಕೊಳ್ಳಬೇಕು. ತಮ್ಮಲ್ಲಿರುವ ಅಗಾಧವಾದ ಪ್ರತಿಭೆಯನ್ನು ಅನಾವರಣಗೊಳಿಸಬೇಕು ಎಂದ ಅವರು, ನಿಮ್ಮ ಬಾಳಿಗೆ ನೀವೇ ಶಿಲ್ಪಿಗಳಾಗಬೇಕು ಎಂದು ತಿಳಿಸಿದರು.

ತುಮಕೂರು ವಿವಿ ವಿಶ್ರಾಂತ ಉಪಕುಲಪತಿ ಕರ್ನಲ್ ವೈ.ಎಸ್.ಸಿದ್ದೇಗೌಡ ಮಾತನಾಡಿ, ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ವಿನಯ, ಉತ್ತಮ ಸಂಸ್ಕಾರವನ್ನು ಕಲಿಯಬೇಕು ಎಂದು ಸಲಹೆ ನೀಡಿದರು. ಸಾಹಿತಿ ಹಾಲತಿ ಸೋಮಶೇಖರ್ ಮಾತನಾಡಿ, ಕ್ರೀಡೆ ದೇಹದ ಬೆಳವಣಿಗೆಗೆ ಸಹಕರಿಸಿದರೆ, ವ್ಯಕ್ತಿತ್ವ ವಿಕಸನಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳು ಸಹಕಾರಿಯಾಗಿದೆ. ಪಾಶ್ಚತ್ಯರು ನಮ್ಮ ದೇಶದ ಸಂಪತ್ತನ್ನು ಎಷ್ಟೇ ಲೂಟಿ ಮಾಡಿದರೂ, ನಮ್ಮಲ್ಲಿರುವ ಸಂಸ್ಕೃತಿ ಕದಿಯಲು ಸಾಧ್ಯವಾಗಲಿಲ್ಲ. ನಮ್ಮ ಸಂಸ್ಕೃತಿ ಜಗತ್ತಿನಲ್ಲಿಯೇ ಮುಂಚೂಣಿಯಲ್ಲಿದೆ ಎಂದರು.

ಇದೇ ವೇಳೆ 'ಗಿರಿ ಕುಸುಮ' ವಾರ್ಷಿಕ ಸಂಚಿಕೆಯನ್ನು ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರು ಹಾಗೂ ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಕೆ.ಲೋಕೇಶ್ ಬಿಡುಗಡೆಗೊಳಿಸಿದರು. ಶ್ರೀಮಠದ ಸತ್ಯ ಕೀರ್ತಿನಾಥ ಸ್ವಾಮೀಜಿ, ಹೆಚ್.ಟಿ.ಕೃಷ್ಣೇಗೌಡ, ತ್ರಿವೇಣಿ, ದೇವಾನಂದ, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಇದ್ದರು. ವೇದಿಕೆ ಕಾರ್ಯಕ್ರಮದ ಬಳಿಕ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಹಾಗೂ ಕ್ರೀಡಾ ಕಾರ್ಯಕ್ರಮ ನಡೆಯಿತು.

ಶ್ರಾವಣ ಶನಿವಾರ: ಶ್ರೀ ವೆಂಕಟೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ

ಭಾರತೀನಗರ, ಆ.20– ಶ್ರಾವಣ ಶನಿವಾರದ ಅಂಗವಾಗಿ ಕೆ.ಎಂ. ದೊಡ್ಡಿಯ ಶ್ರೀವೆಂಕಟೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ ನಡೆಯಿತು.

ತರಕಾರಿ ರಾಮಲಿಂಗೇಗೌಡ ಅವರ ನೇತೃತ್ವದಲ್ಲಿ ಬೆಳಗ್ಗೆಯಿಂದ ಸಂಜೆಯವರೆವಿಗೂ ಪೂಜಾ ಕಾರ್ಯಕ್ರಮ ಕೈಗೊಳ್ಳಲಾಗಿತ್ತು. ದೇವರ ಮೂರ್ತಿಯನ್ನು ಹೂವಿನಿಂದ ವಿಶೇಷವಾಗಿ ಅಲಂಕರಿಸಲಾಗಿತ್ತು. ವಾದ್ಯಗೋಷ್ಠಿಯೊಂದಿಗೆ ನಡೆದ ಪೂಜಾ ಕಾರ್ಯಕ್ರಮದಲ್ಲಿ ನೂರಾರು ಭಕ್ತರು ಭಾಗವಹಿಸಿ ಪೂಜೆ ಸಲ್ಲಿಸಿದರು. ಬಳಿಕ, ಪ್ರಸಾದ ವಿತರಣೆ ಮಾಡಲಾಯಿತು.



ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕರಿಂದ ಭೂಮಿಪೂಜೆ



ಶ್ರೀರಂಗಪಟ್ಟಣ, ಆ.20– ತಾಲೂಕಿನ ನೆಲಮನೆ ಗ್ರಾಮದಲ್ಲಿ 2 ಕೋಟಿ ರೂ. ವೆಚ್ಚದ ಹಾಗೂ ಕೊಡಿಯಾಲ ಗ್ರಾಮದಲ್ಲಿ 2.75 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿ ಶಾಸಕ ರವೀಂದ್ರ ಶ್ರೀಕಂಠಯ್ಯ ಭೂಮಿಪೂಜೆ ನೆರವೇರಿಸಿದರು. ಬಳಿಕ ಮಾತನಾಡಿದ ಅವರು, ಜಿಲ್ಲೆಯ ಅಭಿವೃದ್ಧಿ ಸಂಬಂಧ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ನೂರಾರು ಕೋಟಿ ಅನುದಾನ ಬಿಡುಗಡೆ ಮಾಡಿಸಿದ್ದೇನೆ. ಮುಖ್ಯಮಂತ್ರಿಗಳು ಸೇರಿದಂತೆ ಕೇಂದ್ರದ ಸಚಿವರನ್ನು ಭೇಟಿ ಮಾಡಿ ಸಮಸ್ಯೆಗಳ ಪರಿಹಾರಕ್ಕಾಗಿ ಅರ್ಜಿ ನೀಡಿದ್ದೇನೆಂದು ಜಿಲ್ಲೆಯ ಜನರಿಗೆ ಸುಳ್ಳು ಆಶ್ವಾಸನೆ ನೀಡುವುದನ್ನು ಸಂಸದೆ ಸುಮಲತಾ ಅವರು ಬಿಟ್ಟು, ಇನ್ನು ಮುಂದಾದರೂ ಸಾರ್ವಜನಿಕರ ಕೆಲಸಗಳನ್ನು ಮಾಡಲಿ ಎಂದು ಕಿಡಿಕಾಡಿದರು.

ಹಕ್ಕು ಪತ್ರ ವಿತರಿಸಲು ಮಾಜಿ ಶಾಸಕರ ಅಡ್ಡಿ: ತಾಲೂಕಿನ ಅರಕೆರೆ, ಬೆಳಗೊಳ ಹಾಗೂ ಅಲ್ಲಾಪಟ್ಟಣ ಗ್ರಾಮಗಳಲ್ಲಿ ಅರ್ಹ ಫಲನುಭವಿಗಳಿಗೆ ಹಕ್ಕು ಪತ್ರ ನೀಡಲು ಕಳೆದೊಂದು ವಾರದಿಂದ ಸತತವಾಗಿ ಅಧಿಕಾರಿಗಳೊಂದಿಗೆ ಸಭೆ ನಡೆಸುತ್ತಿದ್ದೇನೆ. ಆದರೆ ಇಲ್ಲಿನ ಮಾಜಿ ಶಾಸಕರು ಅದನ್ನು ತಡೆಯಲು ಮುಂದಾಗಿದ್ದಾರೆ ಎಂದು ಹೆಸರೇಳದೆ ಮಾಜಿ ಶಾಸಕ ರಮೇಶಬಾಬು ಬಂಡಿಸಿದ್ದೇಗೌಡರ ವಿರುದ್ಧ ವಾಗ್ದಾಳಿ ನಡೆಸಿದರು.

ಕೊಡಿಯಾಲದಲ್ಲಿ ರಸ್ತೆ ಅಭಿವೃದ್ಧಿಗೆ ಚಾಲನೆ: ಕೊಡಿಯಾಲ–ಆಲಗೂಡು ರಸ್ತೆ ತೀರ ಅದ್ವಾನಗೊಂಡು ಶಾಲಾ ಮಕ್ಕಳು ಸೇರಿದಂತೆ ಸಾರ್ವಜನಿಕರು ತಿರುಗಾಡಲು ಸಾಧ್ಯವಾಗದಂತ ಪರಿಸ್ಥಿತಿ ನಿರ್ಮಾಣವಾಗಿದೆ. ಹಾಗಾಗಿ, 2.75 ಕೋಟಿ ರೂ. ವೆಚ್ಚದಡಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗುತ್ತಿದೆ ಎಂದು ತಿಳಿಸಿದರು.

ಈ ವೇಳೆ ಸ್ಥಳೀಯ ಮುಖಂಡರು, ಗ್ರಾಮಸ್ಥರು ಹಾಗೂ ಅಧಿಕಾರಿಗಳು ಹಾಜರಿದ್ದರು.

ಚಿನಕುರಳಿ ವೃತ್ತ ಮಟ್ಟದ ಪ್ರೌಢಶಾಲಾ ಕ್ರೀಡಾಕೂಟಕ್ಕೆ ಚಾಲನೆ




ಪಾಂಡವಪುರ, ಆ.20– ತಾಲೂಕಿನ ಚಿನಕುರಳಿ ಗ್ರಾಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತ ಇಲಾಖೆ(ದೈಹಿಕ ಶಿಕ್ಷಣ ವಿಭಾಗ), ಪಾಂಡವಪುರ ಮತ್ತು ಕರ್ನಾಟಕ ಪಬ್ಲಿಕ್ ಶಾಲೆ ಚಿನಕುರಳಿಯಿಂದ ನಡೆದ ಚಿನಕುರಳಿ ವೃತ್ತ ಮಟ್ಟದ ಪ್ರೌಢಶಾಲಾ ಕ್ರೀಡಾಕೂಟಕ್ಕೆ ಜಿಪಂ ಮಾಜಿ ಸದಸ್ಯ ಸಿ.ಅಶೋಕ್ ಚಾಲನೆ ನೀಡಿದರು.

ಕ್ರೀಡಾಕೂಟದಲ್ಲಿ 14ಕ್ಕೂ ಅಧಿಕ ಪ್ರೌಢ ಶಾಲೆಗಳಿಂದ 400ಕ್ಕೂ ಅಧಿಕ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಗ್ರಾಪಂ ಸದಸ್ಯ ಸಿ.ಶಿವಕುಮಾರ್ ಧ್ವಜಾರೋಹಣ ನೆರವೇರಿಸಿದರು. ತಾಪಂ ಮಾಜಿ ಸದಸ್ಯ ಸಿ.ಎಸ್.ಗೋಪಾಲಗೌಡ ಗುಂಡು ಎಸೆದು ಉದ್ಘಾಟಿಸಿದರು. ರಾಷ್ಟ್ರೀಯ ಕ್ರೀಡಾಪಟು ಚಿನಕುರಳಿ ಚಲವೇಗೌಡ ಅವರು ಕ್ರೀಡಾಜ್ಯೋತಿ ಸ್ವೀಕರಿಸಿದರು. ಜಿಪಂ ಮಾಜಿ ಸದಸ್ಯ ಸಿ.ಅಶೋಕ್ ಅವರು ಕ್ರೀಡಾಪಟುಗಳನ್ನು ಪರಿಚಯ ಮಾಡಿಕೊಂಡರು.

ಗ್ರಾಪಂ ಸದಸ್ಯ ಸಿ.ಶಿವಕುಮಾರ್ ಮಾತನಾಡಿ, ಶಾಲಾ ಹಂತದಲ್ಲಿ ನಡೆಯುವ ಕ್ರೀಡಾಕೂಟದಲ್ಲಿ ವಿದ್ಯಾರ್ಥಿಗಳು ಕಡ್ಡಾಯವಾಗಿ ಭಾಗವಹಿಸಬೇಕು. ಕ್ರೀಡಾಕೂಟದಲ್ಲಿ ಸೋಲು–ಗೆಲುವು ಸಾಮಾನ್ಯ. ಹಾಗಾಗಿ, ಎರಡನ್ನು ಸಮಾನವಾಗಿ ಸ್ವೀಕರಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಬಿಇಓ ಲೋಕೇಶ್ ಮಾತನಾಡಿದರು. ಈ ಸಂದರ್ಭದಲ್ಲಿ ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಸಿ.ಪ್ರಕಾಶ್, ಗ್ರಾಪಂ ಅಧ್ಯಕ್ಷ ಪುಟ್ಟಸ್ವಾಮಿ(ಪಾಪಣ್ಣ), ಉಪಾಧ್ಯಕ್ಷ ಮಂಜುಳಾ ಮಹದೇವು, ಮಾಜಿ ಅಧ್ಯಕ್ಷರಾದ ಮಹಮದ್ ಇಮ್ತಿಯಾಜ್ ಪಾಷ, ಶಿಂಢಬೋಗನ ಹಳ್ಳಿ ನಾಗಣ್ಣ, ಸದಸ್ಯರಾದ ಗಾಯಿತ್ರಿ ಶಿವಕುಮಾರ್, ಕೃಷ್ಣೇಗೌಡ, ಪರಮೇಶ್, ನಾಗೇಗೌಡ, ಕುಮಾರ್, ಶ್ರೀನಿವಾಸ್, ಸುಮಾ ರಾಜು, ಜಯಶೀಲಾ, ವಿಎಸ್‌ಎಸ್‌ಎನ್‌ಬಿ ಅಧ್ಯಕ್ಷ ಮೊಗ್ಗಣ್ಣಗೌಡ, ಡೇರಿ ಅಧ್ಯಕ್ಷ ಲೋಕೇಶ್, ಮಾಜಿ ಅಧ್ಯಕ್ಷ ರಮೇಶ್, ಗ್ರಾಪಂ ಮಾಜಿ ಸದಸ್ಯ ಮೈಕ್ ಮಹದೇವು, ಆರ್.ಸಿ.ನಾಗೇಗೌಡ, ದೈಹಿಕ ಪರೀಕ್ಷಕ ಬಸವರಾಜು, ಗ್ರೇಡ್–1 ದೈಹಿಕ ಶಿಕ್ಷಕ ಸಂಘದ ಅಧ್ಯಕ್ಷ ಶಿವಕುಮಾರ್, ಮುಖ್ಯಶಿಕ್ಷಕಿ ಕಲಾವತಿ ಇದ್ದರು.

ಅಪರಿಚಿತ ವ್ಯಕ್ತಿ ಸಾವು



ಶ್ರೀರಂಗಪಟ್ಟಣ, ಆ.20– ಪಟ್ಟಣ ಠಾಣಾ ವ್ಯಾಪ್ತಿಯ ಅನ್ನಪೂರ್ಣೇಶ್ವರಿ ಹೋಟೆಲ್ ಮುಂಭಾಗ ಶುಕ್ರವಾರ ಅಪರಿಚಿತ ವ್ಯಕ್ತಿ ಅಸ್ವಸ್ಥನಾಗಿ ಮಲಗಿದ್ದು, ಆತನನ್ನು ಚಿಕಿತ್ಸೆಗಾಗಿ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಆತ ಶನಿವಾರ ಮೃತಪಟ್ಟಿದ್ದಾನೆ. ಈತನ ವಯಸ್ಸು ಸುಮಾರು 45 ರಿಂದ 50 ವರ್ಷವಾಗಿದ್ದು, ಎದೆಯ ಮೇಲೆ ನಿರಂಜನ್ ಎಂಬ ಹಚ್ಚೆ ಇರುತ್ತದೆ. ಮೈ ಮೇಲೆ ನೀಲಿ ಬಣ್ಣದ ಪ್ಯಾಂಟ್, ಕಾಫಿ ಕಲರ್ ಅಂಡರ್‌ವೇರ್ ಧರಿಸಿರುತ್ತಾನೆ. ಮೃತರ ವಾರಸುದಾರರು ಇದಲ್ಲಿ ಶ್ರೀರಂಗಪಟ್ಟಣ ಟೌನ್ ಪೊಲೀಸ್ ಠಾಣೆಯ ಮೊ: 9480804855 ಅಥವಾ ಕಂಟ್ರೋಲ್ ರೂಂ 9480804800 ಸಂಪರ್ಕಿಸಲು ಕೋರಲಾಗಿದೆ

ವಿಜೃಂಭಣೆಯ ಶ್ರೀಉದ್ಭವ ಬೋಳಾರೆ ರಂಗನಾಥಸ್ವಾಮಿ ಬ್ರಹ್ಮ ರಥೋತ್ಸವ

ಕೆ.ಆರ್.ಪೇಟೆ, ಆ.20– ಶ್ರಾವಣ ಶನಿವಾರದ ಅಂಗವಾಗಿ ತಾಲೂಕಿನ ಬೂಕನಕೆರೆ ಹೋಬಳಿಯ ಬೆಟ್ಟದಹೊಸೂರು ಬಳಿಯ ಶ್ರೀಉದ್ಭವ ಬೋಳಾರೆ ರಂಗನಾಥಸ್ವಾಮಿ ಬ್ರಹ್ಮ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.



ರಥೋತ್ಸವಕ್ಕೆ ಸಚಿವ ಡಾ.ಕೆ.ಸಿ.ನಾರಾಯಣಗೌಡ, ತಹಸೀಲ್ದಾರ್ ಎಂ.ವಿ.ರೂಪಾ, ದೇವಾಲಯ ಟ್ರಸ್ಟ್‌ನ ಅಧ್ಯಕ್ಷ ಬಿ.ಟಿ.ವೆಂಕಟೇಶ್, ದಾನಿಗಳಾದ ರಾಮಕೃಷ್ಣಸ್ವಾಮಿ, ಕಾಂಗ್ರೆಸ್ ಮುಖಂಡ ಶ್ರೀ ಸುದರ್ಶನ್ ಇತರರು ಸಾಂಪ್ರದಾಯಿಕ ಪೂಜೆ ಸಲ್ಲಿಸಿದರು.

ಬಳಿಕ ದೇವರ ಪಲ್ಲಕ್ಕಿ ಉತ್ಸವವನ್ನು ದೇವಾಲಯದ ಸುತ್ತಲೂ ಪ್ರದಕ್ಷಿಣೆ ಹಾಕಲಾಯಿತು. ಇದೇ ವೇಳೆ ಸಾಹಿತಿ ಬಲ್ಲೇನಹಳ್ಳಿ ಮಂಜುನಾಥ್ ಬರೆದಿರುವ ಶ್ರೀಬೋಳಾರೆ ರಂಗನಾಥ ದರ್ಶನ ಪುಸ್ತಕವನ್ನು ಸಚಿವರು ಬಿಡುಗಡೆಗೊಳಿಸಿದರು.

ಈ ವೇಳೆ ಮಾಜಿ ಶಾಸಕ ಬಿ.ಪ್ರಕಾಶ್, ಮೂಡಾ ಅಧ್ಯಕ್ಷ ಕೆ.ಶ್ರೀನಿವಾಸ್, ಮೈಮುಲ್ ನಿರ್ದೇಶಕ ಎಸ್.ಸಿ.ಅಶೋಕ್, ಮುಖಂಡರಾದ ವಿಜಯ್‌ರಾಮೇಗೌಡ, ಸರ್ವಮಂಗಳ ವೆಂಕಟೇಶ್, ಬಿ.ಜವರಾಯೀಗೌಡ, ಎಂ.ಆರ್.ಸುದರ್ಶನ್, ಬಿ.ಪುಟ್ಟಸ್ವಾಮಿ, ಡಾ.ಪಿ.ರಂಗಸ್ವಾಮಿ, ಬೆಟ್ಟೇಗೌಡ, ಲಕ್ಷ್ಮೀಸಾಗರ ರಂಗಸ್ವಾಮಿ, ವೆಂಕಟರಮಣೇಗೌಡ, ಜವರೇಗೌಡ, ಬಿ.ಮಹೇಶ್, ಐಚನಹಳ್ಳಿ ದಿನೇಶ್ ಇತರರರು ಭಾಗವಹಿಸಿದ್ದರು.

ಅರ್ಚಕರಾದ ಹೆಚ್.ಪಿ.ಸುಂದರ್ ನೇತೃತ್ವದಲ್ಲಿ ಪೂಜಾ ಕಾರ್ಯಕ್ರಮಗಳು ನಡೆದವು. ನಾಡಿನ ವಿವಿಧ ಭಾಗಗಳಿಂದ ಸುಮಾರು 10ಸಾವಿರಕ್ಕೂ ಹೆಚ್ಚಿನ ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡಿದ್ದರು. ಸಬ್ ಇನ್ಸ್‌ಪೆಕ್ಟರ್ ಬಸವರಾಜ ಚಿಂಚೋಳಿ ಮತ್ತು ಪ್ರಮೋದ್ ನೇತೃತ್ವದಲ್ಲಿ ಸೂಕ್ತ ಭದ್ರತೆ ಒದಗಿಸಲಾಗಿತ್ತು.

ಕೋಮುವಾದಿಗಳಿಗೆ ಸಿದ್ದರಾಮಯ್ಯ ಬಗ್ಗಲ್ಲ...


● ಮಾಜಿ ಸ್ಪೀಕರ್ ರಮೇಶ್ ಕುಮಾರ್ ಸ್ಪಷ್ಟನೆ ● ಅವರ ಅಭಿವೃದ್ಧಿ ಕಾರ್ಯಗಳ ಚರ್ಚೆ ಆಗಬೇಕು

ಮೈಸೂರು, ಆ.20(ಎಂಟಿವೈ)– ಮಾಜಿ ಮುಖ್ಯಮಂತ್ರಿ, ಹಾಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಜನನಾಯಕ. ಕೋಮುವಾದಿ ಶಕ್ತಿಗಳಿಗೆ ಹೆದರಿ ಮನೆಯಲ್ಲಿ ಕೂರುವ ನಾಯಕ ಅವರಲ್ಲ ಎಂದು ಮಾಜಿ ವಿಧಾನ ಸಭಾಧ್ಯಕ್ಷ ಕೆ.ಆರ್.ರಮೇಶ್ ಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಕೆಲವು ಆದರ್ಶಗಳ ಸಂಕೇತವಾಗಿದ್ದಾರೆ. ಜೀವ ಭಯದ ಬಗ್ಗೆ ಕುಟುಂಬದವರಿಗೆ ಸಹಜವಾಗಿ ಆತಂಕವಾಗಿದೆ. ಆದರೆ, ಸಿದ್ದರಾಮಯ್ಯರನ್ನು ಮುಟ್ಟುವುದು ಸುಲಭವಲ್ಲ, ಅದು ಸಾಧ್ಯವೂ ಇಲ್ಲ. ಈ ವಿಚಾರವಾಗಿ ತಲೆಕೆಡಿಸಿಕೊಳ್ಳುವ ಬದಲಿಗೆ ಸಿದ್ದರಾಮಯ್ಯ ವ್ಯಕ್ತಿತ್ವ, ರಾಜಕೀಯ ಮುಖಂಡನಾಗಿ ತಳೆಯುವ ನಿಲುವುಗಳು, ಸಮರ್ಥಿಸಿ ಆಡಿದ ಮಾತುಗಳು, ಮಾಡಿದ ಅಭಿವೃದ್ಧಿ ಕೆಲಸಗಳು ಚರ್ಚೆಯಾಗಬೇಕು ಎಂದು ನುಡಿದರು.

ದಲಿತ ಮುಖ್ಯಮಂತ್ರಿ ಮಾಡಲಾಗದ ಕೆಲಸವನ್ನು ಸಿದ್ದರಾಮಯ್ಯ ಮಾಡಿದ್ದಾರೆ. ಕುರುಬ ಸಮಾಜಕ್ಕೆ ಎಸ್‌ಟಿ ಮೀಸಲು ಹೋರಾಟಕ್ಕೆ ಸಿದ್ದರಾಮಯ್ಯ ಬೆಂಬಲ ನೀಡದೇ ವಿರೋಧ ಕಟ್ಟಿಕೊಂಡರು. ಸಿದ್ದರಾಮಯ್ಯ ಒಳ್ಳೆಯ ಆಡಳಿತ ನೀಡಿದ್ದರು. ಒಳ್ಳೆಯ ಕೆಲಸ ಮಾಡಿದ್ದನ್ನು ಬದಿಗೆ ಸರಿಸಿದ ಜನರು ಅವರನ್ನು ಶಿಲುಬೆಗೇರಿಸಿದರು. ಜನತಂತ್ರ ವ್ಯವಸ್ಥೆಯ ಚಕ್ರ ಉರುಳಿದೆ. ಮತ್ತೊಮ್ಮೆ ಅಂತಹ ಸನ್ನಿವೇಶ ಬಂದಿದೆ. ಡಿ.ದೇವರಾಜ ಅರಸು ಅವರಿಗೆ ತಪ್ಪಿದ ಅವಕಾಶ ಸಿದ್ದರಾಮಯ್ಯ ಅವರಿಗೆ ಸಿಗುತ್ತದೆ. ಅದು ಪ್ರಕೃತಿಯೇ ನೀಡುತ್ತಿದೆ. ಹಾಗಾಗಿ ಕಾಂಗ್ರೆಸ್ ಕಾರ್ಯಕರ್ತರು ಉದ್ವೇಗಕ್ಕೆ ಒಳಗಾಗಬಾರದು. ಎಲ್ಲವನ್ನು ಮೌನದಿಂದ ಎದುರಿಸುವ ಮೂಲಕ ಮುಂದಿನ ಗುರಿಯನ್ನು ತಲುಪಬೇಕು ಎಂದು ಸಲಹೆ ನೀಡಿದರು.

ನೇಮಕ



ಮೈಸೂರು, ಆ. 20– ಡಿ. ದೇವರಾಜ ಅರಸು ಬ್ಲಾಕ್ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ಇಂಡಸ್ಟ್ರಿಯಲ್ ಸಬರ್ಬ್‌ನ ವೀವರ್ಸ್ ಕಾಲೋನಿಯ ಎಂ.ಜೆ. ರವೀಂದ್ರ ಅವರನ್ನು ನೇಮಕ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಒಂದನೇ ಪುಟದಿಂದ

ರಾಜೀನಾಮೆಗೂ ಒಂದು ಗೌರವ ತಂದುಕೊಟ್ಟವರು ಅರಸು!

ಕ್ಷಣವೂ ಯೋಚಿಸದೆ ರಾಜೀನಾಮೆ ನೀಡಿದರು. ಅವರನ್ನು ಅಧಿಕಾರ ವ್ಯಾಮೋಹಿ ಎನ್ನುವುದು ಸರಿಯೇ... ಎಂದು ಖಾರವಾಗಿ ಪ್ರಶ್ನಿಸಿದರು.

ಪ್ರಸ್ತುತ ಸಂದರ್ಭದಲ್ಲಿ ಮಂತ್ರಿಗಳ ಮೇಲೆ ಎಫ್‌ಐಆರ್ ದಾಖಲಾದರೂ ರಾಜೀನಾಮೆ ಕೊಡಲ್ಲ ಎನ್ನುತ್ತಾರೆ. ರಾಜೀನಾಮೆ ನೀಡಬೇಕಾದ ಸಂದರ್ಭ ಎದುರಾದರೆ ಮತ್ತೊಮ್ಮೆ ಪರಿಶೀಲಿಸುವ, ಹಿಂಬಾಲಕರೊಂದಿಗೆ ಚರ್ಚಿಸುವ, ರೇಟ್ ಫಿಕ್ಸ್ ಮಾಡುವ, ಪಲಾಯನ ಮಾಡಿರುವ ಪ್ರಯತ್ನಗಳು ನಡೆಯುತ್ತಿದೆ. ಇದರೊಂದಿಗೆ ಯಾವುದೋ ಪಕ್ಷದಿಂದ ಗೆದ್ದು ಮತ್ತೊಂದು ಪಕ್ಷಕ್ಕೆ ಹೋಗುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ ಎಂದು ವಿಷಾದಿಸಿದರು.

ದೇವರಾಜ ಅರಸು ಅವರು ಜಾರಿಗೆ ತಂದ ಸಾಮಾಜಿಕ ಸುಧಾರಣೆ ಕಾರ್ಯಕ್ರಮಗಳನ್ನು ವಿರೋಧಿಸಿದ್ದವರು ಇಂದು ಹಿಂದುಳಿದ ವರ್ಗಗಳಿಗೆ ಸರ್ಟಿಫಿಕೆಟ್ ಪಡೆಯಲು ಪ್ರತಿಭಟನೆಗಳನ್ನು ಮಾಡುತ್ತಿದ್ದಾರೆ. ದಶಕಗಳಿಗೂ ಹಿಂದೆ ಹಿಂದುಳಿದ ವರ್ಗಗಳ ಪ್ರಮಾಣಪತ್ರವನ್ನು ಪಡೆದುಕೊಳ್ಳಲು ಜನರು ಮುಜುಗರ ಪಡುತ್ತಿದ್ದರು. ಆದರೆ ಈಗ ಸರ್ಕಾರ ನೀಡುವ ಸೌಲಭ್ಯವನ್ನು ಪಡೆದುಕೊಳ್ಳುವುದಕ್ಕಾಗಿ ಸುಳ್ಳು ಹೇಳಿ ಜಾತಿಯ ಪ್ರಮಾಣ ಪತ್ರಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಸೌಲಭ್ಯಕ್ಕಾಗಿ ನಮ್ಮನ್ನು ಇಂತಹ ವರ್ಗಕ್ಕೆ ಸೇರಿಸಿ ಎಂದು ಪ್ರತಿಭಟನೆಗಳನ್ನು ಮಾಡುತ್ತಿದ್ದಾರೆ. ಕಾಲ ಎಲ್ಲಿಗೆ ಹೋಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ವಿಧಾನಸಭೆಯನ್ನು ನೂರಾರು ಕಿಲೋಮೀಟರ್ ದೂರದಲ್ಲಿ ನಿಂತು ನೋಡುತ್ತಿದ್ದವರನ್ನು, ಶಾಸನ ಸಭೆಯ ಒಳಗೆ ಕರೆತಂದರಲ್ಲದೇ ಮೂರನೇ ಮಹಡಿಗೂ ಹತ್ತಿಸಿದ ಕೀರ್ತಿ ದೇವರಾಜ ಅರಸು ಅವರಿಗೆ ಸಲ್ಲುತ್ತದೆ. ಅರಸು ಅವರು ಮರಣ ಹೊಂದಿ 40 ವರ್ಷವಾದರೂ ಇನ್ನೂ ಅವರ ಬಗ್ಗೆ ಮಾತನಾಡುತ್ತಿದ್ದಾರೆ ಎಂದರೆ ಅದು ಅವರು ಮಾಡಿರುವ ಸಾಮಾಜಿಕ ಸುಧಾರಣೆ ಕಾರ್ಯಗಳಿಂದಾಗಿ ಮಾತ್ರ ಎಂದು ರಮೇಶ್ ಕುಮಾರ್, ತಮ್ಮ ರಾಜಕೀಯ ಗುರುಗಳನ್ನು ಬಣ್ಣಿಸಿದರು.

ಸ್ಪೀಕರ್ ಸ್ಥಾನದ ಚುನಾವಣೆಯಲ್ಲಿ ಸ್ಪರ್ಧಿಸದಂತೆ ಅಣ್ಣ ಒತ್ತಾಯಿಸಿದ್ದರು: 1994ರಲ್ಲಿ ವಿಧಾನಸಭೆ ಸ್ಪೀಕರ್ ಸ್ಥಾನಕ್ಕಾಗಿ ಪಕ್ಷದ ವತಿಯಿಂದ ನನ್ನನ್ನು ಆಯ್ಕೆ ಮಾಡಿದ್ದರು. ಇದಕ್ಕಾಗಿ ನಾನು ನಾಮಿನೇಷನ್ ಸಲ್ಲಿಸಿದ್ದೆ. ಆ ವಿಚಾರ ತಿಳಿದು ನನ್ನ ಅಣ್ಣ ನನ್ನನ್ನು ಕರೆದು, ಸ್ಪೀಕರ್ ಸ್ಥಾನಕ್ಕಾಗಿ ನಾಮಿನೇಷನ್ ಸಲ್ಲಿಸಿರುವುದು ನಿಜವೇ? ಎಂದು ಕೇಳಿದರು. ಅದಕ್ಕೆ ನಾನು ಹೌದು ಎಂದೆ. ಆಗ ನನ್ನ ಅಣ್ಣ ನನಗೆ ಬೈಯ್ದರು. 'ನೀನು ಲಾ ಓದಿಲ್ಲ. ಕಾನೂನಿನ ವಿವಿಧ ನಿಯಮಗಳ ಬಗ್ಗೆ ಅರಿವಿಲ್ಲ. ಒಂದು ಮನೆ ಹಾಗೂ ಒಂದು ಸೈಟ್ ಕೊಡುತ್ತಾರೆ ಎಂದು ಆಸೆ ಬಿದ್ದು ಸ್ಪೀಕರ್ ಸ್ಥಾನಕ್ಕೆ ಅರ್ಜಿ ಸಲ್ಲಿಸಿದ್ದೀಯಾ. ಸಮಾಜದಲ್ಲಿ ನಾವು ತಲೆ ಎತ್ತಿಕೊಂಡು ಓಡಾಡಬೇಕಾದರೆ, ನೀನು ನಾಮಿನೇಷನ್ ಹಿಂದಕ್ಕೆ ತೆಗೆದುಕೋ ಎಂದು ಒತ್ತಾಯಿಸಿದ್ದರು. ಅದನ್ನೇ ನಾನು ಸವಾಲಾಗಿ ಸ್ವೀಕರಿಸಿ, ನಿವೃತ್ತ ನ್ಯಾಯಾಧೀಶರು, ಕಾನೂನು ತಜ್ಞರಿಂದ ಮಾಹಿತಿ ಸಂಗ್ರಹಿಸಿ, ಕಾನೂನುಗಳ ಬಗ್ಗೆ ತಿಳಿದುಕೊಂಡೇ ಎಂದರು.

4 ಬಾರಿ ಪಲ್ಟಿ ಹೊಡೆದು, 6 ಬಾರಿ ಗೆದ್ದಿದ್ದೇನೆ: ಕೋಲಾರ ಜಿಲ್ಲೆಯ ಶ್ರೀನಿವಾಸಪುರ ವಿಧಾನಸಭಾ ಕ್ಷೇತ್ರದಲ್ಲಿ ನನ್ನ ಸಮುದಾಯಕ್ಕೆ ಸೇರಿದ ಮತದಾರರ ಸಂಖ್ಯೆ ಬೆರಳೆಣಿಕೆಯಷ್ಟು ಸಂಖ್ಯೆಯಲ್ಲಿದ್ದಾರೆ. ಆದರೂ ಕ್ಷೇತ್ರದ ಮತದಾರರು ನನ್ನನ್ನು 6 ಬಾರಿ ಗೆಲ್ಲಿಸಿದ್ದಾರೆ. 4 ಬಾರಿ ಪಲ್ಟಿ ಹೊಡೆಸಿದ್ದಾರೆ. ಮುಂದಿನ ಚುನಾವಣೆಯಲ್ಲಿ ಗೆಲ್ಲಿಸುತ್ತಾರೋ ಅಥವಾ ಪಲ್ಟಿ ಹೊಡೆಸುತ್ತಾರೋ ತಿಳಿಯದು ಎಂದು ಹಾಸ್ಯ ಚಟಾಕಿ ಹಾರಿಸಿದರು.

ಹುಚ್ಚರಂತೆ ಕಾಣ್ತಾರೆ

ಪ್ರಾಮಾಣಿಕತೆ ಬಗ್ಗೆ ಮಾತನಾಡುವವರನ್ನು ಹುಚ್ಚರಂತೆ ಕಾಣುತ್ತಾರೆ. ಅವನು ತಿನ್ನುವುದಿಲ್ಲ, ಇನ್ನೊಬ್ಬರಿಗೂ ತಿನ್ನುವುದಕ್ಕೆ ಬಿಡುವುದಿಲ್ಲ ಎಂದು ಲೇವಡಿ ಮಾಡುತ್ತಾರೆ. ಶಾಲಾ–ಕಾಲೇಜುಗಳಲ್ಲಿ ನೀತಿ ಪಾಠಗಳನ್ನೇ ಹೇಳಿಕೊಡುತ್ತಿಲ್ಲ. ಮಾರಲ್ ಸೈನ್ಸ್‌ನಿಂದ ನೀತಿ ಪಾಠ ಕಲಿಯಲು ಸಾಧ್ಯವಿಲ್ಲ. ಟಿ.ವಿ ಹಾಗೂ ಸೆಲ್‌ಫೋನ್‌ಗಳಲ್ಲಿ ನೀತಿ ಪಾಠ ಹೇಳಿ ಕೊಡಲು ಸಾಧ್ಯವಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ನಮ್ಮ ದೇಶದಲ್ಲಿ ತೃಪ್ತಿ ಇಲ್ಲದಿದ್ದರೆ ಸಮಾಜ ಉದ್ಧಾರವಾಗುವುದಿಲ್ಲ. ದುರಾಸೆಯೊಂದೇ ಅತೀ ಹೆಚ್ಚಾಗಿ ಅಭಿವೃದ್ಧಿಯಾಗುತ್ತಿದೆ. ದಶಕದಿಂದ ದಶಕ್ಕೆ ದೇಶದಲ್ಲಿ ಹಗರಣಗಳ ಮೊತ್ತ ದ್ವಿಗುಣಗೊಳ್ಳುತ್ತಿದೆ. ಸಮಾಜ ಬದಲಾವಣೆಯಾಗದೇ ದೇಶವನ್ನು ಯಾವುದೇ ರೀತಿಯಲ್ಲೂ ಅಭಿವೃದ್ಧಿ ಮಾಡಲು ಸಾಧ್ಯವಿಲ್ಲ. ದೇಶದಲ್ಲಿ ಸಾವಿರಾರು ಕೋಟಿ ರೂ. ಸೋರಿಕೆ ಯಾಗಿರುವುದು ಹಗರಣಗಳ ಮೂಲಕ. 60ರ ದಶಕದಲ್ಲಿ ಸುಮಾರು 50 ಕೋಟಿ ರೂಪಾಯಿಗಳ ಹಗರಣ ನಡೆಯಿತು. ದಶಕಗಳು ಕಳೆದಂತೆ ಪ್ರಸ್ತುತ 2ಲಕ್ಷ ಕೋಟಿ ರೂಪಾಯಿಗೂ ಹೆಚ್ಚಿನ ಪ್ರಮಾಣದ ಹಗರಣಗಳು ನಡೆದಿವೆ. ಇದೇ ರೀತಿ ಆದರೆ ದೇಶ ಅಭಿವೃದ್ಧಿಯಾಗುವುದು ಹೇಗೆ ಸಾಧ್ಯ? ಎಂದು ಪ್ರಶ್ನಿಸಿದರು.


ಸಮಾಜವನ್ನು ಪರಿವರ್ತನೆ ಮಾಡಲು ಕಾನೂನಿನ ಮೂಲಕವೂ ಸಾಧ್ಯವಾಗುವುದಿಲ್ಲ. ನಮ್ಮ ಪಕ್ಕದ ದೇಶವಾದ ಚೀನಾದಲ್ಲಿ ಭ್ರಷ್ಟಾಚಾರದ ಆರೋಪ ಸಾಬೀತಾದರೆ ಗಲ್ಲು ಶಿಕ್ಷೆ ನೀಡಲಾಗುತ್ತದೆ. ಅದೇ ಭಾರತದಲ್ಲಿ 7 ವರ್ಷ ಶಿಕ್ಷೆ ವಿಧಿಸಲಾಗುತ್ತದೆ. ಸಮೀಕ್ಷೆಗಳ ಪ್ರಕಾರ ಭ್ರಷ್ಟಾಚಾರದಲ್ಲಿ ಚೀನಾ ಮೊದಲ ಸ್ಥಾನದಲ್ಲಿ ಇದೆ. ಇದನ್ನು ಗಮನಿಸಿದರೆ ಬದಲಾವಣೆ ಮಾಡಲು ಕಾನೂನಿಂದಲೂ ಆಗುವುದಿಲ್ಲ. ಆದ್ದರಿಂದ ಬದಲಾವಣೆ ಹಾಗೂ ಪ್ರಾಮಾಣಿಕತೆ ಎನ್ನುವುದು ಮೊದಲು ನಮ್ಮಲ್ಲಿ ಬರಬೇಕು. ಅದು ನಮ್ಮ ಮಕ್ಕಳು, ಮೊಮ್ಮಕ್ಕಳಿಗೆ ತಲುಪಬೇಕು. ಫಲವನ್ನು ನಾವು ನಿರೀಕ್ಷೆ ಮಾಡಬಾರದು. ಮುಂದಿನ ಪೀಳಿಗೆಗೆ ಉತ್ತಮ ಸಮಾಜವನ್ನು ನಿರ್ಮಾಣ ಮಾಡಿಕೊಡಬೇಕು ಎಂದು ತಿಳಿಸಿದರು.

ನಮ್ಮ ಕಾಲದಲ್ಲಂತೂ ಸಮಾಜದಲ್ಲಿ ಬದಲಾವಣೆ ಸಾಧ್ಯವಿಲ್ಲ ಎಂದು ನನಗೆ ಗೊತ್ತಿದೆ. ಆದರೆ, ಯುವ ಜನರು ಹಾಗೂ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಬೇಕಾಗಿದೆ. ಅದಕ್ಕಾಗಿ ಲೋಕಾಯುಕ್ತರಾಗಿದ್ದ ವೇಳೆ ನಾನು ಕಂಡ ಭ್ರಷ್ಟ ವ್ಯವಸ್ಥೆ ಕುರಿತಂತೆ ವಿವರಿಸುತ್ತಿದ್ದೇನೆ. ಇದುವರೆಗೂ ಸಾವಿರಾರು ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದೇನೆ. ಯಾವುದೇ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಒಂದು ರೂ ಪಡೆದಿಲ್ಲ ಎಂದರು.

ಪ್ರಶಸ್ತಿ ಪುರಸ್ಕೃತರು: ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್, ಅರಗು ಮತ್ತು ಬಣ್ಣದ ಕಾರ್ಖಾನೆಯ ಅಧ್ಯಕ್ಷ ರಘು ಆರ್.ಕೌಟಿಲ್ಯ ಅವರಿಗೆ ಅರಸು ಆದರ್ಶ ಭೂಷಣ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಪ್ರಶಸ್ತಿಗೆ ಭಾಜನರಾಗಿದ್ದ ಶಾಸಕ ತನ್ವೀರ್‌ಸೇಠ್ ಅನಾರೋಗ್ಯದ ಕಾರಣ ಕಾರ್ಯಕ್ರಮಕ್ಕೆ ಗೈರು ಹಾಜರಾಗಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಜಿ.ಹೇಮಂತಕುಮಾರ್ ಅಧ್ಯಕ್ಷತೆ ವಹಿಸಿದ್ದರು. ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾನ ಸಮಿತಿಯ ಗೌರವಾಧ್ಯಕ್ಷ ಎಂ.ಚಂದ್ರಶೇಖರ ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ ಅಭಿನಂದನಾ ನುಡಿಗಳನ್ನಾಡಿದರು. ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾನ ಸಮಿತಿಯ ಅಧ್ಯಕ್ಷ ಜಾಕೀರ್ ಹುಸೇನ್, ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್‌ಕುಮಾರ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದ ಕಾರ್ಯಕ್ರಮವನ್ನು ಎಂ.ಎ.ಕಮಲಾ ಅನಂತರಾಮ್ ನಿರೂಪಣೆ ಮಾಡಿದರು.

ಜೀತ ಪದ್ಧತಿ ನಿರ್ಮೂಲನೆಗೆ ಅರಸು 'ನಿರಂಕುಶ ಪ್ರಭು' ಆಗಬೇಕಾಯಿತು

● ಮಾಜಿ ಸ್ಪೀಕರ್ ರಮೇಶ್ ಕುಮಾರ್ ಬಣ್ಣನೆ ● 'ಉಳುವವನೇ ಭೂಮಿ ಒಡೆಯ' ಘೋಷಣೆಯೇ ಈ ದಿಟ್ಟತನಕ್ಕೆ ಸಾಕ್ಷಿ



ಮೈಸೂರು, ಆ.20(ಎಂಟಿವೈ)– ಉಳುವವರನ್ನೇ ಭೂ ಒಡೆಯನಾಗಿ ಮಾಡುವುದರೊಂದಿಗೆ ಜೀತ ಪದ್ಧತಿ ನಿರ್ಮೂಲನೆ ಮಾಡಿದ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಇದಕ್ಕಾಗಿ 'ನಿರಂಕುಶ ಪ್ರಭು' ಆಗಬೇಕಾಗಿ ಬಂತು ಎಂದು ಮಾಜಿ ಸ್ಪೀಕರ್ ಕೆ.ಆರ್.ರಮೇಶ್‌ಕುಮಾರ್ ಬಣ್ಣಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ನಡೆದ ಡಿ.ದೇವರಾಜ ಅರಸು ಮತ್ತು ರಾಜೀವ್ ಗಾಂಧಿ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭೂ ಸುಧಾರಣೆಯಂತಹ ಕಷ್ಟದ ಕೆಲಸಕ್ಕೆ ಕೈ ಹಾಕಿದರು. ದೊಡ್ಡ ಜಮೀನ್ದಾರರಿಗೆ ಭೂ ಮಿತಿ ನಿಗದಿ ಮಾಡುವುದು, ಉಳುವವನೇ ಭೂ ಒಡೆಯ ಕಾಯ್ದೆ ಜಾರಿಗೊಳಿಸುವುದು ಸಾಮಾನ್ಯವಾಗಿರಲಿಲ್ಲ. ತಮ್ಮ ಪಕ್ಷದೊಳಗಿನ ವಿರೋಧವನ್ನು ಕಟ್ಟಿಕೊಂಡು ಜಾರಿಗೆ ತರುವ ಕೆಲಸ ಮಾಡಿ ಜನರ ಮನದಲ್ಲಿ ಶಾಶ್ವತವಾಗಿ ಉಳಿದಿದ್ದಾರೆ ಎಂದರು.

ಅರಸು ಅವರ ದಿಟ್ಟತನದಿಂದಾಗಿ ಹೇಳ ಹೆಸರಿಲ್ಲದ ಜಾತಿಗಳಿಗೆ ಅಧಿಕಾರ ಲಭಿಸಿತು. ಪರಿಶಿಷ್ಟ ಜಾತಿಯ ಪದವೀಧರರು ರಾಜಕಾರಣಕ್ಕೆ ಬರಬೇಕೆಂದು ಬಯಸಿದರು. ಜನರು ರಾಜಕಾರಣಿಗಳನ್ನು ನಂಬಬೇಕು ಎಂಬುದು ಅರಸು ಅವರ ಆಶಯವಾಗಿತ್ತು. ಸ್ವಾಭಿಮಾನಿ ದೇವರಾಜ ಅರಸು, 1980ರ ಲೋಕಸಭಾ ಚುನಾವಣೆಯಲ್ಲಿ ತಮ್ಮ ಪಕ್ಷ ಮೂರನೇ ಸ್ಥಾನಕ್ಕೆ ಕುಸಿದಾಗ ತಮ್ಮ ಪದವಿಗೆ ರಾಜೀನಾಮೆ ಕೊಟ್ಟ ಧೀಮಂತ ಎಂದು ಹೇಳಿದರು.

ವೈರಾಗ್ಯದಿಂದ ಬದುಕಿದ ಅರಸು ಅವರ ಮೇಲೆ 27 ಆಪಾದನೆಗಳನ್ನು ಮಾಡಲಾಯಿತು. ಅವರಿಗೆ ಬಳಸಿದ ಭಾಷೆ ಯಾರಿಗೂ ಬೇಡ. 27 ಅಪಾದನೆಗಳಲ್ಲಿ 2 ಮಾತ್ರ ಅವರಿಗೆ ಸಂಬಂಧಿಸಿದ್ದಾಗಿತ್ತು. ದುಡ್ಡು ಮಾಡುವ, ಆಸ್ತಿ ಮಾಡುವ ಆಲೋಚನೆ ಅವರ ಹತ್ತಿರವೇ ಸುಳಿಯದಂತೆ ಬದುಕಿದ್ದರು ಎಂದರು.

ಸ್ವಾತಂತ್ರ್ಯೋತ್ಸವದ ವೇಳೆ ರಾಜ್ಯ ಸರ್ಕಾರದ ಜಾಹೀರಾತಿನಲ್ಲಿ ದೇಶದ ಮೊದಲ ಪ್ರಧಾನಮಂತ್ರಿ ಜವಾಹರಲಾಲ್ ನೆಹರು ಅವರನ್ನು ಕೈಬಿಟ್ಟಿರುವ ಮೂರ್ಖರಿಗೆ ಬುದ್ಧಿ ಇದೆಯಾ? ಭಾರತದ ಸ್ವಾತಂತ್ರ್ಯ ನಿರ್ಧಾರ ಕೈಗೊಂಡಿದ್ದು ನೆಹರು. ಅವರು, ದೇಶಕ್ಕಾಗಿ ಸ್ವಾತಂತ್ರ್ಯ ದೊರಕಿಸಲು 12 ವರ್ಷ 9 ತಿಂಗಳು ಜೈಲು ವಾಸ ಅನುಭವಿಸಿದ್ದರು. ಪೋಲಿ ಪುಂಡರ ಫ್ಲೆಕ್ಸ್ ಹಾಕಿ ಬರ್ತಡೇ ಆಚರಿಸಿ, ನೈಜ ಹೋರಾಟಗಾರರನ್ನು ಅವಮಾನಿಸಬೇಡಿ ಎಂದು ಸಲಹೆ ನೀಡಿದರು. 35 ರೂ. ಇದ್ದ ಡಾಲರ್ ಬೆಲೆ 80 ರೂ.ಗೆ ಏರಿದೆ. ಇದೆಯೇನು? ಮೋದಿ ಈ ದೇಶಕ್ಕೆ ಮಾಡಿದ ಉಪಕಾರ. ಇದಕ್ಕಾಗಿ ಅವರನ್ನು ಗೌರವಿಸಬೇಕಾ? ರಾಜೀವ್ ಗಾಂಧಿ ಯುವಕರಿಗೆ ಮತದಾನದ ಹಕ್ಕು ಕೊಟ್ಟರು. ಹೆಚ್‌ಎಎಲ್, ಐಐಟಿ ಸ್ಥಾಪನೆ, ಬಾಂಕ್ರಾನಂಗಲ್ ಡ್ಯಾಂ, ಸಾರ್ವಜನಿಕ ಉದ್ದಿಮೆ ಸ್ಥಾಪಿಸಿದರು. ಒಂದೊಂದು ಮಾರುತ್ತಿರುವುದೇ ನಿಮ್ಮ ಸಾಧನೆಯೇ? ಎಂದು ಮೋದಿ ಅವರನ್ನು ಪ್ರಶ್ನಿಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಮಾತನಾಡಿ, ಡಿ.ದೇವರಾಜ ಅರಸು ಮತ್ತು ರಾಜೀವ್ ಗಾಂಧಿ ಅವರಿಗೆ ದೇಶದ ಸರ್ವಾಂಗೀಣ ಅಭಿವೃದ್ಧಿಯ ಬಗ್ಗೆ ದೂರದೃಷ್ಟಿ ಇದ್ದ ಕಾರಣದಿಂದಲೇ ಬದಲಾವಣೆ ತರಲು ಸಾಧ್ಯವಾಯಿತು. ಅರಸು ಕ್ರಾಂತಿಕಾರಕ ಕಾರ್ಯಕ್ರಮಗಳನ್ನು ಜಾರಿಗೊಳಿಸಿದರು. ರಾಜೀವ್ ಗಾಂಧಿ ಮಾಹಿತಿ ತಂತ್ರಜ್ಞಾನವನ್ನು ದೇಶವ್ಯಾಪಿ ವಿಸ್ತರಿಸಿ ಭಾರತ ಮುಂಚೂಣಿಗೆ ಬರುವಂತೆ ಮಾಡಿದ ಮಹಾನ್ ಆಡಳಿತಗಾರ ಎಂದು ವಿಶ್ಲೇಷಿಸಿದರು. ಈ ಸಂದರ್ಭದಲ್ಲಿ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್, ಜಿಪಂ ಮಾಜಿ ಅಧ್ಯಕ್ಷರಾದ ಕೆ.ಮರೀಗೌಡ, ಬಿ.ಎಂ.ರಾಮು, ಮಾಜಿ ಮೇಯರ್ ಪುಷ್ಪಲತಾ ಟಿ.ಬಿ.ಚಿಕ್ಕಣ್ಣ, ಮೋದಾಮಣಿ, ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಮಾಜಿ ಉಪಮೇಯರ್ ಪುಷ್ಪವಲ್ಲಿ, ಮುಖಂಡರಾದ ಎಲ್.ಭಾಸ್ಕರ್, ಎಂ.ಎನ್.ನವೀನ್‌ಕುಮಾರ್, ಭಾಸ್ಕರ್ ಎನ್.ಗೌಡ, ಚಂದ್ರು, ಶಿವಮಲ್ಲು ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಆ.26, ಕಾಂಗ್ರೆಸ್ ಪ್ರತಿಭಟನೆಗೆ ಪ್ರತಿಯಾಗಿ ಬಿಜೆಪಿಯಿಂದ ಜನಜಾಗೃತಿ ಸಮಾವೇಶ

ಬೂತ್ ಮಟ್ಟದಿಂದಲೂ ಕಾರ್ಯಕರ್ತರ ಆಗಮನಕ್ಕೆ ಕರೆ

● ಕೊಡಗಿನ ಮೇಲೆ ಟಿಪ್ಪು 32 ಬಾರಿ ಆಕ್ರಮಣ, ಇದು ಕಾಂಗ್ರೆಸ್ಸಿನಿಂದ 33ನೇ ದಂಡಯಾತ್ರೆ



ಮಡಿಕೇರಿ,ಆ.20– ಕೊಡಗು ಬಿಜೆಪಿಯಿಂದ ಆ.26ರಂದು ಮಡಿಕೇರಿಯ ಗಾಂಧಿ ಮೈದಾನದಲ್ಲಿ ಬೃಹತ್ ಜನಜಾಗೃತಿ ಸಮಾವೇಶ ಆಯೋಜಿಸಲಾಗಿದೆ ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ರಾಬಿನ್ ದೇವಯ್ಯ ಇಂದಿಲ್ಲಿ ಘೋಷಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ರಾಬಿನ್ ದೇವಯ್ಯ, ಕಾಂಗ್ರೆಸ್‌ನ ಕೋಮುಭಾವನೆ ಕೆರಳಿಸುವ ಷಡ್ಯಂತ್ರದ ಬಗ್ಗೆ ಜಿಲ್ಲೆಯ ಜನತೆಯಲ್ಲಿ ಜಾಗೃತಿ ಉಂಟು ಮಾಡಲು ಈ ಬೃಹತ್ ಸಮಾವೇಶ ಆಯೋಜಿಸಲಾಗಿದೆ. ಬಿಜೆಪಿಯ ಪ್ರಮುಖರು ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ, ಜಿಲ್ಲೆಯ ಪ್ರತೀ ಬೂತ್ ಮಟ್ಟದಿಂದಲೂ ಸಾವಿರಾರು ಸಂಖ್ಯೆಯಲ್ಲಿ ಸಮಾವೇಶಕ್ಕೆ ಕಾರ್ಯಕರ್ತರು ಬರಲಿದ್ದಾರೆ ಎಂದು ತಿಳಿಸಿದರು.

ವಿರಾಜಪೇಟೆ ಶಾಸಕ ಕೆ.ಜಿ.ಬೋಪಯ್ಯ ಮಾತನಾಡಿ, ಕೊಡಗು ಪೊಲೀಸ್ ವರಿಷ್ಠಾಧಿಕಾರಿ ಕ್ಯಾಪ್ಟನ್ ಅಯ್ಯಪ್ಪ ಉತ್ತಮ ಕೆಲಸ ಮಾಡುತ್ತಿದ್ದಾರೆ. ಅವರನ್ನು ವರ್ಗಾಯಿಸುವ ಉದ್ದೇಶ ಖಂಡಿತ ಇಲ್ಲ. ಅಧಿಕಾರಿಗಳ ವರ್ಗಾವಣೆ ದಂಧೆಯಲ್ಲಿ ಕೊಡಗಿನ ಶಾಸಕರು ಇಲ್ಲ ಎಂದು ಸ್ಪಷ್ಟಪಡಿಸಿದರು. ಮೊಟ್ಟೆ ಎಸೆತದ ಪ್ರಕರಣಕ್ಕೆ ಸಂಬಂಧಿಸಿದಂತೆ ಕೊಡಗಿನ ಪೊಲೀಸರ ಮನಸ್ಥೈರ್ಯ ಕುಗ್ಗಿಸುವ ಕೆಲಸವನ್ನು ಕಾಂಗ್ರೆಸ್ ಮುಖಂಡರು ಮಾಡುತ್ತಿದ್ದಾರೆ ಎಂದು ದೂರಿದ ಅವರು, ಎಸ್‌ಪಿ ಕಚೇರಿ ಮುಂದೆ ಶುಕ್ರವಾರ ನಡೆದ ಕಾಂಗ್ರೆಸ್ ಪ್ರತಿಭಟನೆಯಲ್ಲಿ ಬಿಜೆಪಿ ನಾಯಕರ ವಿರುದ್ಧ ಅಶ್ಲೀಲ ಪದ ಬಳಕೆ ಮಾಡಿರುವುದು ಕಾಂಗ್ರೆಸ್ಸಿಗರ ಸಂಸ್ಕೃತಿ ತೋರಿಸುತ್ತದೆ ಎಂದು ಟೀಕಿಸಿದರು.

33ನೇ ದಂಡಯಾತ್ರೆ: ಆ.26ರಂದು ಕಾಂಗ್ರೆಸ್ ಮಡಿಕೇರಿ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕುವ ಕಾರ್ಯಕ್ರಮ ಹಮ್ಮಿಕೊಂಡಿರುವುದು ಟಿಪ್ಪು ಕೈಗೊಂಡಿದ್ದ ದಂಡಯಾತ್ರೆಗೆ ಸಮಾನವಾಗಿದೆ ಎಂದು ಬೋಪಯ್ಯ ಆಕ್ರೋಶ ವ್ಯಕ್ತಪಡಿಸಿದರು. ಟಿಪ್ಪು 32 ಬಾರಿ ಕೊಡಗಿನ ಮೇಲೆ ಆಕ್ರಮಣ ಮಾಡಿ ಕೊಡಗನ್ನು ನಾಶ ಮಾಡಿದ್ದ. ಈಗ ಟಿಪ್ಪು ಸಂತತಿ ಓಲೈಕೆಗಾಗಿ ಕಾಂಗ್ರೆಸ್ ಕೊಡಗಿಗೆ 33ನೇ ಬಾರಿಗೆ ದಂಡಯಾತ್ರೆ ಬರುತ್ತಿದೆ. ಈ ಬಾರಿ ಕೊಡಗಿನ ಜನ ಟಿಪ್ಪು ಬೆಂಬಲಿಗರಿಗೆ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಬೋಪಯ್ಯ ಹೇಳಿದರು.

ಸಿದ್ದರಾಮಯ್ಯ ಅವರ ರಾಜಕೀಯ ಹಿರಿತನ, ಅವರು ಹೊಂದಿರುವ ಹುದ್ದೆ ಬಗ್ಗೆ ಎಲ್ಲರಿಗೂ ಗೌರವವಿದೆ. ಆದರೆ ಸಿದ್ದರಾಮಯ್ಯ ಅವರ ಪದಬಳಕೆ ಬಗ್ಗೆ ಎಲ್ಲರಿಗೂ ಆಕ್ಷೇಪವಿದೆ. ಹಿಂದೂ ತುಷ್ಟೀಕರಣ ನೀತಿಯನ್ನು ಇನ್ನಾದರೂ ಸಿದ್ದರಾಮಯ್ಯ ಬಿಡಬೇಕು. ಜನರೇ ಇವರಿಗೆ ತಕ್ಕ ಪಾಠ ಕಲಿಸಲಿದ್ದಾರೆ ಎಂದೂ ಬೋಪಯ್ಯ ಎಚ್ಚರಿಸಿದರು.

ಸಿದ್ದರಾಮಯ್ಯ ಕೊಡಗಲ್ಲಿ ಸ್ಪರ್ಧಿಸಲಿ

ತಾಕತ್ತಿದ್ದರೆ ಸಿದ್ದರಾಮಯ್ಯ ಮಡಿಕೇರಿ ಕ್ಷೇತ್ರದಿಂದ ಮುಂದಿನ ಚುನಾವಣೆಗೆ ಸ್ಪರ್ಧಿಸಲಿ ಎಂದು ಮಡಿಕೇರಿ ಕ್ಷೇತ್ರ ಶಾಸಕ ಅಪ್ಪಚ್ಚು ರಂಜನ್ ಸವಾಲು ಹಾಕಿದ್ದಾರೆ. ಸಿದ್ದರಾಮಯ್ಯ ಸ್ಪರ್ಧೆ ಮಾಡಿದ್ದೇ ಆದಲ್ಲಿ ಕೊಡಗಿನಲ್ಲಿ ಖಂಡಿತಾ ಠೇವಣಿ ಕಳೆದುಕೊಳ್ಳುವಂತೆ ಮಾಡುತ್ತೇವೆ. ಆ ಮೂಲಕ ಕೊಡಗಿನಲ್ಲಿ ಬಿಜೆಪಿ ತಾಕತ್ತು ತೋರುತ್ತೇವೆ ಎಂದು ಅಪ್ಪಚ್ಚು ರಂಜನ್ ಸವಾಲು ಹಾಕಿದರು.

ಕೊಡವರು ದನದ ಮಾಂಸ ತಿನ್ನುತ್ತಾರೆ ಎಂದು ಹೇಳಿಕೆ ನೀಡಿದ್ದ ಸಿದ್ದರಾಮಯ್ಯ ವಿರುದ್ಧ ಕೊಡಗಿನ ಮನೆಮನೆಯಲ್ಲಿಯೂ ಆಕ್ರೋಶ ಇದೆ. ಟಿಪ್ಪು ಜಯಂತಿ ಆಚರಣೆಗೆ ಕಾರಣರಾಗಿದ್ದ ಸಿದ್ದರಾಮಯ್ಯ ವಿರುದ್ಧ ಸ್ಥಳೀಯರಲ್ಲಿ ಸಿಟ್ಟಿದೆ. ಹೀಗಾಗಿಯೇ ಮೊನ್ನೆ ಕಪ್ಪುಬಾವುಟ ಹಿಡಿದು ಪ್ರತಿಭಟನೆ ನಡೆಸಲಾಗಿದೆ. ಇದು ಬಿಟ್ಟು ಮೊಟ್ಟೆ ಎಸೆದ ಪ್ರಕರಣದಲ್ಲಿ ಬಿಜೆಪಿ ಕಾರ್ಯಕರ್ತರು ಪಾಲ್ಗೊಂಡಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ತಿಹಾರ್ ಜೈಲಿಗೆ ಹೋಗಿ ಬಂದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಂದ ಕೊಡಗಿನ ಬಿಜೆಪಿ ಶಾಸಕರಿಗೆ ಉಪದೇಶ ಬೇಕಾಗಿಲ್ಲ ಎಂದು ಹೇಳಿದ ಜಿಲ್ಲಾ ಬಿಜೆಪಿ ಅಧ್ಯಕ್ಷ ರಾಬಿನ್ ದೇವಯ್ಯ, ಶುಕ್ರವಾರದ ಸಮಾವೇಶ ಕಾಂಗ್ರೆಸ್ ನಾಯಕರಿಗೆ ಬಿಜೆಪಿಯ ಶಕ್ತಿ ಪ್ರದರ್ಶನ ತೋರುವ ಸಮಾವೇಶವಾಗಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಪ್ರಮುಖರಾದ ಬಿ.ಬಿ.ಭಾರತೀಶ್, ಮಾದಪ್ಪ, ಅರುಣ್ ಭೀಮಯ್ಯ, ಅನಿತಾ ಪೂವಯ್ಯ, ರೂಪಾ ಸತೀಶ್, ರಮಭಾಯಿ ಕಳಗಿ, ಪುಷ್ಪಾ ನಾಗೇಶ್ ಹಾಜರಿದ್ದರು.

ನಕ್ಷತ್ರ ಆಮೆ ಮಾರಾಟ ಯತ್ನ: ಇಬ್ಬರ ಬಂಧನ, ಆಮೆ ವಶ





ವಿರಾಜಪೇಟೆ, ಆ.20– ಹಣದ ಆಸೆಗಾಗಿ ಅಳಿವಿನ ಅಂಚಿನಲ್ಲಿರುವ ಒಂದು ಜೀವಂತ ನಕ್ಷತ್ರ ಆಮೆಯನ್ನು ಗಿರಾಕಿಗಳಿಗೆ ಅಧಿಕ ಬೆಲೆಗೆ ಮಾರಾಟ ಮಾಡಲು ಯತ್ನಿಸುತ್ತಿದ್ದ ಇಬ್ಬರು ಆರೋಪಿಗಳನ್ನು ವಿರಾಜಪೇಟೆ ಸಿಐಡಿ ಪೊಲೀಸರು, ಅರಣ್ಯ ಸಂಚಾರಿ ದಳದ ಸಿಬ್ಬಂದಿಗಳು ಬಂಧಿಸಿದ್ದಾರೆ. ಬೆಂಗಳೂರು ಸಾರೆಪಾಳ್ಯ ನಿವಾಸಿ ಎಂ. ಪಾಂಡಿಯನ್ ಮತ್ತು ಎಸ್.ಶೋಬನ್ ಎಂಬವರೇ ಬಂಧಿತ ಆರೋಪಿಗಳಾಗಿದ್ದಾರೆ.

ಘಟನೆ ಹಿನ್ನೆಲೆ: ಇಬ್ಬರು ವ್ಯಕ್ತಿಗಳು ನಕ್ಷತ್ರ ಆಮೆಯನ್ನು ಅಧಿಕ ಬೆಲೆಗೆ ಮಾರಾಟ ಮಾಡುವ ಸಲುವಾಗಿ ವಿರಾಜಪೇಟೆ ಕಡೆಗೆ ಬರುತ್ತಿರುವ ಬಗ್ಗೆ ವಿರಾಜಪೇಟೆ ಸಿ.ಐ.ಡಿ ಪೊಲೀಸ್ ಅರಣ್ಯ ಸಂಚಾರಿ ದಳಕ್ಕೆ ಖಚಿತ ಮಾಹಿತಿ ಲಭಿಸಿತ್ತು. ಅದರಂತೆ ಇಲ್ಲಿನ ಚಿಕ್ಕಪೇಟೆ ಬಳಿ ದಾಳಿ ನಡೆಸಿ ಇಬ್ಬರು ಆರೋಪಿಗಳನ್ನು ಮಾಲು ಸಹಿತ ಪೊಲೀಸರು ಬಂಧಿಸಿದ್ದಾರೆ. ಬಂಧಿತರ ಬಳಿಯಿದ್ದ ಒಂದು ನಕ್ಷತ್ರ ಆಮೆಯನ್ನು ಕೂಡ ವಶಕ್ಕೆ ಪಡೆಯಲಾಗಿದೆ. ಆರೋಪಿಗಳ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯ್ದೆಯ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಸಿಐಡಿ ಪೊಲೀಸ್ ಅರಣ್ಯ ಘಟಕದ ಪೊಲೀಸ್ ಮಹಾ ನಿರೀಕ್ಷಕ ಕೆ.ವಿ.ಶರತ್ ಚಂದ್ರ ಅವರ ನಿರ್ದೇಶನದಂತೆ ಸಿ.ಐ.ಡಿ ಪೊಲೀಸ್ ಅರಣ್ಯ ಘಟಕದ ಪೊಲೀಸ್ ಅಧೀಕ್ಷಕ ಕೆ.ಬಿ.ವಿಶ್ವನಾಥ್ ಮಾರ್ಗದರ್ಶನದಲ್ಲಿ ಸಿಐಡಿ ಪೊಲೀಸ್ ಅರಣ್ಯ ಸಂಚಾರಿ ದಳದ ಪ್ರಭಾರ ಆರಕ್ಷಕ ಉಪನಿರೀಕ್ಷಕಿ ಸವಿ ಸಿ.ಯು, ಸಿಬ್ಬಂದಿಗಳಾದ ಟಿ.ಪಿ.ಮಂಜುನಾಥ್, ಕೆ.ಎಸ್. ದೇವಯ್ಯ, ಸಿ.ಬಿ.ಬೀನಾ, ಕುಶಾ, ಎಸ್.ಎಂ. ಯೋಗೇಶ್, ಪಿ.ಯು ಮುನೀರ್, ಆರ್.ನಂದಕುಮಾರ್ ಅವರುಗಳು ಕಾರ್ಯಾಚರಣೆ ನಡೆಸಿದ್ದಾರೆ.

ಬಿಜೆಪಿಯಿಂದ ಮೊಟ್ಟೆ ರಾಜಕಾರಣ

ಕೆಪಿಸಿಸಿ ಕಾನೂನು ಘಟಕದ ಅಧ್ಯಕ್ಷ ಎ.ಎಸ್.ಪೊನ್ನಣ್ಣ ಆರೋಪ



ಮಡಿಕೇರಿ,ಆ.20– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾರಿನ ಮೇಲೆ ಮೊಟ್ಟೆ ಎಸೆದ ಪ್ರಕರಣವನ್ನು ಮುಂದಿಟ್ಟುಕೊಂಡು ಬಿಜೆಪಿ ರಾಜಕೀಯ ಲಾಭ ಪಡೆಯುವ ಯತ್ನ ಮಾಡುತ್ತಿದೆ ಎಂದು ಕೆಪಿಸಿಸಿ ಕಾನೂನು ಘಟಕದ ಅಧ್ಯಕ್ಷ ಎ.ಎಸ್.ಪೊನ್ನಣ್ಣ ಆರೋಪಿಸಿದ್ದಾರೆ.

ನಗರದ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಪೊನ್ನಣ್ಣ, ಕಾಂಗ್ರೆಸ್ ಮೇಲೆ ಬಿಜೆಪಿ ಗೂಬೆ ಕೂರಿಸುವ ಕೆಲಸ ಮಾಡುತ್ತಿದೆ. ಜಾತಿ, ಧರ್ಮದ ಹೆಸರಿನಲ್ಲಿ ನಡೆಯುವ ರಾಜಕಾರಣವನ್ನು ಜನರು ಬೆಂಬಲಿಸಬಾರದು ಎಂದು ಮನವಿ ಮಾಡಿದರು. ಜಿಲ್ಲೆಯ ಅನೇಕ ಸಮಸ್ಯೆಗಳಿಗೆ ಇನ್ನೂ ಪರಿಹಾರ ದೊರೆತ್ತಿಲ್ಲ. ಅಭಿವೃದ್ಧಿ ಪರ ಕೆಲಸ ಮಾಡಬೇಕಾದ ಸರಕಾರ ಪ್ರಚೋದನಕಾರಿ ರಾಜಕಾರಣ ಮಾಡುತ್ತಿರುವುದು ಒಳ್ಳೆಯ ಬೆಳವಣಿಗೆಯಲ್ಲ ಎಂದರು. ಆ.26ರಂದು ಕಾಂಗ್ರೆಸ್ ಪ್ರತಿಭಟನೆ ದಿನದಂದು ಬಿಜೆಪಿ ಸಮಾವೇಶಕ್ಕೆ ಕರೆ ನೀಡಿರುವುದು ಹಾಸ್ಯಾಸ್ಪದ. ಇದು ಸಂಘರ್ಷ ಸೃಷ್ಟಿಗೆ ಕಾರಣವಾಗಬಹುದು. ಕೊಡಗಿನ 2 ಶಾಸಕರ ವೈಫಲ್ಯದಿಂದ ಮುಂದಿನ ಚುನಾವಣೆಯಲ್ಲಿ ಬಿಜೆಪಿ ಸೋಲು ಖಚಿತ ಎಂಬ ಆಂತರಿಕ ವರದಿ ಬಿಜೆಪಿ ಹೈಕಮಾಂಡ್‌ಗೆ ತಲುಪಿದೆ. ಇದಕ್ಕಾಗಿ ಈ ರೀತಿಯ ವಾತಾವರಣವನ್ನು ಬಿಜೆಪಿ ಸೃಷ್ಟಿ ಮಾಡುತ್ತಿದೆ ಎಂದು ದೂರಿದರು.

ಬಿಜೆಪಿ ಕಾರ್ಯಕರ್ತ: ಸಿದ್ದರಾಮಯ್ಯ ಅವರ ಮೇಲೆ ಮೊಟ್ಟೆ ಎಸೆದವನು ಬಿಜೆಪಿ ಕಾರ್ಯಕರ್ತನಾಗಿದ್ದು, ಆತನ ತಂದೆ ಸೋಮವಾರಪೇಟೆ ಪಟ್ಟಣ ಪಂಚಾಯ್ತಿ ಮಾಜಿ ಬಿಜೆಪಿ ಬೆಂಬಲಿತ ಸದಸ್ಯರಾಗಿದ್ದರು. ಆತ ಬಂಧನದ ಸಂದರ್ಭ ಬಿಡುಗಡೆ ಮಾಡಿಸಲು ಶಾಸಕರು ಠಾಣೆಗೆ ಯಾಕೆ ಹೋದರು ಎಂದು ಇದೇ ಸಂದರ್ಭ ಪೊನ್ನಣ್ಣ ಪ್ರಶ್ನಿಸಿದರು. ಪ್ರಕರಣದಿಂದ ಪಾರಾಗಲು ಬಿಜೆಪಿ ಕಸರತ್ತು ಮಾಡುತ್ತಿದೆ. ಕಾಂಗ್ರೆಸ್ ಕಾರ್ಯಕರ್ತ ಎಂದು ಬಿಂಬಿಸುವ ಯತ್ನವಾಗುತ್ತಿದೆ. ವಿಚಾರವನ್ನು ದಿಕ್ಕುತಪ್ಪಿಸುವ ಕೆಲಸ ಬಿಜೆಪಿಯಿಂದ ಹೊಸದೇನಲ್ಲ. ಸಿದ್ದರಾಮಯ್ಯ ನಾಯಕತ್ವದಿಂದ ವಿಚಲಿತಗೊಂಡ ಬಿಜೆಪಿ ಇದೀಗ ಸಮಾವೇಶ ನಡೆಸಲು ಮುಂದಾಗಿದೆ ಎಂದರು.

ಪ್ರತಿಭಟನೆಗೆ ಅವಕಾಶ ನೀಡಿ: ಕಾಂಗ್ರೆಸ್ ಪ್ರತಿಭಟನೆಗೆ ಅವಕಾಶ ನೀಡಬೇಕು ಎಂದು ಹೇಳಿದ ಪೊನ್ನಣ್ಣ, ನಿಷೇಧಾಜ್ಞೆ ಜಾರಿಗೊಳಿಸಿದರೆ ನಾವು ಕಾನೂನಿಗೆ ತಲೆಬಾಗುತ್ತೇವೆ. ಒಬ್ಬರಿಗೆ ಅವಕಾಶ ನೀಡಿ, ಮತ್ತೊಂದು ಕಾರ್ಯಕ್ರಮಕ್ಕೆ ನಿರ್ಬಂಧ ಹೇರಿದರೆ ಸರಿಯಲ್ಲ. 2 ಕಾರ್ಯಕ್ರಮಕ್ಕೂ ಸಮಾನ ಅವಕಾಶ ನೀಡಲಿ, ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಆದರೆ, ಸೂಕ್ತ ಭದ್ರತೆ ಒದಗಿಸಬೇಕೆಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ತೀತಿರ ಧರ್ಮಜ ಉತ್ತಪ್ಪ ಸಾಮಾಜಿಕ ಜಾಲತಾಣ ಘಟಕದ ಅಧ್ಯಕ್ಷ ಸೂರಜ್ ಹೊಸೂರು, ಮಡಿಕೇರಿ ನಗರಾಧ್ಯಕ್ಷ ರಾಜೇಶ್ ಯಲ್ಲಪ್ಪ ಹಾಜರಿದ್ದರು.

ಎಸ್ಪಿ ವರ್ಗಾವಣೆಗೆ ಒತ್ತಾಯಿಸಿಲ್ಲ

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎ.ಅಯ್ಯಪ್ಪ ಅವರನ್ನು ವರ್ಗಾವಣೆ ಮಾಡುವಂತೆ ಕಾಂಗ್ರೆಸ್ ಒತ್ತಾಯಿಸಿಲ್ಲ. ಕೊಡಗಿಗೆ ಕೊಡವ ಎಸ್.ಪಿ ಬೇಡ ಎಂದು ಕೆ.ಜಿ. ಬೋಪಯ್ಯ ಅವರೇ ವಿರೋಧಿಸಿದ್ದರು. ಎಸ್.ಪಿ.ಅಯ್ಯಪ್ಪ ಅವರು ಕೊಡಗಿಗೆ ಬರುವುದನ್ನು ತಡೆ ಹಿಡಿಯುವ ಪ್ರಯತ್ನವನ್ನು ಕೆ.ಜಿ. ಬೋಪಯ್ಯ ಮಾಡಿದ್ದರು. ಕೊಡವರು, ಕಾವೇರಿ ಮಾತೆ ಅವಹೇಳನ ವಿಚಾರದಲ್ಲಿ ಬಿಜೆಪಿಗೆ ಎಸ್.ಪಿ. ಅಯ್ಯಪ್ಪ ಅವರ ಮೇಲೆ ಕೋಪವಿದೆ. ಅಧಿಕಾರಿಗಳ ವರ್ಗಾವಣೆ ಮಾಡುವುದು ಸರಕಾರವಾದರೂ ಅದನ್ನು ಶಾಸಕರು ಮಾಡಿಸುತ್ತಾರೆ.

–ಎ.ಎಸ್. ಪೊನ್ನಣ್ಣ, ಕೆಪಿಸಿಸಿ ಮುಖಂಡ.

ವಿದ್ಯಾರ್ಥಿ ನಾಪತ್ತೆ



ಕುಶಾಲನಗರ, ಆ.20– ಸಮೀಪದ ಕೂಡಿಗೆ ಕೃಷಿ ಫಾರಂ ಆವರಣದಲ್ಲಿರುವ ಕೊಡಗು ಸೈನಿಕ ಶಾಲೆಯ ಏಳನೇ ತರಗತಿ ವಿದ್ಯಾರ್ಥಿ ಅಮಿತ್ ಅಯ್ಯಪ್ಪ ಶನಿವಾರ ಕಾಣೆಯಾಗಿದ್ದಾರೆ.

ಸೈನಿಕ ಶಾಲೆಯಲ್ಲಿ ರಾತ್ರಿ ರೂಮ್‌ನಲ್ಲಿದ್ದ ಈ ವಿದ್ಯಾರ್ಥಿ ಬೆಳಗಿನ ಜಾವ ಕಾಣೆಯಾಗಿದ್ದು, ಅಮಿತ್ ಅಯ್ಯಪ್ಪ ಬೆಳಗ್ಗೆ 4.45 ಗಂಟೆಗೆ ಕೂಡಿಗೆ ಸೈನಿಕ ಶಾಲೆಯ ತಡೆಗೋಡೆ ಹಾರಿ ಹೋಗಿರಬಹುದು ಎಂದು ಸಂಶಯ ವ್ಯಕ್ತವಾಗಿದೆ. ಪೋಷಕರು ಕುಶಾಲನಗರ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದು, ವಿದ್ಯಾರ್ಥಿ ಸಿಕ್ಕಿದಲ್ಲಿ ಠಾಣೆಗೆ ಮಾಹಿತಿ ತಿಳಿಸುವಂತೆ ಪಿಎಸ್‌ಐ ಚಂದ್ರಶೇಖರ್ ಮನವಿ ಮಾಡಿದ್ದಾರೆ.

ಮೊಟ್ಟೆ ಎಸೆತ: ಕುಶಾಲನಗರದಲ್ಲಿ ಕಾಂಗ್ರೆಸ್ ಪ್ರತಿಭಟನೆ



ಕುಶಾಲನಗರ, ಆ.20– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕೊಡಗಿಗೆ ಭೇಟಿ ನೀಡಿದ ಸಂದರ್ಭ ಬಿಜೆಪಿಗರು ಅವಹೇಳನಕಾರಿ ಹಾಗೂ ದೌರ್ಜನ್ಯಕಾರಿಯಾಗಿ ನಡೆದುಕೊಂಡು ಗೂಂಡಾ ವರ್ತನೆ ತೋರಿದ್ದಾರೆ ಎಂದು ಆರೋಪಿಸಿ ಕಾಂಗ್ರೆಸ್ ಪಕ್ಷ ಕುಶಾಲನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಿತು.

ಬೈಚನಹಳ್ಳಿ ಮಾರಮ್ಮ ದೇವಾಲಯದಿಂದ ಪ್ರತಿಭಟನಾ ಮೆರವಣಿಗೆ ನಡೆಸಿದ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಬಿಜೆಪಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ರಸ್ತೆಯುದ್ದಕ್ಕೂ ಅಪ್ಪಚ್ಚುರಂಜನ್ ವಿರುದ್ಧ ಧಿಕ್ಕಾರ ಕೂಗಿದ ಪ್ರತಿಭಟನಾಕಾರರು ರಂಜನ್ ಮೊಟ್ಟೆ ಎಂಬ ಘೋಷಣೆಗಳು ಕೇಳಿ ಬಂದವು. ಕುಶಾಲನಗರದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಮಾನವ ಸರಪಳಿ ರಚಿಸಿ ಕೆಲಕಾಲ ವಾಹನ ಸಂಚಾರಕ್ಕೆ ತಡೆಯುಂಟು ಮಾಡಲಾಯಿತು. ಸಿದ್ದರಾಮಯ್ಯ ವಿರುದ್ಧ ನಡೆದ ದೌರ್ಜನ್ಯಕ್ಕೆ ಜಿಲ್ಲೆಯ ಶಾಸಕರು ಕುಮ್ಮಕ್ಕು ನೀಡಿದ್ದಾರೆ. ಇದಕ್ಕೆ ಪೊಲೀಸರು ಸಹಕಾರ ನೀಡಿದ್ದಾರೆ ಎಂದು ಪ್ರತಿಭಟನಾಕಾರರು ಆರೋಪಿಸಿದರು. ಬಳಿಕ ಡಿವೈಎಸ್ಪಿ ಕಚೇರಿಗೆ ತೆರಳಿದ ಸಿದ್ದರಾಮಯ್ಯ ಅವರ ಭೇಟಿ ಸಂದರ್ಭ ಗೂಂಡಾ ವರ್ತನೆ ತೋರಿದ ಎಲ್ಲಾ ಕಿಡಿಗೇಡಿಗಳ ವಿರುದ್ಧ ಕ್ರಮಕೈಗೊಳ್ಳುವಂತೆ ಡಿ.ವೈ.ಎಸ್.ಪಿ. ಗಂಗಾದರಪ್ಪ ಅವರನ್ನು ಪ್ರತಿಭಟನಾಕಾರರು ಆಗ್ರಹಿಸಿದರು.

ಈ ಸಂದರ್ಭ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಧರ್ಮಜ ಉತ್ತಪ್ಪ, ಕಾಂಗ್ರೆಸ್ ಮುಖಂಡ ವಿ.ಪಿ.ಶಶಿಧರ್, ಜಿಪಂ ಮಾಜಿ ಅಧ್ಯಕ್ಷೆ ಕೆ.ಪಿ.ಚಂದ್ರಕಲಾ, ಯುವ ಮುಖಂಡ ಮಂಥರ್ ಗೌಡ ಮಾತನಾಡಿ ಬಿಜೆಪಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಜನರೊಡನೆ ಮಧುರ ಬಾಂಧವ್ಯ ಹೊಂದಿದ್ದ ಸಿ.ಗುರುಸ್ವಾಮಿ

ಪುಣ್ಯಸ್ಮರಣೆಯಲ್ಲಿ ಸುತ್ತೂರು ಶ್ರೀಗಳ ಅಭಿಮತ



ಚಾಮರಾಜನಗರ, ಆ.20–ಮಾಜಿ ಶಾಸಕ ಸಿ.ಗುರುಸ್ವಾಮಿ ಅವರು ಅಧಿಕಾರದಲ್ಲಿದ್ದಾಗಲೂ ಇಲ್ಲದ ಸಂದರ್ಭಗಳಲ್ಲೂ ಕೂಡ ಜನ–ಸಾಮಾನ್ಯರೊಡನೆ ಮಧುರ ಬಾಂಧವ್ಯ ಹೊಂದಿದ್ದರು ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಪ್ರಾಯಪಟ್ಟರು.

ತಾಲೂಕಿನ ಯಾನಗಹಳ್ಳಿ ಗ್ರಾಮದ ಬಳಿಯ ಅಚ್ಚುಪುರ ತೋಟದಲ್ಲಿ ಶನಿವಾರ ನಡೆದ ಮಾಜಿ ಶಾಸಕ ಲಿಂಗೈಕ್ಯ ಸಿ.ಗುರುಸ್ವಾಮಿ ಅವರ ಎರಡನೇ ವರ್ಷದ ಪುಣ್ಯಸ್ಮರಣೆ ಹಾಗೂ ಧಾರ್ಮಿಕ ಸಭೆಯ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಸಿ.ಗುರುಸ್ವಾಮಿ ಅವರು ಶಾಸಕರಾಗಿದ್ದ ವೇಳೆ ಅಹಂ ತೋರಲಿಲ್ಲ. ಸೋತಾಗ ಯಾರ ಮೇಲೂ ಅಸಮಾಧಾನಗೊಳ್ಳಲಿಲ್ಲ. ಅವರು ವಿಶೇಷ ವ್ಯಕ್ತಿತ್ವ ಹೊಂದಿದ್ದರು. ಅವರೊಬ್ಬ ನೇರ ನಡೆಯ, ಸರಳ–ಸಜ್ಜನ ರಾಜಕಾರಣಿ ಎಂದು ಶ್ರೀಗಳು ಮೆಚ್ಚುಗೆ ವ್ಯಕ್ತಪಡಿಸಿದರು.

ಗುರುಸ್ವಾಮಿ ಅವರು ಹಠಕ್ಕೆ ಬಿದ್ದು ರಾಜಕೀಯಕ್ಕೆ ಬಂದವರಲ್ಲ. ಅವರು ವಕೀಲ ವೃತ್ತಿಯಲ್ಲಿದ್ದಾಗ ಸ್ನೇಹಿತರು ಹಾಗೂ ಜನರ ಒತ್ತಾಯದ ಮೇರೆಗೆ ರಾಜಕೀಯ ಪ್ರವೇಶಿದವರು. ಶಾಸಕರಾಗಿ ಜನರ ಸೇವೆ ಮಾಡುವ ಅವಕಾಶ ಅವರಿಗೆ ದೊರೆತದ್ದು ಸುದೈವ. ಗುರುಸ್ವಾಮಿ ಅವರು ಕರ್ನಾಟಕ ಜನತೆಯೊಂದಿಗೆ ಮಾತ್ರವಲ್ಲದೆ, ತಮಿಳು ಭಾಷಿಕರ ಮೇಲೂ ಬಾಂಧವ್ಯ ಹೊಂದಿದ್ದರು ಎಂದರು.

ತುಮಕೂರಿನ ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿ ಮಾತನಾಡಿ, ಗುರುಸ್ವಾಮಿ ಅವರು ತತ್ವಸಹಿತ ರಾಜಕಾರಣಕ್ಕೆ ಹೆಸರಾಗಿದ್ದರು. ವಿನಯತೆಯನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿದ್ದರು ಎಂದರು.

ಮಾಜಿ ಜಿಪಂ ಅಧ್ಯಕ್ಷರೂ ಆದ ಸಿ.ಗುರುಸ್ವಾಮಿ ಪುತ್ರಿ ಜಿ.ನಾಗಶ್ರೀ ಪ್ರತಾಪ್ ಮಾತನಾಡಿ, ನಾನು ನನ್ನ ತಂದೆ ಹಾಕಿಕೊಟ್ಟ ಮಾರ್ಗದಲ್ಲಿ ನಡೆಯುತ್ತಿದ್ದೇನೆ. ಅದರಂತೆ ಅವರ ಹೆಸರಿನಲ್ಲಿ ಸೇವಾ ಪ್ರತಿಷ್ಠಾನ ಸ್ಥಾಪಿಸಿ, ಕಳೆದ ವರ್ಷದಿಂದ ಸೇವಾಕಾರ್ಯಗಳನ್ನು ನಡೆಸಲಾಗುತ್ತಿದೆ ಎಂದಲ್ಲದೆ, ಕೋವಿಡ್‌ನಿಂದ ತಂದೆ–ತಾಯಿ ಕಳೆದುಕೊಂಡಿರುವ ಕೊತ್ತಲವಾಡಿ ಗ್ರಾಮದ 3 ವರ್ಷದ ಹೆಣ್ಣುಮಗುವಿನ ಶೈಕ್ಷಣಿಕ ಸಂಪೂರ್ಣ ವೆಚ್ಚ ಭರಿಸಲು ತೀರ್ಮಾನಿಸಿರುವುದಾಗಿ ಘೋಷಿಸಿದರು.

ಮರಿಯಾಲ ಮಠದ ಶ್ರೀ ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿ ಮಾತನಾಡಿದರು.

ಪಡಗೂರಿನ ಶ್ರೀ ಶಿವಲಿಂಗೇಂದ್ರ ಸ್ವಾಮೀಜಿ, ಮಹದೇಶ್ವರಬೆಟ್ಟದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಅರಕಲವಾಡಿಯ ಶ್ರೀ ಬಸವಣ್ಣ ಸ್ವಾಮೀಜಿ, ಹಂಡರಕಳ್ಳಿಯ ಶ್ರೀ ಪಂಚಾಕ್ಷರಿ ಸ್ವಾಮೀಜಿ, ಸೋಮಹಳ್ಳಿ ಶ್ರೀ ಸಿದ್ದಮಲ್ಲ ಸ್ವಾಮೀಜಿ, ಹರವೆ ಶ್ರೀ ಸರ್ಪಭೂಷಣ ಸ್ವಾಮೀಜಿ, ಚಾ.ನಗರದ ಶ್ರೀ ಚನ್ನಬಸವಸ್ವಾಮೀಜಿ, ದಿ.ಸಿ.ಗುರುಸ್ವಾಮಿ ಅವರ ಪತ್ನಿ ಶೀಲ ಗುರುಸ್ವಾಮಿ, ಪುತ್ರಿ ನವ್ಯಶ್ರೀ, ಅಳಿಯ ಹೆಚ್.ಡಿ.ಪ್ರತಾಪ್, ಚಾಮುಲ್ ನಿರ್ದೇಶಕ ಹೆಚ್.ಎಸ್.ಬಸವರಾಜು, ಮುಖಂಡರಾದ ತಮ್ಮಡಹಳ್ಳಿ ರವಿಶಂಕರ್, ಸಮಿತ್ ಕುಮಾರ್ ಅರಕಲವಾಡಿ ಮಹೇಶ್, ಪ್ರಶಾಂತ್, ದಯಾನಿಧಿ, ಗುರುಸ್ವಾಮಿ, ಲಿಂಗರಾಜು, ವೃಷಭೇಂದ್ರ ಹಿರೇಬೇಗೂರು ಗುರುಸ್ವಾಮಿ, ಅಶೋಕ್, ಪ್ರಸಾದ್, ಪಂಜು, ಅಶೋಕ್, ನಾಗಪ್ಪ ಆನಂದ್, ಮಾದಪ್ಪ ಇತರರು ಉಪಸ್ಥಿತರಿದ್ದರು.

ಪಕ್ಷಾತೀತ, ಜಾತ್ಯತೀತ ಕಾರ್ಯಕ್ರಮ...

ಇಂದಿನಲ್ಲಿ ನಡೆದ ಸಿ.ಗುರುಸ್ವಾಮಿ ಅವರ 2ನೇ ವರ್ಷದ ಪುಣ್ಯಸ್ಮರಣೆ, ಧಾರ್ಮಿಕ ಸಭೆ ಪಕ್ಷಾತೀತ ಹಾಗೂ ಜಾತ್ಯತೀತವಾಗಿ ನಡೆಯಿತು. ಗುರುಸ್ವಾಮಿ ಅವರು ಬಿಜೆಪಿ ಪಕ್ಷದಲ್ಲಿದ್ದವರು. ಅವರ ಪುತ್ರಿ ಜಿ.ನಾಗಶ್ರೀ ಪ್ರತಾಪ್ ಪ್ರಸ್ತುತ ಬಿಜೆಪಿಯಲ್ಲಿದ್ದು ಸಕ್ರಿಯ ಕಾರ್ಯಕರ್ತರಾಗಿದ್ದಾರೆ. ಇಂದಿನ ಸಮಾರಂಭದಲ್ಲಿ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಸೇರಿದಂತೆ ಎಲ್ಲಾ ಪಕ್ಷದ ಕಾರ್ಯಕರ್ತರು, ಮುಖಂಡರು ಹಾಗೂ ಎಲ್ಲಾ ಸಮಾಜ ಜನರು ಭಾಗವಹಿಸಿದ್ದು ವಿಶೇಷವಾಗಿತ್ತು. ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ, ಸಂಸದ ವಿ.ಶ್ರೀನಿವಾಸ ಪ್ರಸಾದ್, ಶಾಸಕರಾದ ಎನ್.ಮಹೇಶ್, ಸಿ.ಎಸ್.ನಿರಂಜನಕುಮಾರ್, ಕಾಂಗ್ರೆಸ್ ಮುಖಂಡ ಗಣೇಶ್ ಪ್ರಸಾದ್ ಸೇರಿದಂತೆ ಇನ್ನಿತರರ ಗಣ್ಯರು ಭೇಟಿ ನೀಡಿ ಸಿ.ಗುರುಸ್ವಾಮಿ ಅವರ ಸಮಾಧಿಗೆ ನಮಿಸಿದರು.

ಅಭಿವೃದ್ಧಿಯ ಹರಿಕಾರ ದೇವರಾಜ ಅರಸು

ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಅಭಿಮತ



ಚಾ.ನಗರದ ದೀನಬಂಧು ಸಂಸ್ಥೆಯ ಸಂಸ್ಥಾಪಕ ಪ್ರೊ. ಜಿ.ಎಸ್.ಜಯದೇವ ಅವರಿಗೆ ಡಿ.ದೇವರಾಜ ಅರಸು ಜಿಲ್ಲಾ ಮಟ್ಟದ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಚಾಮರಾಜನಗರ, ಆ.20–ತಮ್ಮ ಅಧಿಕಾರವಧಿಯ ಆಡಳಿತದಲ್ಲಿ ಜನಪರ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ದಿವಂಗತ ಡಿ.ದೇವರಾಜ ಅರಸು ಅವರು ಅಭಿವೃದ್ಧಿ ಪರ ಕಾಳಜಿ ಹೊಂದಿದ್ದರು ಎಂದು ವಸತಿ, ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ವಿ.ಸೋಮಣ್ಣ ಅಭಿಪ್ರಾಯಪಟ್ಟರು.

ನಗರದ ವರನಟ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಸಾಮಾಜಿಕ ಕ್ರಾಂತಿಯ ಹರಿಕಾರ, ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ ಅರಸು ಅವರ 107ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದ ಅವರು, ಅರಸು ಅವರು ತಳಸಮುದಾಯದವರನ್ನು ಗುರುತಿಸಿ ಹತ್ತು–ಹಲವು ಸೌಲಭ್ಯಗಳನ್ನು ಕಲ್ಪಿಸುವುದರ ಜೊತೆಗೆ ರಾಜಕೀಯ ಪ್ರಾತಿನಿಧ್ಯ ನೀಡಿ ಸಮಾಜದ ಮುಖ್ಯವಾಹಿನಿಗೆ ತರಲು ಪಣತೊಟ್ಟಿದ್ದರು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಅತ್ಯಂತ ಅಪರೂಪದ ರಾಜಕಾರಣಿಯಾಗಿದ್ದ ಅರಸು ಅವರು ಅನೇಕ ಖಾತೆಗಳನ್ನು ಸಮರ್ಪಕವಾಗಿ ನಿಭಾಯಿಸಿದ್ದರು. 2 ಬಾರಿ ಮುಖ್ಯಮಂತ್ರಿಯಾಗಿ ಜನಾನುರಾಗಿ ಎನಿಸಿದ್ದರು. ಹಿಂದುಳಿದವರ ಅಭಿವೃದ್ಧಿಗಾಗಿ ಆಯೋಗ ಹುಟ್ಟುಹಾಕಿದರು. ಸಾರ್ವಜನಿಕ ಬದುಕಿನಲ್ಲಿ ಕೆಲಸ ಮಾಡುವವರು ನಿಸ್ವಾರ್ಥದಿಂದ, ಪ್ರಾಮಾಣಿಕತೆ, ಆತ್ಮಸಾಕ್ಷಿಯಿಂದ ಸೇವೆ ಸಲ್ಲಿಸಬೇಕು. ಆಗ ಮಾತ್ರ ಅರಸುರವರಿಗೆ ಗೌರವ ಸಲ್ಲಿಸಿದಂತಾಗಲಿದೆ ಎಂದರು. ಇದೇ ವೇಳೆ ನಗರದ ದೀನಬಂಧು ಸಂಸ್ಥೆಯ ಸಂಸ್ಥಾಪಕ ಪ್ರೊ ಜಿ.ಎಸ್.ಜಯದೇವ ಅವರಿಗೆ ದಿವಂಗತ ಡಿ.ದೇವರಾಜ ಅರಸು ಅವರ ಜಿಲ್ಲಾ ಮಟ್ಟದ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದ ಅಂಗವಾಗಿ ಚಾಮರಾಜೇಶ್ವರ ದೇವಾಲಯದ ಬಳಿ ವಿವಿಧ ಜಾನಪದ ಕಲಾತಂಡಗಳೊಂದಿಗೆ ಡಿ.ದೇವರಾಜ ಅರಸು ಅವರ ಭಾವಚಿತ್ರದ ಮೆರವಣಿಗೆ ಮಾಡಲಾಯಿತು.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ.ಪಿ.ದೇವರಾಜ ಪ್ರಧಾನ ಭಾಷಣ ಮಾಡಿದರು. ಶಾಸಕರಾದ ಎನ್. ಮಹೇಶ್, ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕೆ ನಿಗಮ ನಿಯಮಿತದ ಅಧ್ಯಕ್ಷರು ಹಾಗೂ ಶಾಸಕರಾದ ಸಿ.ಎಸ್.ನಿರಂಜನ ಕುಮಾರ್, ನಗರಸಭೆ ಅಧ್ಯಕ್ಷೆ ಸಿ.ಎಂ.ಆಶಾ, ಡಿಸಿ ಚಾರುಲತಾ ಸೋಮಲ್, ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಎಸಿ ಗೀತಹುಡೇದ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಡಾ.ಆರ್.ಸುಬ್ರಾನಾಯಕ್ ಇತರರು ಕಾರ್ಯಕ್ರಮದಲ್ಲಿದ್ದರು.

ಸಾವರ್ಕರ್ ಅಪ್ರತಿಮ ಹೋರಾಟಗಾರ

ಚಾಮರಾಜನಗರ: ವೀರ ಸಾವರ್ಕರ್ ಅಪ್ರತಿಮ ಹೋರಾಟಗಾರ ಎಂದು ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಎಂದು ಅಭಿಪ್ರಾಯಪಟ್ಟರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಾವರ್ಕರ್‌ಗೂ ಟಿಪ್ಪುಗೂ ಹೋಲಿಕೆ ಸಲ್ಲದು. ಸಾವರ್ಕರ್, ಬ್ರಿಟಿಷರು ನೀಡಿದ ಶಿಕ್ಷೆ ತಡೆದುಕೊಂಡು ಹೋರಾಟ ನಡೆಸಿದ್ದರು. ಸಿದ್ದರಾಮಯ್ಯ ಅವರನ್ನು ಮೇಧಾವಿ, ಪ್ರಜ್ಞಾವಂತ ಎಂದು ತಿಳಿದುಕೊಂಡಿದ್ದೆವು. ಆದರೆ ವೀರ ಸಾವರ್ಕರ್ ಬಗ್ಗೆ ಅವರು ಲಘುವಾಗಿ ಮಾತನಾಡುವುದು ಎಷ್ಟು ಸರಿ ಎಂದು ಸಿದ್ದರಾಮಯ್ಯ ಅವರು ಸಾವರ್ಕರ್ ಕುರಿತ ಹೇಳಿಕೆಗಳಿಗೆ ಖಾರವಾಗಿ ಪ್ರತಿಕ್ರಿಯಿಸಿದರು.

ಎಲ್ಲರೂ ಇಂದು ಡಿ.ದೇವರಾಜ ಅರಸು ಅವರ ಬಗ್ಗೆ ಹೆಚ್ಚು ಮಾತನಾಡಬೇಕಾಗಿತ್ತು. ಆದರೆ ಸಣ್ಣ ಮೊಟ್ಟೆ ತುಂಬ ಕೆಲಸ ಮಾಡುತ್ತಿದೆ. ಸಿದ್ದರಾಮಯ್ಯ ಅವರ ಕಾರಿನ ಮೇಲೆ ಮೊಟ್ಟೆ ಎಸೆತವನ್ನು ನಾವೆಲ್ಲ ಖಂಡಿಸಿದ್ದೇವೆ. ಕಾನೂನಾತ್ಮಕ ಕ್ರಮ ಕೈಗೊಂಡಿದ್ದೇವೆ. ಆದರೆ ಬೇಕು ಅಂತಲೇ ಮೊಟ್ಟೆ ಎಸೆತ ಘಟನೆಯನ್ನು ದೊಡ್ಡದು ಮಾಡೋದು ಎಷ್ಟು ಸರಿ? ಮೊಸರಲ್ಲಿ ಕಲ್ಲು ಹುಡುಕುವ ಕೆಲಸ ಬೇಡ ಎಂದರು. ಧರ್ಮದ ವಿಚಾರಕ್ಕೆ ಕೈ ಹಾಕಲ್ಲ ಎಂಬ ಸಿದ್ದರಾಮಯ್ಯ ಅವರ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಸೋಮಣ್ಣ, ಸಿದ್ದರಾಮಯ್ಯ ಅವರಿಗೆ ಒಳ್ಳೇ ಬುದ್ಧಿ ಬಂದಿದೆ. ಅವರಿಗೆ ದೇವರು ಒಳ್ಳೆಯದು ಮಾಡಲಿ... ಅವರು ಹೀಗೆ ಮುಂದುವರೆಯಲಿ... ಎಂದು ಸಚಿವರು ಹೇಳಿದರು.

ಸಿದ್ದರಾಮಯ್ಯ ಕಾರಿನ ಮೇಲೆ ಮೊಟ್ಟೆ ಎಸೆತ ಗುಂಡ್ಲುಪೇಟೆಯಲ್ಲಿ ಕಾಂಗ್ರೆಸ್ ಪ್ರತಿಭಟನೆ



ಗುಂಡ್ಲುಪೇಟೆ, ಆ.20–ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾರಿನ ಮೇಲೆ ಮೊಟ್ಟೆ ಎಸೆದ ಪ್ರಕರಣ ವಿರೋಧಿಸಿ ಕಾಂಗ್ರೆಸ್ ಕಾರ್ಯಕರ್ತರು ತಾಲೂಕು ಕಚೇರಿ ಎದುರು ಶನಿವಾರ ಪ್ರತಿಭಟಿಸಿದರು.

ಕಾಂಗ್ರೆಸ್ ಕಚೇರಿಯಿಂದ ಕಾಲ್ನಡಿಗೆಯಲ್ಲಿ ಮುಖಂಡ ಹೆಚ್.ಎಂ.ಗಣೇಶ್ ಪ್ರಸಾದ್ ನೇತೃತ್ವದಲ್ಲಿ ಮೆರವಣಿಗೆ ಸಾಗಿದ ಕಾರ್ಯಕರ್ತರು ಮತ್ತು ಪದಾಧಿಕಾರಿಗಳು ಬಿಜೆಪಿ ಕಾರ್ಯಕರ್ತರ ನಡೆ ವಿರೋಧಿಸಿ ಧಿಕ್ಕಾರ ಕೂಗಿದರು. ನಂತರ ತಾಲೂಕು ಕಚೇರಿ ಎದುರು ಸಮಾವೇಶಗೊಂಡು ಪ್ರತಿಭಟಿಸಿದರು.

ಮುಖಂಡ ಹೆಚ್.ಎಂ.ಗಣೇಶ್‌ಪ್ರಸಾದ್ ಮಾತನಾಡಿ, ಸಿದ್ದರಾಮಯ್ಯ ಅವರ ಹುಟ್ಟು ಹಬ್ಬಕ್ಕೆ ಸೇರಿದ್ದ ಜನಸಾಗರ ನೋಡಿ ಭೀತಿ ಗೊಳಗಾದ ಬಿಜೆಪಿ ತನ್ನ ಕಾರ್ಯಕರ್ತರ ಮೂಲಕ ಅವರ ಕಾರಿನ ಮೇಲೆ ಮೊಟ್ಟೆ ಎಸೆದು ಕೀಳು ಪ್ರವೃತ್ತಿ ಪ್ರದರ್ಶಿಸಿದೆ. ಇದನ್ನು ಖಂಡಿಸಿ ಕಾಂಗ್ರೆಸ್ ರಾಜ್ಯದಾದ್ಯಂತ ಸಾಂಕೇತಿಕ ಪ್ರತಿಭಟನೆ ನಡೆಸಿದ್ದು, ಇದೇ 26ರಂದು ಮಡಿಕೇರಿಯಲ್ಲಿಯೇ ತಕ್ಕ ಉತ್ತರ ನೀಡಲಾಗುವುದು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಚಾಮುಲ್ ನಿರ್ದೇಶಕ ಹೆಚ್.ಎಸ್.ನಂಜುಂಡಪ್ರಸಾದ್, ಕಾಡಾ ಮಾಜಿ ಅಧ್ಯಕ್ಷ ಹೆಚ್.ಎಸ್. ನಂಜಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಬಿ.ಎಂ.ಮುನಿರಾಜು, ರಾಜಶೇಖರ್, ಮುಖಂಡರಾದ ಕೆ.ಎಸ್. ಮಹೇಶ್, ಅಣ್ಣಯ್ಯಸ್ವಾಮಿ, ಲಿಂಗರಾಜು, ಕಾರ್ಗಳ್ಳಿ ಸುರೇಶ್, ಎಸ್.ಶಿವನಾಗಪ್ಪ, ಕುಮಾರ್ ಸೇರಿದಂತೆ ವಿವಿಧ ಘಟಕಗಳ ಪದಾಧಿಕಾರಿಗಳು ಮತ್ತು ಕಾರ್ಯಕರ್ತರಿದ್ದರು.

ಹರ್ಷಿತಾ ನಿಧನ



ಬೇಗೂರು, ಆ.20–ಗುಂಡ್ಲುಪೇಟೆ ತಾಲೂಕಿನ ಕೋಟೆಕೆರೆ ಗ್ರಾಮದ ನಿವಾಸಿ ಸಿದ್ದರಾಜಶೆಟ್ಟಿ ಪುತ್ರಿ ಹರ್ಷಿತಾ (12) ಹೃದಯಾಘಾತದಿಂದ ಶನಿವಾರ ನಿಧನರಾಗಿದ್ದಾರೆ. ಕಬ್ಬಹಳ್ಳಿ ಗ್ರಾಮದ ಅಜ್ಜಿ ಮನೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ಬಾಲಕಿಗೆ 3–4 ದಿನಗಳಿಂದ ಅನಾರೋಗ್ಯ ಕಾಣಿಸಿಕೊಂಡಿದ್ದು, ಕಬ್ಬಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಜಿಲ್ಲಾಸ್ಪತ್ರೆಗೆ ದಾಖಲಿಸುವ ಸಂದರ್ಭ ಆಕೆ ಹೃದಯಾಘಾತದಿಂದ ನಿಧನರಾಗಿರುವುದಾಗಿ ಕುಟುಂಬ ಮೂಲಗಳು ತಿಳಿಸಿದ್ದು, ಅಂತ್ಯಕ್ರಿಯೆ ಕಬ್ಬಳ್ಳಿ ಗ್ರಾಮದಲ್ಲಿ ನೆರವೇರಿತು.

ಮಹದೇಶ್ವರಬೆಟ್ಟದಲ್ಲಿ ವಿದ್ಯುತ್ ಅದಾಲತ್; ಅಹವಾಲು ಆಲಿಕೆ



ಹನೂರು, ಆ.20–ತಾಲೂಕಿನ ಮಲೆಮಹದೇಶ್ವರಬೆಟ್ಟದ ಮಹದೇಶ್ವರ ಕಲ್ಯಾಣ ಮಂಟಪದಲ್ಲಿ ಶನಿವಾರ ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಜಯವಿಭವಸ್ವಾಮಿ ಅಧ್ಯಕ್ಷತೆಯಲ್ಲಿ ನಡೆದ ವಿದ್ಯುತ್ ಅದಾಲತ್‌ನಲ್ಲಿ ಸಾರ್ವಜನಿಕರ ಅಹವಾಲು ಆಲಿಸಲಾಯಿತು.

ತುಳಸಿಕೆರೆ ಗ್ರಾಮಸ್ಥರು ಮಾತನಾಡಿ, ನಮ್ಮ ಭಾಗಕ್ಕೆ ವಿದ್ಯುತ್ ಸಂಪರ್ಕವಿಲ್ಲದೆ ತೊಂದರೆ ಅನುಭವಿಸುವಂತಾಗಿದೆ. ಈ ಭಾಗದ ಹಲವು ಗ್ರಾಮಗಳಿಗೆ ವಿದ್ಯುತ್ ಸೌಲಭ್ಯವೇ ಇಲ್ಲದಂತಾಗಿದ್ದು ಕೂಡಲೇ ಸಂಪರ್ಕ ಕಲ್ಪಿಸಿಕೊಡಬೇಕು ಎಂದು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ವ್ಯವಸ್ಥಾಪಕ ನಿರ್ದೇಶಕರು, ಇತ್ತೀಚೆಗೆ ಅರಣ್ಯ ಇಲಾಖೆ ಸಚಿವರು ಭೇಟಿ ನೀಡಿದ್ದ ವೇಳೆ ಈ ಸಮಸ್ಯೆ ಬಗ್ಗೆ ಗಮನ ಸೆಳೆದಿದ್ದು, ಅರಣ್ಯ ಇಲಾಖೆಯವರು ವಿದ್ಯುತ್ ಸಂಪರ್ಕ ಕಲ್ಪಿಸಲು ಅವಕಾಶ ನೀಡುವುದಾಗಿ ಭರವಸೆ ನೀಡಿದ್ದಾರೆ. ಕೂಡಲೇ ಮಾದಪ್ಪನ ತಪ್ಪಲಿನಲ್ಲಿರುವ ಏಳೆಂಟು ಹಳ್ಳಿಗಳಿಗೆ ಬೆಳಕು ಯೋಜನೆಯಡಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು ಎಂದರು.

ಕೆಲವೆಡೆ ಲೈನ್ ಕಂಬಗಳು ಭಾಗಿರುವುದು, ವಿದ್ಯುತ್ ವೈರ್‌ಗಳು ನೆಲಕ್ಕೆ ತಾಗುತ್ತಿರುವುದು, ಟ್ರಾನ್ಸ್‌ಫಾರ್ಮರ್ ಸಮಸ್ಯೆಗಳು ಸೇರಿದಂತೆ ಸುಮಾರು 12ರಿಂದ 14 ಸಮಸ್ಯೆಗಳ ಬಗ್ಗೆ ವಿವಿಧ ಗ್ರಾಮಸ್ಥರು ತಿಳಿಸಿದ್ದು, ಎರಡ್ಮೂರು ದಿನಗಳಲ್ಲಿ ಬಗೆಹರಿಸಲು ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗುವುದು ಎಂದರು. ಈ ಸಂದರ್ಭದಲ್ಲಿ ಸೆಸ್ಕಾಂ ಎಇಇ ಶಂಕರ್, ಕೌದಳ್ಳಿ ವಿಭಾಗದ ಜೆಇ ಮಹೇಶ್, ಪ್ರಾಧಿಕಾರದ ಉಪ ಕಾರ್ಯದರ್ಶಿ ಬಸವರಾಜು ಹಾಗೂ ಗ್ರಾಮಸ್ಥರಿದ್ದರು.

ನಕಲಿ ದಾಖಲೆಗಳ ಸಲ್ಲಿಸಿ ಸರ್ಕಾರಿ ಹುದ್ದೆ ಪಡೆದ ಆರೋಪ: ಮೈಸೂರು ಪಾಲಿಕೆ ಉಪ ಆಯುಕ್ತ ಮಹೇಶ್ ವಿರುದ್ಧ ಪ್ರಕರಣ ದಾಖಲು

ಕೋರ್ಟ್ ಆದೇಶದಂತೆ ಕೆ.ಆರ್.ಠಾಣೆಯಲ್ಲಿ ಕೇಸ್

ಮೈಸೂರು, ಆ.20–ನಕಲಿ ದಾಖಲೆಗಳನ್ನು ಸಲ್ಲಿಸಿ ಸರ್ಕಾರಿ ಹುದ್ದೆ ಗಿಟ್ಟಿಸಿಕೊಂಡಿರುವ ಆರೋಪದ ಮೇರೆಗೆ ಮೈಸೂರು ನಗರ ಪಾಲಿಕೆಯ ಉಪ ಆಯುಕ್ತ ಜೆ.ಮಹೇಶ್ ವಿರುದ್ಧ ನ್ಯಾಯಾಲಯದ ಆದೇಶದ ಮೇರೆಗೆ ಕೆ.ಆರ್.ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಜಿಲ್ಲಾ ಕಾರ್ಯದರ್ಶಿ ಆರ್.ನಾಗರಾಜು ದೂರು ಸಲ್ಲಿಸಿದ್ದು, ಈ ಬಗ್ಗೆ ಅವರ ವಕೀಲ ಬಿ.ರವಿಕುಮಾರ್ ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ, ವಿವರ ನೀಡಿದ್ದರು.

ವಿವರ: ಮೈಸೂರು ನಗರ ಪಾಲಿಕೆಯ ಉಪ ಅಯುಕ್ತರಾಗಿ (ಅಭಿವೃದ್ಧಿ) ಕರ್ತವ್ಯ ನಿರ್ವಹಿಸುತ್ತಿರುವ ಜೆ.ಮಹೇಶ್ ಪಾಲಿಕೆಯ ವಿದ್ಯುತ್ ಚಿತಾಗಾರದ ಚಾಲಕನಾಗಿ ಕೆಲಸಕ್ಕೆ ಸೇರಿದ್ದು, ನಂತರ ನಕಲಿ ದಾಖಲೆಗಳನ್ನು ಸಲ್ಲಿಸಿ ಇಂಜಿನಿಯರ್ ಹುದ್ದೆಗೆ ಭಡ್ತಿ ಹೊಂದಿ ಹಾಲಿ ಉಪ ಆಯುಕ್ತರಾಗಿದ್ದಾರೆ. ನಕಲಿ ದಾಖಲೆಗಳನ್ನು ಸಲ್ಲಿಸಿದ್ದರೂ ಮಹೇಶ್ ಅವರು, ತಾನು ಮಾಜಿ ಪ್ರಧಾನಿಯ ಸಂಬಂಧಿಕನೆಂದು ಹೇಳಿಕೊಂಡು ರಾಜಕೀಯ ಪ್ರಭಾವ ಬೀರಿ ಸೇವೆಯಲ್ಲಿ ಮುಂದುವರೆದಿದ್ದಾರೆ ಎಂದು ತಿಳಿಸಲಾಗಿದೆ.

ಪಾಲಿಕೆಗೆ ಮಹೇಶ್ ಸಲ್ಲಿಸಿರುವ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ ಪ್ರಕಾರ ಅವರು ಹಿಂದಿ, ವಿಜ್ಞಾನ ಮತ್ತು ಸೋಷಿಯಲ್ ಸ್ಟಡೀಸ್ ವಿಷಯಗಳಲ್ಲಿ ಅನುತ್ತೀರ್ಣ ರಾಗಿದ್ದರೂ ಕೂಡ ಅವರು ಎಸ್‌ಎಸ್‌ಎಲ್‌ಸಿ ತೇರ್ಗಡೆ ಹೊಂದಿರುವುದಾಗಿ ನಮೂದಿಸಿದ್ದು, ಈ ಅಂಕಪಟ್ಟಿ ನಕಲಿ ಎಂಬುದಕ್ಕೆ ಸಾಕ್ಷಿಯಾಗಿದೆ ಎಂದು ನಾಗರಾಜ್ ತಮ್ಮ ದೂರಿನಲ್ಲಿ ತಿಳಿಸಿದ್ದಾರೆ. ಉದ್ಯೋಗ ಮತ್ತು ತರಬೇತಿ ಇಲಾಖೆಯಿಂದ ನೀಡಲಾಗಿದೆ ಎನ್ನಲಾದ ಎರಡು ಅಂಕಪಟ್ಟಿಗಳಲ್ಲಿ ರೋಲ್ ನಂಬರ್ ವ್ಯತ್ಯಾಸವಾಗಿದ್ದು, ತರಬೇತಿ ಪಡೆದ ಅವಧಿಯ ಕಾಲ ಖಾಲಿಯಾಗಿರುತ್ತದೆ. ಮಹೇಶ್ ಅವರು ಮುಂಬೈಗೆ ಹೋಗಿ ಅಲ್ಲಿನ ಪ್ರತಿಷ್ಠಿತ ಇಂಜಿನಿಯರಿಂಗ್ ಸಂಸ್ಥೆಯಾದ ಇನ್‌ಸ್ಟಿಟ್ಯೂಟ್ ಆಫ್ ಮೆಕ್ಯಾನಿಕಲ್ ಇಂಜಿನಿಯರ್ಸ್ (ಇಂಡಿಯಾ) ಸಂಸ್ಥೆಯಲ್ಲಿ ಡಿಪ್ಲೋಮಾ ಇನ್ ಇಂಜಿನಿಯರಿಂಗ್ ತೇರ್ಗಡೆ ಹೊಂದಿರುವುದಾಗಿ 2005ರ ಸೆ.16ರ ದಿನಾಂಕವಿರುವ ಅಂಕಪಟ್ಟಿಯನ್ನು ಸಲ್ಲಿಸಿದ್ದಾರೆ. ಈ ಅಂಕಪಟ್ಟಿಯಲ್ಲಿ ಅವರು 2005ರ ಜೂನ್ ತಿಂಗಳಿನಲ್ಲಿ ಪರೀಕ್ಷೆ ಬರೆದಿದ್ದರು ಎಂದು ನಮೂದಿಸಲಾಗಿದೆ. ಆದರೆ ಈ ಸಂಸ್ಥೆಯನ್ನು 2001ರ ಮೇ 23ರಂದು ಭಾರತ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಯ ಅಭಿವೃದ್ಧಿ ಇಲಾಖೆ ಅಮಾನತುಪಡಿಸಿದೆ. ಹೀಗಾಗಿ ಇದೂ ಕೂಡ ನಕಲಿ ಅಂಕಪಟ್ಟಿ ಎಂದು ದೂರಿನಲ್ಲಿ ತಿಳಿಸಿರುವ ನಾಗರಾಜ್, ಸಂಬಂಧಿಸಿದ ದಾಖಲೆಗಳನ್ನು ಲಗತ್ತಿಸಿದ್ದರು.

ನಾಗರಾಜ್ ಸಲ್ಲಿಸಿದ ಅರ್ಜಿಯನ್ನು ವಿಚಾರಣೆಗೆ ಅಂಗೀಕರಿಸಿದ ಮೈಸೂರು ನ್ಯಾಯಾಲಯ ಮಹೇಶ್ ವಿರುದ್ಧ ಭಾರತೀಯ ದಂಡ ಸಂಹಿತೆ 409, 417, 419, 420, 463, 464, 465, 466, 468, 470, 471, 474ರಡಿ ಪ್ರಕರಣ ದಾಖಲಿಸಿ ತನಿಖೆ ನಡೆಸುವಂತೆ ನೀಡಿದ ಆದೇಶದನ್ವಯ ಕೆ.ಆರ್.ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಒಂದನೇ ಪುಟದಿಂದ

ಸೆಪ್ಟೆಂಬರ್‌ನಲ್ಲಿ ರಾಜ್ಯದಲ್ಲಿ ಮೂರು ರಥಯಾತ್ರೆ

ಗಣೇಶ ಹಬ್ಬ ಮುಗಿಯುತ್ತಿದ್ದಂತೆ ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಹಾಗೂ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅವರ ಪ್ರತ್ಯೇಕ ಸಾರಥ್ಯದಲ್ಲಿ ರಾಜ್ಯದ 224 ಕ್ಷೇತ್ರಗಳಲ್ಲಿ ಚುನಾವಣಾ ಪ್ರಚಾರ ನಡೆಸಲಿದ್ದಾರೆ. ಈ ಮೊದಲು ಕಟೀಲ್ ಮತ್ತು ಬೊಮ್ಮಾಯಿ ಅವರ ಸಾರಥ್ಯದಲ್ಲಿ ಪ್ರವಾಸ ಕೈಗೊಳ್ಳುವ ತೀರ್ಮಾನಕ್ಕೆ ಬರಲಾಗಿತ್ತು. ಅದನ್ನು ಇದೀಗ ಬದಲಾವಣೆ ಮಾಡಿ ಯಡಿಯೂರಪ್ಪ ಮಾರ್ಗದರ್ಶನದಂತೆ ರಥಯಾತ್ರೆ ನಡೆಯಲಿದೆ. ಇದೇ ಸಂದರ್ಭದಲ್ಲಿ ರಾಜ್ಯದ 7 ಕೇಂದ್ರಗಳಲ್ಲಿ ಬಿಜೆಪಿ ಆಡಳಿತಕ್ಕೆ 3 ವರ್ಷ ತುಂಬಿರುವ ಹಿನ್ನೆಲೆಯಲ್ಲಿ ಜನೋತ್ಸವದ ಬೃಹತ್ ಸಮಾವೇಶಗಳು ನಡೆಯಲಿವೆ.

ಪುನೀತ್ ರಾಜ್‌ಕುಮಾರ್

ಎಲ್ಲರನ್ನು ಸೆಳೆಯುತ್ತದೆ. ನವರಾತ್ರಿಯ 9 ದಿನಗಳು ಮೈಸೂರಿನ ಯಾವ ದಿಕ್ಕಿನಲ್ಲಿ ನೋಡಿದ್ದರು ವಿಶೇಷ ಕಾರ್ಯಕ್ರಮಗಳು ಬೆಳಗಿನಿಂದ ರಾತ್ರಿವರೆಗೂ ನಡೆಯುತ್ತವೆ.

ಕುಸ್ತಿ ಪ್ರೇಮಿಗಳಿಗಾಗಿ ಕುಸ್ತಿ ಪಂದ್ಯಾವಳಿಗಳು, ಮಕ್ಕಳ ದಸರಾ, ಮಹಿಳಾ ದಸರಾ, ಆಹಾರ ಮೇಳ, ವಸ್ತು ಪ್ರದರ್ಶನ, ಅರಮನೆ ಆವರಣದಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳು, ವಿವಿಧ ಶಾಲಾ–ಕಾಲೇಜು ವಿದ್ಯಾರ್ಥಿಗಳ ಪ್ರತಿಭೆ ಪ್ರದರ್ಶನಕ್ಕಾಗಿ ಯುವ ಸಂಭ್ರಮ ಒಂದು ಕಡೆ ನಡೆದರೆ, ಮತ್ತೊಂದೆಡೆ ಯುವ ಸಮೂಹ ಕುಣಿದು ಕುಪ್ಪಳಿಸಲು ಯುವ ಸಮೂಹದ ಮೆಗಾ ಮನರಂಜನೆ ಯುವ ದಸರಾ ಸೇರಿ ಅನೇಕ ಕಾರ್ಯಕ್ರಮಗಳು ಮೈಸೂರಿಗರನ್ನು ಹಾಗೂ ವಿಶ್ವದ ಮೂಲೆ ಮೂಲೆಯಿಂದ ಬರುವ ಪ್ರವಾಸಿಗರನ್ನು ಆಕರ್ಷಿಸುತ್ತದೆ. ಪ್ರತಿ ವರ್ಷ ತೋಟಗಾರಿಕೆ ಇಲಾಖೆ ವತಿಯಿಂದ ಆಯೋಜಿಸುವ ಫಲಪುಷ್ಪ ಪ್ರದರ್ಶನವನ್ನು ವೀಕ್ಷಿಸಲು ಪ್ರವಾಸಿಗರ ದಂಡೇ ಆಗಮಿಸುತ್ತದೆ. ಈ ಹಿನ್ನೆಲೆಯಲ್ಲಿ ಇಲಾಖೆ ಈ ಬಾರಿ ಮತ್ತಷ್ಟು ಪ್ರವಾಸಿಗರನ್ನು ಸೆಳೆಯಲು ಚಿಂತಿಸಿದ್ದು, ಈಗಾಗಲೇ ವಿಶೇಷ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆ.

ಸ್ವಾತಂತ್ರ್ಯ ದಿನಾಚರಣೆ ಹಿನ್ನೆಲೆಯಲ್ಲಿ ಬೆಂಗಳೂರಿನ ಲಾಲ್ ಬಾಗ್‌ನಲ್ಲಿ ಆಯೋಜಿಸಿದ್ದ ಫಲಪುಷ್ಪ ಪ್ರದರ್ಶನದಲ್ಲಿ ಡಾ.ರಾಜ್‌ಕುಮಾರ್, ಪಾರ್ವತಮ್ಮ ರಾಜ್‌ಕುಮಾರ್ ಹಾಗೂ ನಟ ಪುನೀತ್ ರಾಜ್‌ಕುಮಾರ್ ಅವರ ಪುಷ್ಪಕಲಾಕೃತಿ ಎಲ್ಲರ ಗಮನ ಸೆಳೆದಿತ್ತು. 8.34 ಕೋಟಿ ಪ್ರವಾಸಿಗರು ವೀಕ್ಷಿಸಿ ಭಾರೀ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಬರೋಬ್ಬರಿ 3.34 ಕೋಟಿ ರೂ. ಪ್ರವೇಶ ಶುಲ್ಕ ಸಂಗ್ರಹವಾಗಿತ್ತು. ಈ ಬಾರಿಯ ದಸರಾ ಫಲಪುಷ್ಪ ಪ್ರದರ್ಶನದಲ್ಲೂ ನಟ ಪುನೀತ್ ರಾಜ್‌ಕುಮಾರ್ ಅವರನ್ನು ಹೂಗಳ ಮೂಲಕ ಅರಳಿಸಲು ಚಿಂತನೆ ನಡೆಸಿದ್ದು, ಇದು ಕುಪ್ಪಣ ಪಾರ್ಕ್‌ನಲ್ಲಿ ಆಯೋಜಿಸುವ ಫಲಪುಷ್ಪ ಪ್ರದರ್ಶನದ ವಿಶೇಷವಾಗಿರಲಿದೆ. ಜೊತೆಗೆ 75ನೇ ಸ್ವಾತಂತ್ರ್ಯೋತ್ಸವದ ಸಂಭ್ರಮದಲ್ಲಿರುವ ದೇಶಕ್ಕೆ ಆಜಾದಿ ಕಾ ಅಮೃತ ಮಹೋತ್ಸವದ ಮಹತ್ವವನ್ನು ಪುಷ್ಪಕಲಾಕೃತಿ ಮೂಲಕ ಸಾರಲಿದ್ದಾರೆ.

ಸ್ಪರ್ಧಿಸಲು ಹೆಚ್ಚಿನ ಆಸಕ್ತಿ : ದಸರಾ ಮಹೋತ್ಸವದ ಸಂದರ್ಭದಲ್ಲಿ ತೋಟಗಾರಿಕೆ ಇಲಾಖೆ ವತಿಯಿಂದ ನಾಗರಿಕರು, ಸಂಘ–ಸಂಸ್ಥೆಗಳು ಹಾಗೂ ಕೈಗಾರಿಕೆಗಳಿಗೆ ಫಲಪುಷ್ಪ ಪ್ರದರ್ಶನ ಸ್ಪರ್ಧೆಯಲ್ಲಿ ಭಾಗವಹಿಸಲು ಈಗಾಗಲೇ ಅರ್ಜಿ ಆಹ್ವಾನಿಸಲಾಗಿದೆ. ಈಗಾಗಲೇ ಅದಕ್ಕೂ ಎಲ್ಲಾ ವಿಭಾಗಗಳಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, ಅನೇಕರು ನಗರದ ಕರ್ಜನ್ ಪಾರ್ಕ್ ಆವರಣದಲ್ಲಿರುವ ತೋಟಗಾರಿಕೆ ಇಲಾಖೆ ಕಚೇರಿಗೆ ಭೇಟಿ ನೀಡಿ ಅರ್ಜಿಗಳನ್ನು ಪಡೆದುಕೊಳ್ಳುತ್ತಿದ್ದಾರೆ.

ವಿಶೇಷ ತರಬೇತಿ ಆರಂಭ : ಈಗಾಗಲೇ ಫಲಪುಷ್ಪ ಪ್ರದರ್ಶನಕ್ಕಾಗಿ ವಿಶೇಷ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದ್ದು, ಅದರಂತೆ ತೋಟಗಾರಿಕೆ ಇಲಾಖೆ ಮತ್ತು ಜಿಲ್ಲಾ ತೋಟಗಾರಿಕೆ ಸಂಘದ ವತಿಯಿಂದ ಸೆ.5 ರಿಂದ 6ರವರೆಗೂ ವಿಶೇಷ ತರಬೇತಿ ಶಿಬಿರವನ್ನು ಆಯೋಜಿಸಿದ್ದು, ಶಿಬಿರದಲ್ಲಿ ಗಾರ್ಡನ್ ನಿರ್ವಹಣೆ, ಪಾಶ್ಚಿಮಾತ್ಯ ರೀತಿಯಲ್ಲಿ ಹೂವಿನ ಕಲೆ ರೂಪಿಸುವುದು ಸೇರಿ ವಿವಿಧ ತರಬೇತಿಯನ್ನು ಆಯೋಜಿಸಲಾಗಿದೆ.

ಮೊಟ್ಟೆ ತೂರಿದ್ದ 'ಕೈ ಕಮಲದ್ದೇ...!?'

ಸಂಬಂಧವಿಲ್ಲ. ನಾನು ಬಿಜೆಪಿಯವನೂ ಅಲ್ಲ. ನಾನೋರ್ವ ಕಾಂಗ್ರೆಸ್ ಕಾರ್ಯಕರ್ತ. ಕೆಲಸದ ನಿಮಿತ್ತ ಅಂದು ಕುಶಾಲನಗರಕ್ಕೆ ಬಂದಿದ್ದೆ. ಆ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರ ಕಾರು ಬಂದಾಗ ಮೊಟ್ಟೆ ಎಸೆದಿದ್ದೇನೆ ಎಂದು ಆತ ಹೇಳಿದ್ದಾನೆ.

ಸಿದ್ದರಾಮಯ್ಯ ಟಿಪ್ಪು ಜಯಂತಿ ಆಚರಿಸಿದಾಗಲೇ ಅವರ ಮೇಲೆ ಕೋಪ ಬಂದಿತ್ತು ಅಲ್ಲದೇ, ಅವರು ಹಿಂದುಗಳು ದನ ತಿನ್ನುತ್ತಾರೆ ಎಂದು ಹೇಳಿಕೆ ನೀಡಿದ್ದಾರೆ. ಇದರಿಂದಾಗಿ ನಾನು ಅವರ ಕಾರಿನ ಮೇಲೆ ಮೊಟ್ಟೆ ಎಸೆದೆ. ಹಿಂದುಗಳ ಬಗ್ಗೆ ಹೀಗೆ ಸಿದ್ದರಾಮಯ್ಯ ಹೇಳಿದ್ದಾರಲ್ಲಾ ಕಾಂಗ್ರೆಸ್‌ನಲ್ಲಿ ಹಿಂದುಗಳು ಇಲ್ಲವೇ ಎಂದು ಪ್ರಶ್ನಿಸಿದ. ಈ ಮಧ್ಯೆ ಬಿಜೆಪಿ ಶಾಸಕ ಅಪ್ಪಚ್ಚು ರಂಜನ್ ಜೊತೆ ತಾನು ಇರುವ ಫೋಟೋ, ಆರ್‌ಎಸ್‌ಎಸ್ ಸಮವಸ್ತ್ರದಲ್ಲಿರುವ ತನ್ನದೇ ಮತ್ತೊಂದು ಫೋಟೋ ವೈರಲ್ ಆಗಿರುವ ಬಗ್ಗೆ ಸ್ಪಷ್ಟನೆ ನೀಡಿದ ಸಂಪತ್, ನಾನು ಬಿಜೆಪಿಯವನೇನಲ್ಲ. ಆದರೆ ಹಿಂದೂಗಳ ಪರ ಒಲವು ಹೊಂದಿದ್ದೇನೆ. ಹಿಂದೂ ಸಮಾಜ ಕಾರ್ಯಕ್ರಮವೊಂದಕ್ಕೆ ಆಗಮಿಸಿದ್ದ ಅಪ್ಪಚ್ಚು ರಂಜನ್ ಅವರ ಜೊತೆ ಫೋಟೋ ತೆಗೆಸಿಕೊಂಡಿದ್ದೇನೆ ಅಷ್ಟೇ ಎಂದು ತಿಳಿಸಿದ್ದಾನೆ. ಆದರೆ ಕಾಂಗ್ರೆಸ್, ಸಾಮಾಜಿಕ ಜಾಲತಾಣದಲ್ಲಿ ಸಂಪತ್ ಜನ್ಮಜಾಲಾಡಿದೆ. ಇದು ಬಿಜೆಪಿಯ ಕುತಂತ್ರಕ್ಕೆ ಮತ್ತೊಂದು ತಾಜಾ ಸಾಕ್ಷಿಯೆಂದು ಹರಿಹಾಯ್ದಿದೆ.

ಮಡಿಕೇರಿ ಪೊಲೀಸ್ ಠಾಣೆಯಲ್ಲಿ ಕಾಂಗ್ರೆಸ್–ಬಿಜೆಪಿ ದೂರು–ಪ್ರತಿದೂರು...

ವಿಪಕ್ಷ ನಾಯಕ ಸಿದ್ದರಾಮಯ್ಯ ಕಾರಿನ ಮೇಲೆ ಮೊಟ್ಟೆ ಎಸೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಮಡಿಕೇರಿ ಟೌನ್ ಪೊಲೀಸ್ ಠಾಣೆಯಲ್ಲಿ ದೂರು ಮತ್ತು ಪ್ರತಿದೂರು ದಾಖಲಾಗಿದೆ. ಮಡಿಕೇರಿ ನಗರ ಕಾಂಗ್ರೆಸ್ ಮುಖಂಡ ಪ್ರಕಾಶ್ ಆಚಾರ್ಯ ಅವರು ಬಿಜೆಪಿ ನಗರಸಭಾ ಸದಸ್ಯರಾದ ಕವನ್ ಕಾರ್ಯಪ್ಪ, ಉಮೇಶ್ ಸುಬ್ರಮಣಿ, ಮಹೇಶ್ ಜೈನಿ, ಶಬಿತಾ, ಶ್ವೇತಾ, ಬಿಜೆಪಿ ಮುಖಂಡರಾದ ನವೀನ್ ಪೂಜಾರಿ, ಸತ್ಯ ಕರ್ಕೆರ ಮತ್ತು ಭರತ್ ವಿರುದ್ಧ ದೂರು ಸಲ್ಲಿಸಿದರು. ಅದೇ ವೇಳೆ ನಗರಸಭಾ ಅಧ್ಯಕ್ಷೆ ಅನಿತಾ ಪೂವಯ್ಯ ಅವರು, ತಾನು ಮಡಿಕೇರಿಯ ಚಿಕ್ಕ ಪೇಟೆಯಲ್ಲಿರುವ ಸಾರ್ವಜನಿಕ ಶೌಚಾಲಯದ ಸ್ವಚ್ಛತೆ ಪರಿಶೀಲನೆ ನಡೆಸಲು ತೆರಳುತ್ತಿದ್ದ ವೇಳೆ ಕಾಂಗ್ರೆಸ್ ಕಾರ್ಯಕರ್ತರು ತನ್ನನ್ನು ಅಡ್ಡಗಟ್ಟಿ ಅವಾಚ್ಯ ಶಬ್ಧಗಳಿಂದ ನಿಂದಿಸಿ, ದೈಹಿಕವಾಗಿಯೂ ತೊಂದರೆ ನೀಡಿದ್ದಾರೆ ಎಂದು ಕೆಪಿಸಿಸಿ ಕಾನೂನು ವಿಭಾಗದ ಅಧ್ಯಕ್ಷ ಎ.ಎಸ್. ಪೊನ್ನಣ್ಣ, ಮುಖಂಡರಾದ ಮಂಥರ್‌ಗೌಡ, ಹೊಸೂರು ಸೂರಜ್, ತೆನ್ನೀರಾ ಮೈನಾ, ಹಾಕತ್ತೂರು ಖಲೀದ್, ಪ್ರಕಾಶ್ ಆಚಾರ್ಯ, ಚಂದ್ರಶೇಖರ್, ಶಾಫಿ, ಮೋಹನ್ ದಾಸ್ ಸೇರಿದಂತೆ 13 ಮಂದಿ ವಿರುದ್ಧ ದೂರು ನೀಡಿದ್ದಾರೆ. ಮಡಿಕೇರಿ ಟೌನ್ ಪೊಲೀಸರು ದೂರು ಮತ್ತು ಪ್ರತಿದೂರು ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ನಮ್ಮ ದೇಸಿಯ ಮೌಲ್ಯಗಳ ಅರಿವಿಗೆ ವೇದ ಸಮಾನ ರಾಮಾಯಣ, ಮಹಾಭಾರತ ಅರ್ಥೈಸಿಕೊಳ್ಳಬೇಕು

● ಹಿರಿಯ ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪ ಅಭಿಮತ ● 92ನೇ ಜನ್ಮದಿನದ ಪ್ರಯುಕ್ತ ಶ್ರೀಯುತರಿಗೆ ಆತ್ಮೀಯ ಅಭಿನಂದನೆ



ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯ ಸದ್ವಿದ್ಯಾ ಶಿಕ್ಷಣ ಸಂಸ್ಥೆಯ ವಿವೇಕಾನಂದ ಸಭಾಂಗಣದಲ್ಲಿ ಖ್ಯಾತ ಹಿರಿಯ ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪ ಅವರ 92ನೇ ಜನ್ಮದಿನದ ಅಂಗವಾಗಿ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.

ಮೈಸೂರು,ಆ.20(ಪಿಎಂ)– ನಮ್ಮ ಭರತಖಂಡದ ಸಾಹಿತ್ಯ ಪರಂಪರೆಯಲ್ಲಿ ರಾಮಾಯಣ ಮತ್ತು ಮಹಾಭಾರತ ಮಹಾಕಾವ್ಯಗಳು ವೇದ ಸಮಾನವಾಗಿವೆ. ನಮ್ಮ ದೇಸಿಯ ಮೌಲ್ಯ ಅರಿಯಲು ಈ ಮಹಾಕಾವ್ಯಗಳನ್ನು ಅರ್ಥೈಸಿಕೊಳ್ಳುವುದು ಅಗತ್ಯ ಎಂದು ಸರಸ್ವತಿ ಸಮ್ಮಾನ್ ಪುರಸ್ಕೃತರೂ ಆದ ಖ್ಯಾತ ಹಿರಿಯ ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪ ಅಭಿಪ್ರಾಯಪಟ್ಟರು.

ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯ ಸದ್ವಿದ್ಯಾ ಶಿಕ್ಷಣ ಸಂಸ್ಥೆಯ ವಿವೇಕಾನಂದ ಸಭಾಂಗಣದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳ ಜಂಟಿ ಆಶ್ರಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ತಮ್ಮ (ಡಾ.ಎಸ್.ಎಲ್.ಭೈರಪ್ಪ) 92ನೇ ಜನ್ಮದಿನದ ಸಂಭ್ರಮ ಮತ್ತು ಅಭಿವಂದನೆ ಸಮಾರಂಭದಲ್ಲಿ ಅಭಿವಂದನೆ ಸ್ವೀಕರಿಸಿ ಅವರು ಮಾತನಾಡಿದರು.

ನಮ್ಮ ಭರತಖಂಡದ ಸಾಹಿತ್ಯ ಪರಂಪರೆಯಲ್ಲಿ ರಾಮಾಯಣ ಮತ್ತು ಮಹಾಭಾರತ ವೇದ ಸಮಾನವಾಗಿವೆ. ಆರಂಭದ ವೇದಗಳಲ್ಲಿ ಕಥೆ ಇದ್ದೇ ಇರುತ್ತದೆ. ಉದಾಹರಣೆಗೆ ಕೇನೋಪನಿಷತ್ ಎಂಬ ಉಪನಿಷತ್ತು ನೋಡಬಹುದು. ಒಂದೊಂದು ಉಪನಿಷತ್ತಿಗೂ ಕಥೆ ಇದ್ದೇ ಇರುತ್ತದೆ. ಮೌಲ್ಯಗಳನ್ನು ಥಿಯರಿಯಲ್ಲಿ ಹೇಳಿದರೆ ಪರಿಣಾಮಕಾರಿ ಆಗುವುದಿಲ್ಲವೆಂಬ ಕಾರಣಕ್ಕೆ ಕಥಾ ರೂಪದಲ್ಲಿ ಹೇಳಿ ಅರ್ಥೈಸಿಕೊಳ್ಳುವಂತೆ ಮಾಡಲಾಗಿದೆ ಎಂದರು.

ಪೃಥ್ವಿ, ವಾಯು, ಆಕಾಶ, ಬೆಂಕಿ ಮತ್ತು ನೀರು ಈ ಐದು ಅಂಶಗಳು ಒಮ್ಮೆ ಅಹಂಗೆ ಒಳಗಾಗಿ ತಮ್ಮ ಹೆಚ್ಚುಗಾರಿಕೆಗಾಗಿ ಪ್ರತಿಷ್ಠೆಗೆ ಬಿದ್ದಾಗ, ಯಕ್ಷನ ರೂಪದಲ್ಲಿ ಬರುವ ಬ್ರಹ್ಮ ಇವರಿಗೆ ಒಂದು ಪರೀಕ್ಷೆ ನೀಡಿ, ಈ ಎಲ್ಲರ ಅಹಂ ಬಿಡುವಂತೆ ಮಾಡುತ್ತಾನೆ. 'ನಿಮ್ಮ ಐದು ಜನಕ್ಕೂ ಶಕ್ತಿ ಕೊಟ್ಟ ಬ್ರಹ್ಮ ನಾನು, ನೀವು ನಿಮ್ಮ ಅಹಂ ಬಿಟ್ಟು ಕರ್ತವ್ಯ ಬದ್ಧವಾಗಬೇಕು' ಎಂದು ಬ್ರಹ್ಮ ಪಾಠ ಕಲಿಸುತ್ತಾನೆ. ಇದು ಕೇನೋಪನಿಷತ್‌ನಲ್ಲಿ ಇರುವ ಒಂದು ಕಥೆ. ವೇದಗಳ ಕಾಲದಲ್ಲಿದ್ದ ವಾಯು, ರಾಮಾಯಣದ ಕಾಲಕ್ಕೆ ಹನುಮಾನ್ ಆಗಿದೆ ಮುಂದೆ ಮಹಾಭಾರತದಲ್ಲಿ ಭೀಮನಿಗೆ ತನ್ನ ಬಾಲ ಎತ್ತುವಂತೆ ಪರೀಕ್ಷೆಯೊಡ್ಡುವ ಕೋತಿಯಾಗಿದೆ. ಅಂದರೆ ನಮ್ಮ ಜೀವನ ಮೌಲ್ಯಗಳು ಹೇಗಿರಬೇಕು ಎಂಬುದಕ್ಕೆ ಹೊಸ ಹೊಸ ಸೇರ್ಪಡೆಯಾಗುತ್ತ ಹೋಗಿದೆ ಎಂದು ವಿವರಿಸಿದರು.

ಶಂಕರಾಚಾರ್ಯರು, ರಾಮಾನುಜಾಚಾರ್ಯರು, ಮಧ್ವಾಚಾರ್ಯರು ಒಂದೊಂದು ರೀತಿಯಲ್ಲಿ ವೇದಗಳನ್ನು ಅರ್ಥೈಸಿದ್ದಾರೆ. ಇವು ವಿದ್ವತ್ ಲೋಕದಲ್ಲಿರುವವರಿಗೆ ಅರ್ಥವಾಗುತ್ತದೆ. ಹಾಗಾಗಿ ವೇದಗಳ ಬಗ್ಗೆ ಸರಳವಾಗಿ ಅರ್ಥ ಮಾಡಿಕೊಳ್ಳಲು ನಮಗೆ ನಿಜವಾಗಿಯೂ ಅರ್ಥವಾಗಬೇಕಿರುವುದು ರಾಮಯಾಣ ಮತ್ತು ಮಹಾಭಾರತವೇ ಆಗಿವೆ. ಈ ಕಾವ್ಯಗಳನ್ನು ಆಧಾರವಾಗಿ ಇಟ್ಟುಕೊಂಡು ಒಂದೊಂದು ಕಾಲಘಟ್ಟದಲ್ಲಿ ಮುಂದುವರೆದ ಕಥೆಗಳನ್ನು ಬರೆಯಲಾಗಿದೆ ಎಂದು ವಿವರಿಸಿದರು.

ತಮ್ಮ ನಾಯಕರ ಬಗ್ಗೆ ಇಲ್ಲವೆಂದು ಪರಿಷ್ಕರಣೆಗೆ ಆಕ್ಷೇಪ: ನಮ್ಮಲ್ಲಿ ಮೌಲ್ಯಗಳನ್ನು ತಿಳಿಸುವ ಸಲುವಾಗಿ ಸಾಹಿತ್ಯ ಹುಟ್ಟುಕೊಂಡಿತು. ಇದರಲ್ಲಿ ಮನರಂಜನೆ ಜೊತೆಗೆ ಮೌಲ್ಯಗಳ ಬಗ್ಗೆ ಮುಖ್ಯವಾಗಿ ಬೆಳಕು ಚೆಲ್ಲಲಾಗಿದೆ. ಈಗ ಪಠ್ಯಕ್ರಮ ಪರಿಷ್ಕರಣೆ ಬಗ್ಗೆ ಬೇಕಾದಷ್ಟು ಗಲಾಟೆ ನಡೆಯುತ್ತಿದೆ. ಇವರ ರಾಜಕೀಯ ತತ್ವಗಳು, ಇವರ ನಾಯಕರ ಬಗ್ಗೆ ಪಠ್ಯದಲ್ಲಿ ಸೇರಿಸಿಲ್ಲ ಎಂದು ಗಲಾಟೆ ಮಾಡುತ್ತಾರೆಯೇ ಹೊರತು, ಮಕ್ಕಳಿಗೆ ನೀತಿ ಪಾಠ ಕಲಿಸುವುದು ಇವರಿಗೆ ಮುಖ್ಯವಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ವಿದ್ಯಾರ್ಥಿಗಳ ಬೆಳವಣಿಗೆಗೆ ಪ್ರೌಢಶಾಲೆ ಮತ್ತು ಪಿಯುಸಿ ಬಹಳ ಮುಖ್ಯವಾದ ಘಟ್ಟ, ಈ ಹಂತದಲ್ಲಿ ವಿದ್ಯಾರ್ಥಿಗಳಿಗೆ ಸರಿಯಾದ ದಾರಿ ತೋರಬೇಕು. ನಾನು ಶಾರದಾವಿಲಾಸ ಹೈಸ್ಕೂಲ್‌ನಲ್ಲಿ ಓದುವಾಗ ಎಸ್.ಆರ್.ರಾಜಗೋಪಾಲ್ ಅಯ್ಯಂಗಾರ್ ಎಂಬ ಶಿಕ್ಷಕರು ಇತಿಹಾಸವನ್ನು ಮನ ಮುಟ್ಟುವಂತೆ ಪಾಠ ಮಾಡುತ್ತಿದ್ದರು. ಅವರ ಉತ್ತೇಜನದಿಂದ ದೊಡ್ಡ ದೊಡ್ಡ ವಿದ್ವಾಂಸರ ಭಾಷಣ ಕೇಳುತ್ತಿದ್ದೆ. ಇದು ನನ್ನ ವ್ಯಕ್ತಿತ್ವ ಬೆಳೆಯಲು ಕಾರಣವಾಯಿತು. ಹೈಸ್ಕೂಲ್ ಹಂತದಲ್ಲಿ ಮಕ್ಕಳಿಗೆ ಉತ್ತೇಜನ ನೀಡಬೇಕು. ಇದು ಮುಂದೆ ಅವರು ಬೆಳೆಯಲು ಅನುಕೂಲವಾಗುತ್ತದೆ ಎಂದರು.

ಸಾಹಿತ್ಯದಲ್ಲಿ ಬಿಎ, ಎಂಎ ಮತ್ತು ಪಿಹೆಚ್.ಡಿ ಪದವಿ ಪಡೆದವರು ಸಾಹಿತ್ಯ ವಿಮರ್ಶಾ ಸಿದ್ಧಾಂತಗಳಿಂದ ಬರಡಾಗಿ ಹೋಗಿರುತ್ತಾರೆ. ಹಾಗಾಗಿ ಅವರು ಸಾಹಿತ್ಯದ ರಸ ಅನುಭವಿಸುವುದಿಲ್ಲ. ಹೈಸ್ಕೂಲ್ ಹಂತದಲ್ಲಿನ ಶಿಕ್ಷಕರೇ ನಿಜಕ್ಕೂ ಸಾಹಿತ್ಯ ಆಸ್ವಾದಿಸುತ್ತಾರೆ. ನಾನು ತತ್ವಶಾಸ್ತ್ರ ಓದಿದ್ದು ಸಾಹಿತ್ಯಕವಾಗಿ ಬೆಳೆಯಲು ಅನುಕೂಲವಾಯಿತು. ಇದರಿಂದ ನನ್ನ ಬರವಣಿಗೆಗೆ ತೂಕ ಬಂದಿತು. ಬೇರೆ ಬೇರೆ ವಿಷಯಗಳಲ್ಲಿ ಜ್ಞಾನ ಇರಬೇಕು. ಜೀವನದ ಮೌಲ್ಯಗಳನ್ನು ಅರ್ಥ ಮಾಡಿಕೊಳ್ಳಲು ಇದು ಮುಖ್ಯ ಎಂದು ತಿಳಿಸಿದರು.

ಇದಕ್ಕೂ ಮುನ್ನ ಡಾ.ಎಸ್.ಎಲ್.ಭೈರಪ್ಪ ಅವರನ್ನು ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳ ಗೌರವ ಕಾರ್ಯದರ್ಶಿ ಪ್ರೊ.ಎಂ.ಎಸ್.ಕೆ. ನರಹರಿ ಬಾಬು ಅಭಿವಂದಿಸಿದರು. ಮೈಸೂರು ಆಕಾಶವಾಣಿಯ ನಿವೃತ್ತ ನಿರ್ದೇಶಕಿ ಡಾ.ಎಂ.ಎಸ್.ವಿಜಯಾ ಹರನ್ ಅಭಿನಂದಾನುಡಿಗಳನ್ನಾಡಿದರು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಿದ್ದರು. ಸಂಸ್ಕೃತಿ ಚಿಂತಕ ಡಾ.ಕೆ.ರಘುರಾಮ್ ವಾಜಪೇಯಿ, ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳ ಉಪಾಧ್ಯಕ್ಷ ಸಿ.ಆರ್.ನಾಗರಾಜ್, ಸಹ ಕಾರ್ಯದರ್ಶಿ ಪ್ರೊ.ಕೆ.ಎಸ್.ಹಿರಿಯಣ್ಣ, ಜಿಲ್ಲಾ ಕಸಾಪ ಕಾರ್ಯದರ್ಶಿ ಮ.ನ.ಲತಾ ಮೋಹನ್ ಮತ್ತಿತರರು ಹಾಜರಿದ್ದರು.

ನನ್ನ ಹುಟ್ಟಿದ ದಿನದ ಬಗ್ಗೆ ಇಂದಿಗೂ ಅನುಮಾನವೇ...!

ವಾಸ್ತವವಾಗಿ ನನಗೆ ಜನ್ಮದಿನ ಆಚರಿಸಿಕೊಳ್ಳುವ ಅಭ್ಯಾಸವೇ ಇಲ್ಲ. ಇದೇ ಮೊಟ್ಟ ಮೊದಲನೇ ಆಚರಣೆ. ಏಕೆಂದರೆ ನನ್ನ ತಾಯಿ ತೀರಿ ಹೋದ ಬಳಿಕ ನನಗೆ ಇಂತಹ ಆಚರಣೆ ಮಾಡುವವರು ಚಿಕ್ಕ ವಯಸ್ಸಿನಲ್ಲಿ ಯಾರೂ ಇರಲಿಲ್ಲ. ಜೊತೆಗೆ ನನ್ನ ಹುಟ್ಟಿದ ದಿನ ಯಾವುದು ಎಂಬ ಬಗ್ಗೆ ನನಗೆ ಇಂದಿಗೂ ಅನುಮಾನವೇ. ಗುರು ಪೂರ್ಣಿಮಾ ದಿನ ನಾನು ಹುಟ್ಟಿದ್ದು. ನಮ್ಮ ಪಂಚಾಂಗ ಮತ್ತು ಇಂಗ್ಲಿಷ್ ಕ್ಯಾಲೆಂಡರ್‌ಗೂ ಯಾವಾಗಲೂ ಹೊಂದಾಣಿಕೆ ಇರುವುದಿಲ್ಲ. ಹುಟ್ಟಿದ ದಿನ ಗೊತ್ತಿಲ್ಲ. ಆದರೆ ಶಾಲೆ ದಾಖಲೆಯಲ್ಲಿ ಆಗಸ್ಟ್ 20 ಎಂದು ನಮೂದಿಸಲಾಗಿದೆ. ಮೈಸೂರು ಮೊದಲಿನಿಂದಲೂ ಶಿಕ್ಷಣಕ್ಕೆ ಪ್ರಸಿದ್ಧಿ. ಇಲ್ಲಿ ಅನೇಕ ಖಾಸಗಿ ಶಿಕ್ಷಣ ಸಂಸ್ಥೆಗಳು ಗುಣಮಟ್ಟದ ಶಿಕ್ಷಣ ನೀಡುತ್ತಿವೆ. ಆ ಪೈಕಿ ಸದ್ವಿದ್ಯಾ ಕೂಡ ಸೇರಿದೆ ಅಂತಹ ಸಂಸ್ಥೆ ಹಾಗೂ ಕಸಾಪದ ಜಂಟಿ ಆಶ್ರಯದಲ್ಲಿ ಸನ್ಮಾನಿಸಿರುವುದು ಅತ್ಯಂತ ಸಂತಸ ಉಂಟು ಮಾಡಿದೆ.

-ಡಾ.ಎಸ್.ಎಲ್.ಭೈರಪ್ಪ

ಕದ್ದು ಸಿಗರೇಟು ಸೇದುತ್ತಿದ್ದೆ... ನಶ್ಯ ಹಾಕುವ ಚಟಕ್ಕೂ ಬಿದ್ದಿದ್ದೆ...

ಮೈಸೂರು,ಆ.20(ಪಿಎಂ)–ಕದ್ದು ಸಿಗರೇಟು ಸೇದುತ್ತಿದ್ದೆ. ನಶ್ಯ ಹಾಕುವ ಚಟಕ್ಕೂ ಬಿದ್ದಿದ್ದೆ. ಆದರೆ ಶಿಕ್ಷಕರ ಮಾರ್ಗದರ್ಶನದಿಂದ ಅವುಗಳನ್ನು ಬಿಟ್ಟೆ. ನಾನು ಇಷ್ಟು ವರ್ಷಗಳು ಬದುಕಲು ದುಶ್ಚಟಗಳಿಂದ ದೂರವಾಗಿದ್ದೇ ಕಾರಣ. ದುಶ್ಚಟಗಳಿಂದ ದೂರವಿದ್ದಷ್ಟು ದೀರ್ಘಾಯಸ್ಸು ಲಭಿಸುತ್ತದೆ ಎಂದು ಖ್ಯಾತ ಹಿರಿಯ ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪ ತಮ್ಮ ಬಾಲ್ಯದ ನೆನಪಿಗೆ ಜಾರಿದರು.

ನಾನು ಪ್ರಾಥಮಿಕ ಶಾಲೆಯಲ್ಲಿ ಓದುವಾಗ ಸ್ವಾಮಿಗೌಡ್ರ ಅಂತ ಶಿಕ್ಷಕರು ಇದ್ದರು. ಅವರು ಸಿಗರೇಟ್ ಸೇದುತ್ತಿದ್ದರು. ಯಾರೋ ಒಬ್ಬ ಶಾಲೆಯ ಸಂಗಡಿಗ ನನಗೂ ಒಂದೆರಡು ದಿನ ಸಿಗರೇಟ್ ಸೇವಿಸುವ ಅಭ್ಯಾಸ ಮಾಡಿಸಿಬಿಟ್ಟಾ, 2 ದಿನಗಳಲ್ಲಿ ಚಟವಾಗಿ ಹೋಯಿತು. ಸ್ವಾಮಿಗೌಡ್ರ ಪ್ಯಾಕೇಟ್‌ನಿಂದ ಸಿಗರೇಟು ಕದ್ದು ಸೇದುತ್ತಿದ್ದೆ. ಹೀಗೆ ಐದಾರು ದಿನ ಮಾಡಿದೆ. ಇದು ಶಿಕ್ಷಕರಿಗೆ ಗೊತ್ತಾಗಿ ಬಹಳ ಪ್ರೀತಿಯಿಂದ 'ಇದು ಸರಿಯಲ್ಲ...' ಎಂದು ಬುದ್ಧಿವಾದ ಹೇಳಿದರು.

'ನಾನು ಕಲಿತು, ಈಗ ಚಟವಾಗಿ ಬಿಡಲಾಗುತ್ತಿಲ್ಲ, ಇದು ಸರಿಯಲ್ಲ, ಒಳಗೆ ಸುಡುತ್ತದೆ' ಎಂದು ಶಿಕ್ಷರು ಹೇಳಿದಾಗ, ನಾನು ಅವರ ಕೈ ಹಿಡಿದು ಈ ಜನ್ಮದಲ್ಲಿ ಸಿಗರೇಟು ಸೇದುವುದಿಲ್ಲ ಎಂದು ಮಾತು ಕೊಟ್ಟೆ ಅದರಂತೆ ಸಿಗರೇಟು ಸೇವನೆ ಬಿಟ್ಟೆ ಅಂತೆಯೇ ಹೈಸ್ಕೂಲ್‌ನ ಕೊನೆ ವರ್ಷದಲ್ಲಿ ಓದುವಾಗ ಯಾರೋ ಒಬ್ಬ ಹಾಸ್ಟೆಲ್ ಸಂಗಡಿಗ ನನಗೆ ನಶ್ಯ ಹಾಕುವುದನ್ನು ಕಲಿಸಿಬಿಟ್ಟಾ, ಬಿಎ ಆನರ್ಸ್ ಓದುವಾಗ ತರಗತಿ ಕೊಠಡಿಯಲ್ಲಿ ಒಂದು ಪೀರಿಯಡ್ ಆರಂಭಕ್ಕೂ ಮೊದಲು ನಶ್ಯ ಹಾಕಿಕೊಳ್ಳುತ್ತಿದ್ದೆ. ಯಮುನಾಚಾರ್ಯ ಎಂಬ ಗುರುಗಳು ಇದನ್ನು ಗಮನಿಸಿ, ಹೊರ ಹೋಗಿ ನಶ್ಯ ಹಾಕಿಕೊಂಡು ಬರಲು ಅವಕಾಶ ನೀಡಿದರು. ಆದರೆ ಇದು ನನಗೆ ಮುಜುಗರ ಎನ್ನಿಸಿತಾದರೂ ಬೇರೆ ದಾರಿ ಇರಲಿಲ್ಲ.

ತರಗತಿ ಮುಗಿದ ಬಳಿಕ ಭೇಟಿ ಆಗಲು ಹೇಳಿದ ಅವರು, ನಶ್ಯ ಬಿಡಲು ಪ್ರಯತ್ನ ಮಾಡಿದ್ದೀಯಾ? ಎಂದು ಪ್ರಶ್ನಿಸಿದರು. ಪ್ರಯತ್ನ ಪಟ್ಟರೂ ಪ್ರಯೋಜನವಾಗಿಲ್ಲ ಎಂದೆ. ಹಂತ ಹಂತವಾಗಿ ಬಿಡಲು ಅವರು ಸಲಹೆ ನೀಡಿದರು. ಅದರಂತೆ ನಶ್ಯ ಅಭ್ಯಾಸ ತ್ಯಜಿಸಿದೆ. ನಾನು ಇಷ್ಟು ವರ್ಷಗಳು ಬದುಕಲು ಈ ರೀತಿಯ ದುಶ್ಚಟಗಳಿಂದ ದೂರವಿರುವುದೇ ಕಾರಣ. ಕಾಫಿ–ಟೀ ಸಹ ಕುಡಿಯುವುದಿಲ್ಲ. ಚಿಕ್ಕ ವಯಸ್ಸಿನಲ್ಲಿ ಕುಡಿಯಲು ಹಣ ಇರಲಿಲ್ಲ. ಬಳಿಕ ಅದರ ಅಭ್ಯಾಸವೂ ಆಗಲಿಲ್ಲ ಎಂದು ತಿಳಿಸಿದರು.

ಮೈಸೂರಲ್ಲಿ ನಾಳೆ ಪೌರಕಾರ್ಮಿಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ

ಮೈಸೂರು, ಆ.20(ಆರ್‌ಕೆ)–ಆಗಸ್ಟ್ 22 ರಂದು ಮೈಸೂರಿನ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಪೌರ ಕಾರ್ಮಿಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು ಎಂದು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ.ಶಿವಣ್ಣ ತಿಳಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಸುದ್ದಿಗಾರರಿಗೆ ಈ ಕುರಿತು ಮಾಹಿತಿ ನೀಡಿದ ಅವರು, ಆಯೋಗ ಹಾಗೂ ಜಿಲ್ಲಾಡಳಿತದ ಸಹಯೋಗದಲ್ಲಿ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಪ್ರತಿಭಾ ಪುರಸ್ಕಾರ ನೀಡಲಿದ್ದು, ಸಚಿವರಾದ ಗೋವಿಂದ ಕಾರಜೋಳ, ಕೋಟಾ ಶ್ರೀನಿವಾಸ ಪೂಜಾರಿ, ಮೇಯರ್ ಸುನಂದಾ ಪಾಲನೇತ್ರ ಶಾಸಕ ಎಲ್.ನಾಗೇಂದ್ರ ಸಂಸದ ಪ್ರತಾಪ್ ಸಿಂಹ ಸೇರಿದಂತೆ ಹಲವು ಜನಪ್ರತಿನಿಧಿಗಳು ಭಾಗವಹಿಸುವರು ಎಂದರು.

ಮೈಸೂರು ಜಿಲ್ಲೆಯಾದ್ಯಂತ ಎಸ್‌ಎಸ್‌ಎಲ್‌ಸಿಯಲ್ಲಿ ಶೇ.60ಕ್ಕಿಂತ ಹೆಚ್ಚು ಅಂಕ ಗಳಿಸಿದ 81 ಪೌರಕಾರ್ಮಿಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ಟ್ಯಾಬ್ ನೀಡುವುದರ ಜೊತೆಗೆ ನೀಟ್ ಹಾಗೂ ಕೆಎಎಸ್ ಪರೀಕ್ಷೆಗೆ ಸಿದ್ಧವಾಗುತ್ತಿರುವ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಗುವುದು ಎಂದು ಶಿವಣ್ಣ ತಿಳಿಸಿದರು.

ಪೌರಕಾರ್ಮಿಕರ ಜೀವನ ಸುಧಾರಣೆ, ಸರ್ಕಾರಿ ಸೌಲಭ್ಯಗಳ ಬಗ್ಗೆ ಜಾಗೃತಿ ಮಾಡಿಸುವುದಲ್ಲದೇ, ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಪಿಡುಗು ತೊಲಗಿಸುವ ಬಗ್ಗೆ ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ ಎಂದ ಅವರು, ಪೌರ ಕಾರ್ಮಿಕರ ಸೇವೆಯನ್ನು ಖಾಯಂಗೊಳಿಸುವ ಸಂಬಂಧ ಉನ್ನತ ಮಟ್ಟದ ಸಮಿತಿ ರಚಿಸಲಾಗಿದ್ದು, ವರದಿ ಬಂದ ನಂತರ ಕ್ರಮ ವಹಿಸಲಾಗುವುದು ಎಂದರು.

ಮೈಸೂರಲ್ಲಿ ಕಾಂಗ್ರೆಸ್ ಕಾರ್ಯಕರ್ತರಿಂದ ಕಪ್ಪು ಬಾವುಟ ಪ್ರದರ್ಶನ



ಮೈಸೂರು, ಆ.20(ಆರ್‌ಕೆ)–ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಕೊಡಗಿನಲ್ಲಿ ಕಪ್ಪು ಪಟ್ಟಿ ಪ್ರದರ್ಶಿಸಿ, ಅವರ ಕಾರಿನ ಮೇಲೆ ಮೊಟ್ಟೆ ಎಸೆದ ಪ್ರಕರಣದ ಹಿನ್ನೆಲೆಯಲ್ಲಿ ಇಂದು ಮೈಸೂರಿನ ಕಲಾಮಂದಿರದ ಬಳಿ ಕಾಂಗ್ರೆಸ್ ಕಾರ್ಯಕರ್ತರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್‌ಗೆ ಕಪ್ಪು ಬಾವುಟ ಪ್ರದರ್ಶಿಸಿ, ದಿಢೀರ್ ಪ್ರತಿಭಟನೆ ನಡೆಸಿದರು.

ಕಲಾಮಂದಿರದಲ್ಲಿ ನಡೆದ ಡಿ.ದೇವರಾಜ ಅರಸು ಅವರ 107ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಚಿವರು ನಿರ್ಗಮಿಸುತ್ತಿದ್ದಾಗ ರಂಗಾಯಣ ಪ್ರವೇಶ ದ್ವಾರದ ಸಮೀಪ ದಿಢೀರ್ ಪ್ರತ್ಯಕ್ಷರಾದ 15 ಮಂದಿ ಕಾಂಗ್ರೆಸ್ ಕಾರ್ಯಕರ್ತರು, ಪೊಲೀಸ್ ಬಂದೋಬಸ್ತ್ ನಡುವೆಯೂ ಕಪ್ಪು ಬಾವುಟ ಪ್ರದರ್ಶಿಸಿ, ಬಿಜೆಪಿ ವಿರುದ್ಧ ಘೋಷಣೆಗಳನ್ನು ಕೂಗಿ ಪ್ರತಿರೋಧ ವ್ಯಕ್ತಪಡಿಸಿದರು. ಮತ್ತೊಂದೆಡೆ ದಾಸಪ್ಪ ಸರ್ಕಲ್‌ನಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಬಿ.ಜೆ.ವಿಜಯಕುಮಾರ್ ನೇತೃತ್ವದಲ್ಲಿ ಕಾರ್ಯಕರ್ತರು ಜಿಲ್ಲಾ ಉಸ್ತುವಾರಿ ಸಚಿವರಿಗೆ ಕಪ್ಪು ಬಾವುಟ ತೋರಿಸಲು ಕಾಯುತ್ತಿದ್ದರಾದರೂ, ಸಚಿವರ ಕಾರು ಬೇರೆ ಮಾರ್ಗದಲ್ಲಿ ಕಲಾಮಂದಿರಕ್ಕೆ ತೆರಳಿದ್ದರಿಂದ ಅವರ ಪ್ರಯತ್ನ ವಿಫಲವಾಯಿತು.

ಹಿಂದೂಗಳನ್ನು ಒಗ್ಗೂಡಿಸಲು ಆರಂಭವಾಗಿದ್ದೇ ವಿಶ್ವ ಹಿಂದೂ ಪರಿಷತ್

ವಿಹೆಚ್‌ಪಿ ರಾಜ್ಯ ಕಾರ್ಯದರ್ಶಿ ಬಸವರಾಜು



ಮೈಸೂರು, ಆ.20(ಜಿಎ)– ನಾವೆಲ್ಲರೂ ಹಿಂದೂಗಳು ಎಂದು ಮೈಮರೆಯುತ್ತಿದ್ದ ಸಂದರ್ಭದಲ್ಲಿ ಆರಂಭವಾಗಿದ್ದೇ ವಿಶ್ವ ಹಿಂದೂ ಪರಿಷತ್. ಆದರೆ, ಈಗಲೂ ಇದೇ ಪರಿಸ್ಥಿತಿ ಎದುರಾಗಿದ್ದು, ನಾವೆಲ್ಲರೂ ಹಿಂದೂಗಳು ಒಗ್ಗೂಡಬೇಕು ಎಂದು ವಿಶ್ವ ಹಿಂದೂ ಪರಿಷತ್ ರಾಜ್ಯ ಕಾರ್ಯದರ್ಶಿ ಬಸವರಾಜು ಅಭಿಪ್ರಾಯಪಟ್ಟರು.

ವಿಶ್ವ ಹಿಂದೂ ಪರಿಷತ್ 58ನೇ ವರ್ಷದ ಸಂಸ್ಥಾಪನಾ ದಿನಾಚರಣೆ ಹಿನ್ನೆಲೆಯಲ್ಲಿನ ನಗರದ ಹಾರ್ಡಿಂಗ್ ವೃತ್ತದ ಜಯ ಚಾಮರಾಜ ಒಡೆಯರ್ ಪ್ರತಿಮೆ ಮುಂಭಾಗ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ವಿಶ್ವ ಹಿಂದೂ ಪರಿಷತ್ ಆರಂಭವಾಗಲು ಮುಖ್ಯ ಉದ್ದೇಶವೆಂದರೆ ಆ ಸಮಯದಲ್ಲಿ ಹಿಂದೂ ಸಮಾಜದವರಿಗೆ ನಾವೆಲ್ಲರೂ ಹಿಂದೂಗಳು ಎಂಬುದೇ ಮರೆತು ಹೋಗಿತ್ತು ಅದನ್ನು ಮನವರಿಕೆ ಮಾಡಿಸಲು ಮತ್ತು ಅನ್ಯಧರ್ಮಿಯರಿಂದ ನಿರಂತರವಾಗಿ ನಡೆಯುತ್ತಿದ್ದ ಶೋಷಣೆಗಳನ್ನು ತಡೆಯಲು ಹಾಗೂ ಹಿಂದೂ ಸಂಸ್ಕೃತಿ, ಮೌಲ್ಯಗಳನ್ನು ಆಚರಣೆ ಮಾಡಬೇಕು ಎಂದು ಮತ್ತು ಯಾರಾದರೂ ಹಿಂದುಗಳು ಮತಾಂತರವಾಗಿದ್ದರೆ ಅವರು ಧರ್ಮಕ್ಕೆ ವಾಪಾಸ್ ಕರೆತರಬೇಕು. ಪ್ರಮುಖವಾಗಿ ಗೋಹತ್ಯೆ ನಿಲ್ಲಬೇಕು ಎಂಬ ಉದ್ದೇಶಗಳನ್ನು ಇಟ್ಟುಕೊಂಡು ಆರಂಭವಾಯಿತು. 1964ರ ಶ್ರೀ ಕೃಷ್ಣ ಜನ್ಮಾಷ್ಟಮಿ ದಿನದಂದು ಮುಂಬೈನ ಚಿನ್ಮಯಾನಂದ ಅವರ ಆಶ್ರಮದಲ್ಲಿ ವಿಶ್ವ ಹಿಂದೂ ಪರಿಷತ್ ಪ್ರಾರಂಭವಾಯಿತು. ಅಂದು ಕರ್ನಾಟಕದಿಂದ ಪೇಜಾವರ ಶ್ರೀಗಳು ಮತ್ತು ಮಹಾರಾಷ್ಟ್ರದ ತೋಕಡಿ ಮಹಾರಾಜರು ಇದ್ದರು ಎಂದು ತಿಳಿಸಿದರು.

ಇತ್ತೀಚಿನ ದಿನಗಳಲ್ಲೂ ನಾವುಗಳು ಹಿಂದೂಗಳು ಎಂಬುದನ್ನು ಮರೆಯುತ್ತಿದ್ದು, ನಾವು ಒಕ್ಕಲಿಗರು ಲಿಂಗಾಯಿತರು, ಬ್ರಾಹ್ಮಣರು, ಕುರುಬರು, ನಾಯಕರು ಎಂದು ಜಗಳ ಮಾಡುತ್ತಿದ್ದೇವೆ. ನಾವೆಲ್ಲರೂ ಹಿಂದೂಗಳು. ಜಾತಿ ಜಾತಿಗಳನ್ನಿಟ್ಟುಕೊಂಡು ಕಚ್ಚಾಡುವ ಬದಲು ನಾವು ಜಾಗೃತರಾಗಬೇಕು ಎಂದರು.

ವಿಶ್ವ ಹಿಂದೂ ಪರಿಷತ್‌ನ ಮೊದಲ ಅಧ್ಯಕ್ಷರಾಗಿದ್ದು, ಜಯಚಾಮರಾಜ ಒಡೆಯರ್ ಅವರು ಹಾಗೂ 1965ರಲ್ಲಿ ನಮ್ಮ ಮೈಸೂರಿನ ಅರಮನೆಯಲ್ಲಿ ಪರಿಷತ್‌ಗೆ ಮೊದಲ ಸಭೆ ನಡೆಸಲಾಯಿತು. ವಿಶ್ವಹಿಂದೂ ಪರಿಷತ್‌ಗೆ ಒಡೆಯರ್ ಅವರು ಅನೇಕ ಕೊಡುಗೆ ಕೊಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಸಂಸ್ಥಾಪನಾ ದಿನಾಚರಣೆ ಮಾಡಲಾಗುತ್ತಿದೆ ಎಂದರು.


ಕಳೆದ 58 ವರ್ಷಗಳಲ್ಲಿ ವಿಶ್ವ ಹಿಂದೂ ಪರಿಷತ್ ಸಮಾಜಕ್ಕೆ ಸೇವೆಯನ್ನು ಸಲ್ಲಿಸುತ್ತಿದ್ದು, 1966ರಲ್ಲಿ ಮೊದಲ ಹಿಂದೂ ಸಮ್ಮೇಳನ ನಡೆಸಲಾಗಿತ್ತು. ಅಂದು ಸರಿಸುಮಾರು 20 ಸಾವಿರಕ್ಕೂ ಅಧಿಕ ಮಂದಿ ಅದರಲ್ಲಿ ಭಾಗಿಯಾಗಿದ್ದರು. ಅಯೋಧ್ಯೆಯಲ್ಲಿ ರಾಮಮಂದಿರ ವಿಚಾರದಲ್ಲಿಯೂ ಪರಿಷತ್ ಕೈಜೋಡಿಸಿದ್ದು, ಅದರ ಪ್ರತಿಫಲವಾಗಿ 2024ರಲ್ಲಿ ಸಂಕ್ರಾಂತಿ ವೇಳೆಗೆ ಅಯೋಧ್ಯೆ ರಾಮಮಂದಿರದಲ್ಲಿ ಪ್ರತಿಮೆ ಪ್ರತಿಷ್ಠಾಪನೆಯಾಗಲಿದೆ. ಪರಿಷತ್ ವತಿಯಿಂದ ಕಳೆದ 6 ತಿಂಗಳಿನಲ್ಲಿ 64 ಸಾವಿರ ಹಸುಗಳನ್ನು ರಕ್ಷಣೆ ಮಾಡಿದ್ದಾರೆ ಹಾಗೂ ಅನ್ಯ ಧರ್ಮಕ್ಕೆ ಮತಾಂತರಗೊಂಡಿದ್ದ 2400 ಹಿಂದುಗಳನ್ನು ಧರ್ಮಕ್ಕೆ ವಾಪಸ್ ಕರೆತರಲಾಗಿದೆ. ಲವ್ ಜಿಹಾದ್‌ಗೆ ಒಳಗಾಗಿದ್ದ 1800 ಯುವತಿಯರನ್ನು ರಕ್ಷಣೆ ಮಾಡಲಾಗಿದೆ ಎಂದು ತಿಳಿಸಿದರು.

ದೇಶದಲ್ಲಿ ಶೇ.15 ಇರುವ ಧರ್ಮದವರು ಶೇ.85 ಇರುವ ಹಿಂದೂಗಳನ್ನು ಆಟವಾಡಿಸುತ್ತಿದ್ದಾರೆ. ಇತ್ತೀಚೆಗೆ ಸ್ವಾತಂತ್ರ್ಯಕ್ಕೆ ಹೋರಾಡಿದ ವೀರ ಸಾವರ್ಕರ್ ಅವರ ಫೋಟೋವನ್ನು ಹರಿಯುತ್ತಿದ್ದಾರೆ. ಹಿಂದೂಗಳು ಮತ್ತೆ ಜಾಗೃತರಾಗಬೇಕಿದೆ. ಇಂದು ಶ್ರೀಕೃಷ್ಣ ಜನ್ಮಾಷ್ಟಮಿ ದಿನ ಸಂಕಲ್ಪ ಮಾಡೋಣ ಎಂದು ಕರೆ ನೀಡಿದರು.

ವಿಶ್ವ ಹಿಂದೂ ಪರಿಷತ್‌ನ ಮೈಸೂರು ಜಿಲ್ಲಾಧ್ಯಕ್ಷ ಬಿ.ಎಸ್. ಪ್ರಶಾಂತ್, ಜಿಲ್ಲಾ ಕಾರ್ಯದರ್ಶಿ ಪ್ರತೀಶ್ ಕುಮಾರ್, ಸುರೇಶ್, ಡಾ.ಕೃಷ್ಣಮೂರ್ತಿ, ಸುಬ್ರಮಣ್ಯ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಪಾಲಿ ಭಾಷಾ ಕಾರ್ಯಾಗಾರ ಸಂಪನ್ನ

ಮೈಸೂರು, ಆ.20(ಜಿಎ)– ಮೈಸೂರು ವಿಶ್ವ ವಿದ್ಯಾನಿಲಯ ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ ಮತ್ತು ಕಲ್ಬುರ್ಗಿಯ ಪಾಲಿ ಇನ್‌ಸ್ಟಿಟ್ಯೂಟ್ ಸಹಯೋಗದೊಂದಿಗೆ ಆಯೋಜಿಸಿದ್ದ ಎರಡು ದಿನಗಳ 'ಪಾಲಿ ಭಾಷಾ ಕಾರ್ಯಾಗಾರ'ವು ಶನಿವಾರ ಸಂಜೆ ಸಂಪನ್ನಗೊಂಡಿತು.



ಎರಡು ದಿನ 'ಪಾಲಿ ಭಾಷಾ ಕಾರ್ಯಾಗಾರ'ದಲ್ಲಿ ಭಾಗವಹಿಸಿದ್ದ ಶಿಬಿರಾರ್ಥಿಗಳಿಗೆ ಹಿರಿಯ ಸಂಸ್ಕೃತ ವಿದ್ವಾಂಸರಾದ ಡಾ. ಹೆಚ್.ವಿ. ನಾಗರಾಜರಾವ್ ಅವರು ಪ್ರಮಾಣ ಪತ್ರ ವಿತರಿಸಿ ಮಾತನಾಡಿ, ಈ ಎರಡು ದಿನಗಳ 'ಪಾಲಿ ಭಾಷಾ ಕಾರ್ಯಾಗಾರ'ದಲ್ಲಿ ಭಾಗವಹಿಸಿರುವವರು ತ್ರಿಪಿಟಕಗಳನ್ನು ಸುಲಭವಾಗಿ ಓದಬಹುದಾಗಿದ್ದು, ಆ ಶಕ್ತಿಯನ್ನು ಕಾರ್ಯಾಗಾರ ತುಂಬಿದೆ ಎಂದರು.

ಪಾಲಿ ಭಾಷೆಗೆ ಪ್ರತ್ಯೇಕವಾಗಿ ಮೂರು ವ್ಯಾಕರಣಗಳಿದ್ದು, ಇದರ ವಾಕ್ಯ ರಚನೆಯು ಕನ್ನಡ ಮತ್ತು ಸಂಸ್ಕೃತದ ಭಾಷೆಗಳ ರೀತಿಯಲ್ಲಿಯೇ ಇರಲಿದೆ. ಕನ್ನಡಕ್ಕೆ ಹೋಲಿಸಿದರೆ, ಪಾಲಿಯಲ್ಲಿ ಕೆಲವು ಸ್ವರಗಳು ಕಡಿಮೆ ಇರುತ್ತವೆ. ಸಂಸ್ಕೃತದಲ್ಲಿ ಕಾಣುವ ದ್ವಿವಚನಗಳು ಇರುವುದಿಲ್ಲ. ಕನ್ನಡ ಭಾಷೆಯಲ್ಲಿರುವಂತೆ ಇದರಲ್ಲಿಯೂ ಏಕವಚನ, ಬಹುವಚನವಿದೆ ಹಾಗೂ ಸಂಸ್ಕೃತ ಮತ್ತು ಕನ್ನಡದಲ್ಲಿರುವ ತದ್ಭವಗಳಲ್ಲಿ ಇರುವಂತೆ ವಿಜಾತಿಯ ಸಂಯುಕ್ತಾಕ್ಷರಗಳು ಪಾಲಿ ಭಾಷೆಯಲ್ಲಿ ಇರುವುದಿಲ್ಲ. ಒಟ್ಟಾರೆ ಕಾರ್ಯಾಗಾರವು ಸಂಪೂರ್ಣವಾಗಿ ಸಾರ್ಥಕತೆಯನ್ನು ಪಡೆದುಕೊಂಡಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮೈಸೂರು ವಿವಿ ಕುಲಸಚಿವ ಆರ್.ಶಿವಪ್ಪ, ಕರ್ನಾಟಕ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಮೈಸೂರು ವಿವಿ ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗದ ಅಧ್ಯಕ್ಷೆ ಡಾ.ವಿಜಯಕುಮಾರಿ ಎಸ್.ಕರಿಕಲ್, ಕಲಬುರಗಿ ಪಾಲಿ ಇನ್‌ಸ್ಟಿಟ್ಯೂಟ್ ಕಾರ್ಯದರ್ಶಿ ರಾಧಾಕೃಷ್ಣ, ಗುಲ್ಬರ್ಗಾ ವಿವಿ ಕನ್ನಡ ಅಧ್ಯಯನ ಸಂಸ್ಥೆ ಉಪನ್ಯಾಸಕ ಡಾ.ಎಂ.ಜಿ.ಕಟ್ಟಿ, ಮೈಸೂರು ವಿವಿ ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗದ ಅತಿಥಿ ಉಪನ್ಯಾಸಕ ಡಾ.ಶಾಂತಿಸಾಗರ ಶಿರಹಟ್ಟಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ವಿವಿಧೆಡೆ ಮಾಜಿ ಸಿಎಂ ಡಿ.ದೇವರಾಜ ಅರಸು ಸ್ಮರಣೆ

ಮೈಸೂರು ಜಿಲ್ಲೆಯ ವಿವಿಧೆಡೆ ರಾಜ್ಯ ಕಂಡ ಅಪರೂಪದ ರಾಜಕಾರಣಿ, ದಕ್ಷ ಆಡಳಿತಗಾರ, ಹಿಂದುಳಿದ ವರ್ಗಗಳ ನೇತಾರ, ರೈತ ಬಂಧು, ಸಾಮಾಜಿಕ ನ್ಯಾಯದ ಹರಿಕಾರರೂ ಆದ ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ ಅರಸು ಅವರ ಜನ್ಮ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಾಯಿತು.

ಸಾಮಾಜಿಕ ನ್ಯಾಯದ ಹರಿಕಾರ ಅರಸು: ಸಂಸದ ವಿ.ಶ್ರೀನಿವಾಸಪ್ರಸಾದ್

ನಂಜನಗೂಡು, ಆ.20– ದೂರದೃಷ್ಟಿ ಹೊಂದಿದ್ದ ಡಿ.ದೇವರಾಜ ಅರಸು ಅವರು ಹಲವು ಐತಿಹಾಸಿಕ ನಿರ್ಣಯ ಕೈಗೊಳ್ಳುವ ಮೂಲಕ ಸಾಮಾಜಿಕ ನ್ಯಾಯದ ಹರಿಕಾರರಾಗಿ ಜನಮಾನಸದಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ ಎಂದು ಸಂಸದ ವಿ.ಶ್ರೀನಿವಾಸಪ್ರಸಾದ್ ತಿಳಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಶನಿವಾರ ನಡೆದ ಮಾಜಿ ಸಿಎಂ ಡಿ.ದೇವರಾಜ ಅರಸು ಅವರ 107ನೇ ಜನ್ಮ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನನ್ನ 48 ವರ್ಷಗಳ ಸುದೀರ್ಘ ರಾಜಕೀಯ ಅನುಭವನದಲ್ಲಿ ದೇವರಾಜ ಅರಸು ಅವರಿಗಿದ್ದ ಬದ್ಧತೆ, ದೂರದೃಷ್ಟಿ ಚಿಂತನೆ ನನಗೆ ಆದರ್ಶವಾಗಿದ್ದವು. ಸಮಾಜದ ಕಟ್ಟ ಕಡೆ ವ್ಯಕ್ತಿಯನ್ನು ಚುನಾವಣೆಯಲ್ಲಿ ನಿಲ್ಲಿಸಿ ಗೆಲ್ಲಿಸುವ ಮೂಲಕ ಸಾಮಾಜಿಕ ನ್ಯಾಯ ಕೊಡಿಸಿದ್ದಾರೆ. ಉಳುವವನೇ ಭೂಮಿ ಒಡೆಯ, ತಲೆ ಮೇಲೆ ಮಲ ಹೊರುವ ಪದ್ಧತಿ ನಿಷೇಧ ಹೇರುವ ಮೂಲಕ ತಳ ಸಮುದಾಯ ಜನರ ಜೀವನ ಸುಧಾರಿಸಿದವರು. 8 ವರ್ಷ ಮುಖ್ಯಮಂತ್ರಿಯಾಗಿ ದೇವರಾಜ ಅರಸು ಕೊಟ್ಟ ಜನಪರ ಆಡಳಿತವನ್ನು ಜನತೆ ಎಂದೂ ಮರೆಯಲ್ಲ ಎಂದರು.

ಕೀಟಲೆ ಬುದ್ಧಿ ಬಿಡಿ: ದೇವರಾಜ ಅರಸು ಅವಧಿಯಲ್ಲಿ ಪೌರಾಡಳಿತ ಸಚಿವರಾಗಿದ್ದ ಬಿ.ಬಸವಲಿಂಗಪ್ಪ ಅವರು ಪೌರಕಾರ್ಮಿಕರು ತಲೆ ಮೇಲೆ ಮಲ ಹೊರುವ ಪದ್ಧತಿಗೆ ನಿಷೇಧ ಹೇರಿ 50 ವರ್ಷ ಸಂದಿವೆ. ಈ ಸುವರ್ಣ ಸಂದರ್ಭ ಅರ್ಥಪೂರ್ಣಗೊಳಿಸುವ ಸಲುವಾಗಿ ತಾಲೂಕಿನ ಹುಲ್ಲಹಳ್ಳಿಯಲ್ಲಿ 3 ದಶಕಗಳಿಂದ ಗುಡಿಸಲಿನಲ್ಲಿ ವಾಸವಿದ್ದ ಪೌರ ಕಾರ್ಮಿಕರಿಗೆ ಜಾಗ ಗುರುತಿಸಿ ಅದಕ್ಕೆ ಬಿ.ಬಸವಲಿಂಗಪ್ಪ ಬಡಾವಣೆ ಎಂದು ನಾಮಕರಣ ಮಾಡಿದ ಶಾಸಕ ಬಿ.ಹರ್ಷವರ್ಧನ್ ಅವರ ನಡೆ ಸ್ವಾಗತಿಸುವ ಬದಲು ಅದರಲ್ಲೂ ತಪ್ಪು ಹುಡುಕುವ ಕೀಟಲೆ ಬುದ್ಧಿ ಬಿಡಿ ಎಂದು ದಸಂಸ ಕಾರ್ಯಕರ್ತರನ್ನು ಸಂಸದ ವಿ.ಶ್ರೀನಿವಾಸ್‌ಪ್ರಸಾದ್ ತರಾಟೆಗೆ ತೆಗೆದುಕೊಂಡರು.



ನಂಜನಗೂಡಿನಲ್ಲಿ ನಡೆದ ಡಿ.ದೇವರಾಜ ಅರಸು ಜನ್ಮ ದಿನಾಚರಣೆಯಲ್ಲಿ ಪೌರ ಕಾರ್ಮಿಕರಿಗೆ ಸಂಸದ ವಿ.ಶ್ರೀನಿವಾಸ ಪ್ರಸಾದ್ ನಿವೇಶನದ ಹಕ್ಕುಪತ್ರ ವಿತರಿಸಿದರು. ಶಾಸಕ ಬಿ.ಹರ್ಷವರ್ಧನ್, ಎಂ.ಶಿವಮೂರ್ತಿ, ಶ್ರೀನಿವಾಸ್ ಇದ್ದರು.

ಬಿ.ಬಸವಲಿಂಗಪ್ಪ ಹೆಸರು ನಾಮಕರಣ ಮಾಡಿದ್ದಕ್ಕೆ ಒಂದು ಕೃತಜ್ಞತೆ ಮಾತಿಲ್ಲ. ನಾನು ಸ್ವಂತಕ್ಕೆ ಒಂದು ಮನೆಯನ್ನೂ ಕಟ್ಟಿಸಲಿಲ್ಲ. ಆದರೆ ನಂಜನಗೂಡಿನಲ್ಲಿ ಅಂಬೇಡ್ಕರ್ ಭವನ ಕಟ್ಟಿಸಲು ಪಟ್ಟ ಶ್ರಮ ಅಷ್ಟಿಷ್ಟಲ್ಲ. 4 ಎಕರೆ ಜಾಗದಲ್ಲಿ ಸರ್ವ ಜನಾಂಗಗಳಿಗೂ ಸಮುದಾಯ ಭವನಕ್ಕೆ ನಿವೇಶನ ಹಂಚಿಕೆ ಮಾಡಿದೆ. ಮಿನಿ ವಿಧಾನಸೌಧ, ಪ್ರಥಮ ದರ್ಜೆ ಕಾಲೇಜು, ಬಾಲಕಿಯರ ಪದವಿಪೂರ್ವ ಕಾಲೇಜು, ಅಂಬೇಡ್ಕರ್ ಪ್ರತಿಮೆ ಸೇರಿದಂತೆ ಹಲವು ಅಭಿವೃದ್ಧಿ ಕೆಲಸ ಮಾಡಿದ್ದೇನೆ. ಈ ಬಗ್ಗೆ ಒಮ್ಮೆಯೂ ಒಂದು ಒಳ್ಳೆಯ ಮಾತಿಲ್ಲ. ಉಪ ಚುನಾವಣೆಯಲ್ಲಿ ನಾನು ಸೋತ ಮೇಲೆ ನೀವೇನು ಮಾಡಿದ್ದೀರಿ ಎಂಬುದು ನನಗೆ ಗೊತ್ತಿದೆ. ಅಧಿಕಾರಿಗಳ ಬಳಿ ವಸೂಲಿ ಮಾಡಿ ಜೀವನ ಸಾಗಿಸೋರು ನೀವು. ನಾಚಿಕೆ ಆಗುವುದಿಲ್ಲವೇ ನಿಮಗೆ? ಎಂದು ಪ್ರಶ್ನಿಸಿದರು.

ಮುಂದಿನ ವಾರ ನಾನೇ ಹುಲ್ಲಹಳ್ಳಿ ಪೌರಕಾರ್ಮಿಕ ಬಡಾವಣೆಗೆ ಭೇಟಿ ನೀಡುತ್ತೇನೆ. ಸುಸಜ್ಜಿತ ಬಡಾವಣೆ ನಿರ್ಮಾಣಕ್ಕೆ ಸಂಪೂರ್ಣ ನೆರವು ನೀಡಲಾಗುವುದು. ಪೌರಕಾರ್ಮಿಕ ಸಮುದಾಯ ಭವನಕ್ಕೆ ಸಂಸದರ ನಿಧಿಯಿಂದ 10 ಲಕ್ಷ ಅನುದಾನ ನೀಡಲಾಗುವುದು ಎಂದರು.

ಇದೇ ವೇಳೆ ಕಾರ್ಯಕ್ರಮದಲ್ಲಿ ಹುಲ್ಲಹಳ್ಳಿಯ 19 ಪೌರ ಕಾರ್ಮಿಕರಿಗೆ ನಿವೇಶನ ಹಕ್ಕುಪತ್ರ ವಿತರಿಸಲಾಯಿತು. ಸೂಕ್ತ ದಾಖಲಾತಿ ಇಲ್ಲದ ಉಳಿದ 6 ಜನ ಪೌರಕಾರ್ಮಿಕರಿಗೆ ಮುಂದಿನ ದಿನಗಳಲ್ಲಿ ಹಕ್ಕುಪತ್ರ ವಿತರಿಸುವುದಾಗಿ ಹರ್ಷವರ್ಧನ್ ತಿಳಿಸಿದರು.

> ಜು.26ಕ್ಕೆ ಮಲ ಹೊರುವ ಪದ್ಧತಿ ನಿಷೇಧ ಹೇರಿ 50 ವರ್ಷ ತುಂಬಿದ ಅಂಗವಾಗಿ ಪೌರ ಕಾರ್ಮಿಕರಿಗೆ ಸಾಂಕೇತಿಕವಾಗಿ ಹಕ್ಕುಪತ್ರ ವಿತರಿಸಲಾಗಿತ್ತು. ಐದೇ ದಿನಗಳಲ್ಲಿ ಎಲ್ಲಾ ಆಡಳಿತಾತ್ಮಕ ಕೆಲಸ ಮುಗಿಸಿ ಹಕ್ಕು ಪತ್ರ ಸಿದ್ಧಪಡಿಸಲಾಯಿತು. ಇಡೀ ರಾಜ್ಯದಲ್ಲಿ ಎಲ್ಲೂ ನಿವೇಶನ ಹಕ್ಕುಪತ್ರ ವಿತರಣೆ ಮಾಡುತ್ತಿಲ್ಲ. ಆದರೆ ನನ್ನ ಕ್ಷೇತ್ರದಲ್ಲಿ ಹಕ್ಕುಪತ್ರ ವಿತರಣೆಗೆ ಕ್ರಮವಹಿಸಿರುವುದು ಆರೋಪ ಮಾಡುವವರ ಗಮನಕ್ಕಿರಲಿ. ಶಾಸಕರು ಗೂಂಡಾಗಿರಿ ಮಾಡುತ್ತಾರೆ ಎಂದು ಆರೋಪಿಸುತ್ತಾರೆ. ಅಭಿವೃದ್ಧಿಗಾಗಿ ಒತ್ತಡ ತಂದು ಕ್ಷೇತ್ರ ಅಭಿವೃದ್ಧಿ ಮಾಡುತ್ತಿರುವುದನ್ನೇ ಗೂಂಡಾಗಿರಿ ಎಂದರೆ ಏನರ್ಥ. ನಂಜನಗೂಡು ಶಾಂತಿಯ ಗೂಡು ಎಂಬುದು ನಿಮಗೆ ತಿಳಿದಿರಲಿ. ಕಾಂಗ್ರೆಸ್‌ನಲ್ಲಿ ದಲಿತ ನಾಯಕರಾದ ಬಿ.ಬಸವಲಿಂಗಪ್ಪ, ವಿ.ಶ್ರೀನಿವಾಸಪ್ರಸಾದ್, ಮಲ್ಲಿಕಾರ್ಜುನ ಖರ್ಗೆ, ಡಾ.ಜಿ.ಪರಮೇಶ್ವರ್ ಅವರನ್ನು ಹೇಗೆ ನಡೆಸಿಕೊಂಡಿದೆ ಎಂಬುದು ಎಲ್ಲರಿಗೂ ಗೊತ್ತಿದೆ.
>
> -ಬಿ.ಹರ್ಷವರ್ಧನ್, ಶಾಸಕ.

ಈ ವೇಳೆ ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ, ನಗರಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ, ಉಪಾಧ್ಯಕ್ಷೆ ನಾಗಮಣಿ, ಸ್ಥಾಯಿ ಸಮಿತಿ ಅಧ್ಯಕ್ಷೆ ಮೀನಾಕ್ಷಿ, ನಗರಸಭಾ ಸದಸ್ಯರಾದ ಮಹದೇವ ಪ್ರಸಾದ್, ತಹಸೀಲ್ದಾರ್ ಎಂ.ಶಿವಮೂರ್ತಿ, ತಾಪಂ ಇಓ ಶ್ರೀನಿವಾಸ್, ನಗರಸಭೆ ಪೌರಾಯುಕ್ತ ಎಂ.ರಾಜಣ್ಣ ಸೇರಿದಂತೆ ಇತರರಿದ್ದರು.

ಡಿ.ದೇವರಾಜ ಅರಸು ಕೊಡುಗೆ ಅವಿಸ್ಮರಣೀಯ



ತಿ.ನರಸೀಪುರ, ಆ.20– ರಾಜ್ಯಕ್ಕೆ ಡಿ.ದೇವರಾಜ ಅರಸು ಅವರ ಕೊಡುಗೆ ಅವಿಸ್ಮರಣೀಯ ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ಬಣ್ಣಿಸಿದರು.

ತಾಲೂಕು ಆಡಳಿತ, ತಾಪಂ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಂಯುಕ್ತಾಶ್ರಯದಲ್ಲಿ ಪಟ್ಟಣದ ತಾಪಂ ಸಭಾಂಗಣದಲ್ಲಿ ನಡೆದ ಡಿ.ದೇವರಾಜ ಅರಸು ಅವರ 107ನೇ ಜನ್ಮ ದಿನಾಚರಣೆಯ ಅಧ್ಯಕ್ಷತೆ ವಹಿಸಿ, ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು. ಇದೇ ವೇಳೆ ಪಟ್ಟಣದಲ್ಲಿ ಡಿ.ದೇವರಾಜ ಅರಸು ಭವನ ನಿರ್ಮಾಣ ಮಾಡಲು ಅಧಿಕಾರಿಗಳು ಸೂಕ್ತ ನಿವೇಶನ ಗುರುತು ಮಾಡಬೇಕೆಂದು ಶಾಸಕರು ಸೂಚನೆ ನೀಡಿದರು. ಈ ವೇಳೆ ಪುರಸಭಾಧ್ಯಕ್ಷ ಎಸ್.ಮದನ್‌ರಾಜ್, ತಹಶೀಲ್ದಾರ್ ಸಿ.ಜಿ.ಗೀತಾ, ಪ್ರಭುಸ್ವಾಮಿ ಮುಖ್ಯ ಭಾಷಣ ಮಾಡಿದರು. ಜಿಪಂ ಮಾಜಿ ಸದಸ್ಯ ಜೈಪಾಲ್ ಭರಣಿ, ತಾಪಂ ಆಡಳಿತಾಧಿಕಾರಿ ಬಿ.ಎಂ.ಸವಿತಾ, ಇಓ ಸಿ.ಕೃಷ್ಣ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ವಿಶ್ವನಾಥ್, ನಿಲಯ ಮೇಲ್ವಿಚಾರಕರಾದ ವೆಂಕಟಶೆಟ್ಟಿ, ಅಶೋಕ್, ರಾಜಮ್ಮ, ವಿಸ್ತರಣಾಧಿಕಾರಿ ರಾಜಣ್ಣ, ತಿವಾರಿ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಶಿವಶಂಕರ್, ಜಿಲ್ಲಾ ಗ್ರಾಮಾಂತರ ವೈದ್ಯಕೀಯ ವಿಭಾಗದ ಜಿಲ್ಲಾಧ್ಯಕ್ಷ ಡಾ.ಪ್ರದೀಪ್, ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಮಹದೇವಯ್ಯ, ಬಾಬು ಜಗಜೀವನ ರಾಂ ಸಂಘದ ಅಧ್ಯಕ್ಷ ಶಂಕರ್, ಬಿಇಓ ಮರಿಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷ ಶಂಭುದೇವನಪುರ ರಮೇಶ್ ಮತ್ತಿತರರಿದ್ದರು.

ಬಡವರಿಗೆ ಭೂ ಒಡೆತನ ನೀಡಿದ ಏಕೈಕ ಮುಖ್ಯಮಂತ್ರಿ ಅರಸು

ಎಂಎಲ್‌ಸಿ ಹೆಚ್.ವಿಶ್ವನಾಥ್ ಬಣ್ಣನೆ

ಹನಗೋಡು, ಆ.20– ಡಿ.ದೇವರಾಜ ಅರಸು ತಮ್ಮ ಅಧಿಕಾರವಧಿಯಲ್ಲಿ ಭೂ ರಹಿತರಿಗೆ 7 ಲಕ್ಷ ಹೆಕ್ಟೇರ್ ಭೂ ಒಡೆತನ ನೀಡುವ ಮೂಲಕ ಇಂದಿಗೂ ಜನಮಾನಸದಲ್ಲಿ ಪ್ರಾತಃ ಸ್ಮರಣೀಯರಾಗಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಬಣ್ಣಿಸಿದರು.

ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ ಜನ್ಮ ದಿನಾಚರಣೆ ಅಂಗವಾಗಿ ಕಲ್ಲಹಳ್ಳಿಯಲ್ಲಿರುವ ಅವರ ಸಮಾಧಿಗೆ ವಿಶೇಷ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಇಂದಿರಾ ಗಾಂಧಿಯವರ ಆಡಳಿತಾವಧಿಯಲ್ಲಿ 20 ಅಂಶಗಳ ಕಾರ್ಯಕ್ರಮವನ್ನು ಯಥಾವತ್ತಾಗಿ ಜಾರಿಗೆ ತಂದ ಹಾಗೂ ಬಡವರಿಗೆ ಭೂ ಒಡೆತನ ನೀಡಿದ ಏಕೈಕ ಮುಖ್ಯಮಂತ್ರಿ ದೇವರಾಜ ಅರಸು. ಜೀತ ಪದ್ಧತಿ ರದ್ದು, ಸಾಲದಿಂದ ಬಿಡುಗಡೆ, ಬಡವರಿಗೆ ಸೂರು, ನೀರು, ಶಿಕ್ಷಣ, ಆರೋಗ್ಯ ಸೇರಿದಂತೆ ಅನೇಕ ಕಲ್ಯಾಣ ಕಾರ್ಯಕ್ರಮ ನೀಡಿ ಗೌರವಯುತ ಬದುಕು ನಡೆಸಲು ಶ್ರಮಿಸಿರುವ ಅರಸರು ಗತಿಸಿ 37 ವರ್ಷಗಳಾದರೂ ಅವರ ಕ್ರಾಂತಿಕಾರಕ ಯೋಜನೆಗಳು ಎಂದೆಂದಿಗೂ ಅಮರ ಎಂದರು.

ತಮ್ಮೊಡನೆ ಸಣ್ಣಪುಟ್ಟ ಜನಾಂಗ, ಹಿಂದುಳಿದವರು, ಶೋಷಿತರು, ದಲಿತರಿಗೆ ಮೇಲ್ವರ್ಗದವರ ವಿಶ್ವಾಸಗಳಿಸಿ ಅಧಿಕಾರ ನೀಡಿದ ಪುಣ್ಯಾತ್ಮ. ಅದರಲ್ಲಿ ನಾನು, ರಮೇಶ್ ಕುಮಾರ್, ಧರ್ಮ ಸಿಂಗ್, ಮಲ್ಲಿಕಾರ್ಜುನ ಖರ್ಗೆ, ವೀರಪ್ಪ ಮೊಯಿಲಿ ಸೇರಿದಂತೆ ಅನೇಕರು ಅರಸರ ಪ್ರಭಾವಳಿಯಲ್ಲಿ ಬೆಳೆದಿದ್ದೇವೆ. 1978ರಲ್ಲಿ ತಮ್ಮನ್ನು ಮನೆಗೆ ಕರೆಸಿ ಟಿಕೆಟ್ ನೀಡಿದ್ದಲ್ಲದೇ, 10 ಸಾವಿರ ರೂ. ಚುನಾವಣಾ ವೆಚ್ಚ ನೀಡಿದ ಪುಣ್ಯಾತ್ಮನನ್ನು ಸ್ಮರಿಸಿ, ಅವರ ಗರಡಿಯಲ್ಲಿ ಬೆಳೆದ ನಾನು ಅವರ ಹೆಸರಿನಲ್ಲಿ ಅರಸು ಪ್ರಶಸ್ತಿಗೆ ಆಯ್ಕೆ ಆಗಿರುವುದು ತುಂಬಾ ಸಂತೋಷ ಎಂದರು.



ಕಲ್ಲಹಳ್ಳಿಯಲ್ಲಿ ಮಾತನಾಡಿದ ಶಾಸಕ ಮಂಜುನಾಥ್, ಎಲ್ಲಾ ರಾಜಕೀಯ ನಾಯಕರು ಅರಸು ಅವರ ಆದರ್ಶ ಮೈಗೂಡಿಸಿ ಕೊಂಡು ಉತ್ತಮ ಸೇವೆ ಸಲ್ಲಿಸಬೇಕು ಎಂದರು. ಇದೇ ವೇಳೆ ಕಲ್ಲಹಳ್ಳಿ ಗ್ರಾಮಸ್ಥರು ನೆನೆಗುದಿಗೆ ಬಿದ್ದಿರುವ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸುವಂತೆ ಮನವಿ ಮಾಡಿದರು. ಈ ವೇಳೆ ನಗರಸಭಾಧ್ಯಕ್ಷೆ ಗೀತಾ, ತಹಸೀಲ್ದಾರ್ ಅಶೋಕ್, ಇಓ ಮನು, ಹುಡಾ ಅಧ್ಯಕ್ಷ ಗಣೇಶ ಕುಮಾರ ಸ್ವಾಮಿ, ನಾಗರಾಜ್ ಮಲ್ಲಾಡಿ, ಕುನ್ನೇಗೌಡ ಸೇರಿದಂತೆ ಅನೇಕರಿದ್ದರು.

ರಾಜ್ಯ ಕಂಡ ಅಪರೂಪದ ರಾಜಕಾರಣಿ ಅರಸು



ಹೆಚ್.ಡಿ.ಕೋಟೆ, ಆ.20– ರಾಜ್ಯ ಕಂಡ ಅಪರೂಪದ ರಾಜಕಾರಣಿ ಡಿ.ದೇವರಾಜ ಅರಸು ಎಂದು ತಹಸೀಲ್ದಾರ್ ರತ್ನಾಂಬಿಕಾ ತಿಳಿಸಿದರು.

ಪಟ್ಟಣದ ತಾಲೂಕು ಆಡಳಿತಸೌಧದ ಆವರಣದಲ್ಲಿ ತಾಲೂಕು ಆಡಳಿತ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಹಮ್ಮಿಕೊಂಡಿದ್ದ ಡಿ.ದೇವರಾಜು ಅರಸು ಅವರ 107ನೇ ಜನ್ಮ ದಿನಾಚರಣೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರಾಜ್ಯದ 8ನೇ ಮುಖ್ಯಮಂತ್ರಿಯಾಗಿ ಕರ್ನಾಟಕದಲ್ಲಿ 'ಅರಸು ಯುಗ' ಸ್ಥಾಪಿಸಿದ ಕೀರ್ತಿ ಅರಸು ಅವರಿಗೆ ಸಲ್ಲುತ್ತದೆ ಎಂದರು.

ಪಟ್ಟಣದ ಬಾಲಕಿಯರ ಪದವಿಪೂರ್ವ ಕಾಲೇಜು ಉಪನ್ಯಾಸಕ ಶಿವಪ್ಪ ಮುಖ್ಯ ಭಾಷಣ ಮಾಡಿದರು. ಕಾರ್ಯಕ್ರಮದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಶಶಿಕಲಾ, ಅರಸು ಮಂಡಳಿ ಅಧ್ಯಕ್ಷ ದೀಪಕ್ ಅರಸ್, ನಿರಂಜನ್ ಅರಸ್, ಲಕ್ಷ್ಮಿಕಾಂತ್ ಅರಸ್, ಜಗದೀಶ್ ಅರಸ್, ಬಸವರಾಜ್, ದೇವರಾಜ್, ನಾಗರಾಜು, ಕೆಎಸ್‌ಆರ್‌ಟಿಸಿ ತ್ಯಾಗರಾಜು, ರೇಷ್ಮೆ ಇಲಾಖೆ ಮಂಜು, ಕೃಷಿ ಅಧಿಕಾರಿ ರಂಗಸ್ವಾಮಿ, ಪುರಸಭಾ ಮುಖ್ಯಾಧಿಕಾರಿ ಸುರೇಶ್, ಮೋಹನ್ ಇದ್ದರು.

ಹುಣಸೂರಲ್ಲಿ ಅರಸು ಪುತ್ಥಳಿಗೆ ಮಾಲಾರ್ಪಣೆ



ಹುಣಸೂರು, ಆ.20– ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ ಅರಸು ಅವರ 107ನೇ ಜನ್ಮದಿನದ ಪ್ರಯುಕ್ತ ನಗರದ ಎಪಿಎಂಸಿ ಬಳಿಯ ಅರಸು ಪುತ್ಥಳಿಗೆ ಶಾಸಕರಾದ ಹೆಚ್.ಪಿ.ಮಂಜುನಾಥ್, ಎ.ಹೆಚ್.ವಿಶ್ವನಾಥ್ ಮಾಲಾರ್ಪಣೆ ಮಾಡಿದರು.

ಈ ವೇಳೆ ಎಸಿ ವರ್ಣಿತ್ ನೇಗಿ, ಬಿಎಂಸಿ ಇಲಾಖೆಯ ಬಿಂದು, ತಹಸೀಲ್ದಾರ್ ಡಾ.ಅಶೋಕ್, ಇಓ ಮನು, ಪೌರಾಯುಕ್ತ ರವಿಕುಮಾರ್, ಡಿವೈಎಸ್ಪಿ ರವಿಪ್ರಸಾದ್, ನಗರಸಭಾಧ್ಯಕ್ಷೆ ಗೀತಾ, ಉಪಾಧ್ಯಕ್ಷ ಡಿ.ಆಶಾ ನಾಯಕ್, ಸ್ಥಾಯಿ ಸಮಿತಿ ಅಧ್ಯಕ್ಷೆ ಶ್ವೇತಾ, ಸದಸ್ಯರಾದ ರಾಧಾ, ಕೃಷ್ಣರಾಜಗುಪ್ತ ಗಣೇಶ, ಹರೀಶ, ನಾಗರಾಜ್ ಮಲ್ಲಾಡಿ, ನಿಂಗರಾಜ ಮಲ್ಲಾಡಿ, ಬಸಲಿಂಗಯ್ಯ, ರಾಜು ಇನ್ನಿತರರಿದ್ದರು.



ಪಿರಿಯಾಪಟ್ಟಣ ತಾಲೂಕಿನ ಬೆಟ್ಟದತುಂಗ ಗ್ರಾಮದಲ್ಲಿ ದಿವಂಗತ ಡಿ.ದೇವರಾಜ ಅರಸು ಅವರ ಪ್ರತಿಮೆಗೆ ಹಿಂದುಳಿದ ವರ್ಗಗಳ ಇಲಾಖೆ ಅಧಿಕಾರಿ ಪ್ರೇಮ್ ಕುಮಾರ್ ಮಾಲಾರ್ಪಣೆ ಮಾಡಿದರು. ಈ ವೇಳೆ ಇಲಾಖೆ ಅಧಿಕಾರಿ ಕೃಷ್ಣಪ್ಪ, ಪತ್ರಕರ್ತ ಶಿವದೇವ್ ಇನ್ನಿತರರಿದ್ದರು.

ಪುರಸಭೆ ವ್ಯಾಪ್ತಿಯ ಪ್ರಮುಖ ರಸ್ತೆಗಳನ್ನು ದುರಸ್ತಿಗೊಳಿಸದಿದ್ದರೆ

ನಾಗರಿಕ ಸೇವಾ ಸಮಿತಿಯಿಂದ ಪ್ರತಿಭಟನೆ: ಎಚ್ಚರಿಕೆ

ತಿ.ನರಸೀಪುರ, ಆ.20– ಪುರಸಭೆ ವ್ಯಾಪ್ತಿಯ ಪ್ರಮುಖ ರಸ್ತೆಗಳನ್ನು ಶೀಘ್ರ ದುರಸ್ತಿಗೊಳಿಸದಿದ್ದರೆ ನಾಗರಿಕ ಸೇವಾ ಸಮಿತಿಯಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಸಮಿತಿ ಅಧ್ಯಕ್ಷ ಹೆಚ್.ಆರೀಫ್ ಎಚ್ಚರಿಕೆ ನೀಡಿದರು.



ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕು ಕಚೇರಿಯಿಂದ ಚಿಕ್ಕಮ್ಮ ತಾಯಿ ಯಾತ್ರಿ ಭವನಕ್ಕೆ ಸೇರುವ ರಸ್ತೆ ಲಿಂಕ್ ರಸ್ತೆ ಖಾಸಗಿ ಬಸ್ ನಿಲ್ದಾಣದಿಂದ ಜೆಎಸ್‌ಎಸ್ ಚೌಲ್ಟ್ರಿ ಮೂಲಕ ರಾಷ್ಟ್ರೀಯ ಹೆದ್ದಾರಿಗೆ ಸೇರುವ ರಸ್ತೆ ಹಾಗೂ ವಾಲ್ಮೀಕಿ ಶಾಲೆಯಿಂದ ಮಾರುಕಟ್ಟೆ ಮಾರ್ಗವಾಗಿ ಸರ್ಕಾರಿ ಬಸ್ ನಿಲ್ದಾಣದ ಬಳಿ ಎನ್.ಎಚ್. 212ಕ್ಕೆ ಸೇರುವ ರಸ್ತೆಗಳಲ್ಲಿ ದೊಡ್ಡ ಕಂದಕ ನಿರ್ಮಾಣವಾಗಿದ್ದು, ಸಾರ್ವಜನಿಕರು ತಿರುಗಾಡದಷ್ಟು ಹಾಳಾಗಿದೆ ಅಲ್ಲದೇ ಪಟ್ಟಣದಲ್ಲಿ 24X7 ಕುಡಿಯುವ ನೀರು ಪೂರೈಸುವ ಸಂಬಂಧ ನಡೆಯುತ್ತಿರುವ ಕಾಮಗಾರಿಗಳು ಅವೈಜ್ಞಾನಿಕತೆಯಿಂದ ಕೂಡಿದೆ. ಕಾಮಗಾರಿ ನೆಪದಲ್ಲಿ ಎಲ್ಲೆಂದರಲ್ಲಿ ರಸ್ತೆ ಅಗೆದು ಕಾಮಗಾರಿ ಮುಗಿದ ನಂತರ ಹಳ್ಳಗಳನ್ನು ಮುಚ್ಚದೇ ಹಾಗೇ ಬಿಟ್ಟಿದ್ದಾರೆ. ಇದರಿಂದ ವಾಹನ ಸವಾರರು ಆಯತಪ್ಪಿ ಬಿದ್ದು ಗಾಯಗೊಂಡಿದ್ದಾರೆ. ರಸ್ತೆ ಅಗೆದ ನಂತರ ಮತ್ತೆ ಹಳ್ಳ ಮುಚ್ಚಬೇಕೆಂಬ ನಿಯಮವಿದ್ದರೂ, ಸಮರ್ಪಕ ಕೆಲಸ ಮಾಡಲಾಗುತ್ತಿಲ್ಲ. ಹಾಗಾಗಿ ಪುರಸಭೆ ಹಾಗೂ ಶಾಸಕರು ಈ ಬಗ್ಗೆ ಗಮನ ಹರಿಸದೇ ನಿರ್ಲಕ್ಷ್ಯ ತೋರಿದ್ದು ಮುಂದಿನ 15 ದಿನದೊಳಗೆ ರಸ್ತೆ ದುರಸ್ತಿ ಮಾಡದಿದ್ದಲ್ಲಿ ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.

ಸಂಘದ ಗೌರವಾಧ್ಯಕ್ಷ ಪಿ.ಪುಟ್ಟರಾಜು ಮಾತನಾಡಿ, ನಾಳೆ ಮುಖ್ಯಮಂತ್ರಿಗಳು ಮೂಗೂರು ಗ್ರಾಮಕ್ಕೆ ಬರುತ್ತಿದ್ದು, ಅವರು ಬಂದು ಹೋಗುವ ರಸ್ತೆಯಲ್ಲಿ ನಿಂತು ಹದಗೆಟ್ಟ ರಸ್ತೆ ಬಗ್ಗೆ ಗಮನ ಸೆಳೆಯಲಾಗುತ್ತದೆ ಎಂದರು. ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಎನ್. ಪ್ರಭುಸ್ವಾಮಿ ಮಾತನಾಡಿ ದರು. ಸಂಘದ ಸಂಘಟನಾ ಕಾರ್ಯದರ್ಶಿ ಬಸವರಾಜು, ಸತೀಶ್, ನಿರ್ದೇಶಕರಾದ ಮೋಹನ್, ಎಂ.ಎಸ್.ಮಂಜುನಾಥ್ ಸುದ್ದಿಗೋಷ್ಠಿಯಲ್ಲಿದ್ದರು.



ಸರಗೂರು ಪಟ್ಟಣದ ಆಟೋ ಚಾಲಕರ ಸಂಘದಿಂದ 75ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಅದ್ಧೂರಿಯಾಗಿ ಆಚರಿಸಲಾಯಿತು. ಈ ವೇಳೆ ಸಂಘ ಅಧ್ಯಕ್ಷ ಬೀರ್ವಾಳ್ ಚಿಕ್ಕಣ್ಣ, ಗೌರವಾಧ್ಯಕ್ಷ ಎಸ್.ಎಚ್.ಲಿಂಗರಾಜು, ಪ್ರಧಾನ ಕಾರ್ಯದರ್ಶಿ ಚಾಮರಾಜು, ವಿಜಯಕುಮಾರ್, ರವಿ, ಎಸ್.ಆರ್.ಜಗದೀಶ್, ಎಸ್.ಕೆ.ಮುಕುಂದ ರಾಜು, ಕಾಳಪ್ಪ ನಾಗರಾಜು, ಚೆಟ್ಟಿನಾಯಕ, ಸಿದ್ದಪ್ಪ ಮಾದಪ್ಪ ರವಿ, ಕುಮಾರ, ವಾಹನ ಚಾಲಕರು ಹಾಜರಿದ್ದರು.

ಮಾಜಿ ಸೈನಿಕರ ಸಂಘದಿಂದ ಸರ್ಕಾರಿ ಶಾಲೆಗೆ ಕುಕ್ಕರ್ ವಿತರಣೆ

ಮೈಸೂರು, ಆ.20– ಅಜಾದಿ ಕಾ ಅಮೃತ ಮಹೋತ್ಸವ ಅಭಿಯಾನದ ಅಂಗವಾಗಿ ಮಾಜಿ ಸೈನಿಕರ ಸಂಘದ ವತಿಯಿಂದ ಬಿಸಿಯೂಟ ತಯಾರಿಕೆಗೆ ನೀಡಿರುವ ಕುಕ್ಕರನ್ನು ಶಾಸಕ ಜಿ ಟಿ ದೇವೇಗೌಡರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿ ಮಲ್ಲೇಶ್ವರಿ ಅವರು, ಮೈಸೂರು ತಾಲ್ಲೂಕಿನ ಹುಯಿಲಾಳು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಯಾಚೇಗೌಡನಹಳ್ಳಿ ಕ್ರೀಡಾಕೂಟದಲ್ಲಿ ಹಸ್ತಾಂತರಿಸಿದರು.



ಈ ಹಿಂದೆ ಮಾಜಿ ಸೈನಿಕರ ಸಂಘ ವತಿಯಿಂದ ಬಸವನಪುರ, ಹಾರೋಹಳ್ಳಿ, ಕಾಡನಹಳ್ಳಿ, ಡಿ.ಸಾಲುಂಡಿ, ಉದ್ಬೂರು, ಮೂಗೂರು, ಹಡಜನ, ತಳೂರು, ಹಳೆಕಾಮನ ಕೊಪ್ಪಲು, ಗುಗ್ರಾಲ್ ಛತ್ರ, ಪುಟ್ಟೇಗೌಡ ಹುಂಡಿ, ಕೀಳನಪುರ, ವರುಣಾ, ಗೋಪಾಲಪುರ, ಇಲವಾಲ, ಹುಯಿಲ್ಯಾಳು, ಎಸ್.ಕಲ್ಲಳ್ಳಿ, ಮೆಲ್ಲಹಳ್ಳಿ ಸೇರಿದಂತೆ 50–60 ಹಿರಿಯ ಪ್ರಾಥಮಿಕ ಸರ್ಕಾರಿ ಶಾಲೆಗಳಿಗೆ ಕುಕ್ಕರ್, ಗ್ರೀನ್ ಬೋರ್ಡ್, ಸೌಂಡ್ ಸಿಸ್ಟಂಗಳನ್ನು ವಿತರಿಸಿರುವುದನ್ನು ಸ್ಮರಿಸಬಹುದು.

ಈ ವೇಳೆ ತಾಲ್ಲೂಕು ದೈಹಿಕ ಪರಿವೀಕ್ಷಕರಾದ ಗಣೇಶ್ ತಾಲ್ಲೂಕು ಶಿಕ್ಷಕರ ಸಂಘದ ಅಧ್ಯಕ್ಷರಾದ ಸತೀಶ್, ಅಂತರರಾಷ್ಟ್ರೀಯ ಕಬ್ಬಡಿ ಆಟಗಾರ ರಕ್ಷಿತ್ ಪೂಜಾರ್, ರಾಷ್ಟ್ರೀಯ ಕಬ್ಬಡಿ ಆಟಗಾರ ರಾಘವನ್, ಸಿಆರ್‌ಪಿ ಶೋಭ ರಾಣಿ, ರಂಗರಾಜು ಸಹ ಶಿಕ್ಷರಾದ ಗಣೇಶ್, ಸಿ.ಕೆ.ತುಳಸಿ, ಸತೀಶ್ ಹಾಗೂ ಇತರೆ ಸಿಬ್ಬಂದಿಗಳು ಹಾಜರಿದ್ದರು.

ದೇಶ ಸ್ವಾವಲಂಬಿಯಾಗಲು ಕಾಂಗ್ರೆಸ್ ಕೊಡುಗೆ ಅಪಾರ: ಆರ್.ಧ್ರುವನಾರಾಯಣ್



ಮಲ್ಕುಂಡಿ, ಆ.20– ದೇಶ ಸ್ವಾವಲಂಬಿ ರಾಷ್ಟ್ರವಾಗಲು ಕಾಂಗ್ರೆಸ್ ಕೊಡುಗೆ ಅಪಾರ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ತಿಳಿಸಿದರು.

ಇಲ್ಲಿಗೆ ಸಮೀಪದ ಹಗಿನವಾಳು, ಹಲ್ಲರೆ, ಮಲ್ಕುಂಡಿ, ಹುರ, ಹಾಡ್ಯ ಗ್ರಾಮಗಳಲ್ಲಿ 75ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಪಾದಯಾತ್ರೆಗೆ ಚಾಲನೆ ನೀಡಿ ಮಾತನಾಡಿದ ಅವರು, ಕಾಂಗ್ರೆಸ್ ಆಡಳಿತಾವಧಿಯಲ್ಲಿ ಜನಪರ ಆಡಳಿತದ ಮೂಲಕ ರಾಜ್ಯದ ಎಲ್ಲಾ ವರ್ಗದ ಜನರ ಅಭಿವೃದ್ಧಿಗೆ ಒತ್ತು ನೀಡಲಾಗಿತ್ತು. ದೇಶದ ಪ್ರಧಾನಿಯಾಗಿದ್ದ ರಾಜೀವ್ ಗಾಂಧಿ ಮಾಹಿತಿ ತಂತ್ರಜ್ಞಾನವನ್ನು ಜಾರಿಗೆ ತಂದರು. ಅಲ್ಲದೇ ಕಾಂಗ್ರೆಸ್ ಸರ್ಕಾರ ನರೇಗಾ ಯೋಜನೆಯಡಿ ಉದ್ಯೋಗದ ಭರವಸೆ ನೀಡಿದ್ದರಿಂದ ಗ್ರಾಮೀಣ ಜನರಿಗೆ ಅನುಕೂಲವಾಯಿತು. ಪ್ರಸ್ತುತ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಈ ಯೋಜನೆಗೆ ಸರಿಯಾಗಿ ಹಣ ಬಿಡುಗಡೆ ಮಾಡುತ್ತಿಲ್ಲ. ರಾಜ್ಯ ಬಿಜೆಪಿ ಸರ್ಕಾರ ಭ್ರಷ್ಟಾಚಾರ ಹಾಗೂ ಹಗರಣಗಳಲ್ಲೇ ಮುಳುಗಿದ್ದು, ಅಭಿವೃದ್ಧಿ ಕಾರ್ಯ ಮಾಡದೇ ಕಾಲಹರಣ ಮಾಡುತ್ತಿದೆ. ಇಂತಹ ಸರ್ಕಾರವನ್ನು ಕಿತ್ತೊಗೆಯಬೇಕು ಎಂದರು. ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ.ಮಹೇಶ್, ಜಿಪಂ ಮಾಜಿ ಸದಸ್ಯ ಕೆ.ಮಾರುತಿ, ದೊರೆಸ್ವಾಮಿ ನಾಯಕ, ಶಿವಪ್ಪದೇವರು, ಸಿ.ಎಂ.ಶಂಕರ್ ಸೇರಿದಂತೆ ಹಲವರಿದ್ದರು.



ಬನ್ನೂರು ಸಮೀಪದ ಕೊಡಗಳ್ಳಿ ಗ್ರಾಪಂನಲ್ಲಿ 75ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಅಧ್ಯಕ್ಷ ಧನಂಜಯ ಪಾಪಣ್ಣ ಧ್ವಜಾರೋಹಣ ನೆರವೇರಿಸಿದರು.

ಹೊಸಬ ಮಹೇಂದ್ರನೂ ಭಾರ ಹೊರುವಲ್ಲಿ ಭಲೆ!



ಮೈಸೂರು,ಆ.20(ಎಂಟಿವೈ)– ಇದೇ ಮೊದಲ ಬಾರಿ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಆಗಮಿಸಿರುವ ಮಹೇಂದ್ರ(ಆನೆ) ಮೊದಲಿಗೆ 550 ಕೆಜಿ ಭಾರ ಹೊತ್ತು ಜಂಬೂಸವಾರಿ ಮಾರ್ಗದಲ್ಲಿ ಸರಾಗವಾಗಿ ಹೆಜ್ಜೆ ಹಾಕಿ ಭವಿಷ್ಯದ ಅಂಬಾರಿ ಆನೆಯಾಗುವ ಭರವಸೆ ಮೂಡಿಸಿದ್ದಾನೆ.

ಮತ್ತಿಗೂಡು ಆನೆ ಕ್ಯಾಂಪ್‌ನಿಂದ ದಸರಾ ಗಜಪಡೆಯ ಮೊದಲ ತಂಡದಲ್ಲಿ ಪಾಲ್ಗೊಂಡಿರುವ ಹೊಸ ಆನೆಯಾಗಿರುವ 39 ವರ್ಷದ ಮಹೇಂದ್ರನಿಗೆ ಅರಮನೆ ಕೋಡಿ ಸೋಮೇಶ್ವರದ ದೇವಾಲಯದ ಆವರಣದಲ್ಲಿ ಇಂದು ಬೆಳಗ್ಗೆ 7.45ರಲ್ಲಿ 250 ಕೆ.ಜಿ. ತೂಕದ ಗಾದಿ ಮತ್ತು ನಮ್ದಾವನ್ನು ಕಟ್ಟಿ ಅದರ ಮೇಲೆ ತೊಟ್ಟಿಲು ಇಟ್ಟು 300 ಕೆ.ಜಿ. ತೂಕದ ಮರಳು ಮೂಟೆಯನ್ನು ಇರಿಸಿ ತಾಲೀಮಿಗೆ ಕರೆದೊಯ್ಯಲಾಯಿತು.

ಒಟ್ಟು 550 ಕೆ.ಜಿ. ಭಾರ ಹೊತ್ತಿದ್ದ ಮಹೇಂದ್ರ, ವಾಹನಗಳ ಸಂಚಾರದ ನಡುವೆಯೂ ಕೆ.ಆರ್.ವೃತ್ತ, ಸಯ್ಯಾಜಿ ರಾವ್ ರಸ್ತೆ, ಆರ್‌ಎಂಸಿ ವೃತ್ತ, ಹೈವೇ ವೃತ್ತದ ಮೂಲಕ ಬನ್ನಿಮಂಟಪದ ಪಂಜಿನ ಕವಾಯಿತು ಮೈದಾನ–5 ಕಿ.ಮೀ. ಅಂತರವನ್ನು 1.15 ಗಂಟೆಯಲ್ಲೇ ತಲುಪುವ ಮೂಲಕ ಅಧಿಕಾರಿಗಳಲ್ಲಿ ಭರವಸೆ ಮೂಡಿಸಿತು.

> “ಇದೇ ಮೊದಲ ಬಾರಿಗೆ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿರುವ ಮಹೇಂದ್ರನಿಗೂ ಭಾರ ಹೊರಿಸುವ ತಾಲೀಮು ನಡೆಸಲಾಗಿದೆ. 550 ಕೆಜಿ ಭಾರ ಹೊತ್ತಿದ್ದ ಮಹೇಂದ್ರ ರಸ್ತೆಯಲ್ಲಿ ಸಾಗುವ ವೇಳೆ ವಾಹನಗಳ ಶಬ್ದಕ್ಕೆ ಹೆದರದೇ ಭರವಸೆ ಮೂಡಿಸಿತು. ಸಾಮಾನ್ಯವಾಗಿ ಹೊಸದಾಗಿ ಬರುವ ಆನೆಗಳು ವಾಹನಗಳ ಶಬ್ದ ಹಾಗೂ ನಗರದ ವಾತಾವರಣ ಕಂಡು ಹಿಂದೇಟು ಹಾಕುತ್ತವೆ. ಆದರೆ ಮಹೇಂದ್ರ ಮಾತ್ರ ಅಳುಕಿಲ್ಲದೇ ಸಾಗುವ ಮೂಲಕ ಗಮನ ಸೆಳೆಯಿತು.
> –ಡಾ.ವಿ.ಕರಿಕಾಳನ್, ಡಿಸಿಎಫ್

ರಾಮನಗರದಲ್ಲಿ ಪುಂಡಾಟಿಕೆ ಮೆರೆದು ನಾಲ್ಕು ವರ್ಷದ ಹಿಂದಷ್ಟೇ ಸೆರೆ ಸಿಕ್ಕಿತ್ತು. ಪ್ರಸ್ತುತ ಮತ್ತಿಗೂಡು ಆನೆ ಕ್ಯಾಂಪ್‌ನಲ್ಲಿ ಆಶ್ರಯ ಪಡೆದಿರುವ ಮಹೇಂದ್ರನಿಗೆ ಮಲ್ಲಿಕಾರ್ಜುನ ಮತ್ತು ರಾಜಣ್ಣ ಕಾವಾಡಿಗಳಾಗಿ ಪಾಲನೆಯಲ್ಲಿ ತೊಡಗಿದ್ದಾರೆ. 2.74 ಮೀ. ಎತ್ತರ, 3.25 ಮೀ. ಶರೀರದ ಉದ್ದ ಹೊಂದಿರುವ ಮಹೇಂದ್ರ, 4,260 ಕೆ.ಜಿ. ತೂಕವಿದ್ದಾನೆ.

ಚಿರತೆ ಹಲ್ಲು, ಉಗುರು ಮಾರಾಟ ಯತ್ನ: ತಮಿಳುನಾಡಿನ ಮೂವರನ್ನು ಬಂಧಿಸಿದ ಮೈಸೂರು ಅರಣ್ಯ ಸಂಚಾರಿ ದಳ



ಮೈಸೂರು, ಆ.20(ಎಸ್‌ಬಿಡಿ)– ಚಿರತೆ ಹಲ್ಲು ಹಾಗೂ ಉಗುರುಗಳನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದ ತಮಿಳುನಾಡಿನ ಮೂವರನ್ನು ಮೈಸೂರು ಅರಣ್ಯ ಸಂಚಾರಿ ದಳ ಶನಿವಾರ ಬಂಧಿಸಿದೆ.

ತಮಿಳುನಾಡು ಈರೋಡ್ ಜಿಲ್ಲೆ, ಭವಾನಿ ತಾಲೂಕಿನ ಬೆಲ್‌ಮಳೆ ಗ್ರಾಮದ ಜವರಯ್ಯ(52), ಬೆಜರಟ್ಟಿ ಗ್ರಾಮದ ಕೆಂಪ(55) ಹಾಗೂ ಆಲೇಸೊಪ್ಪಟ್ಟಿ ಗ್ರಾಮದ ತಮ್ಮಯ್ಯ(45) ಬಂಧಿತರಾಗಿದ್ದು, ಅವರಿಂದ ಚಿರತೆಯ 18 ಉಗುರು, 8 ಹಲ್ಲುಗಳು ಹಾಗೂ ಮೊಬೈಲ್ ವಶಪಡಿಸಿಕೊಳ್ಳಲಾಗಿದೆ. ತಲೆ ಮರೆಸಿಕೊಂಡಿರುವ ಮತ್ತೋರ್ವನ ಬಂಧನಕ್ಕೆ ಕಾರ್ಯಾಚರಣೆ ಮುಂದುವರೆದಿದೆ.

ಈ ಮೂವರು ಚಿರತೆ ಹಲ್ಲು ಹಾಗೂ ಉಗುರುಗಳನ್ನು ಅಕ್ರಮವಾಗಿ ಸಂಗ್ರಹಿಸಿ, ಸಾಗಣೆ ಮಾಡಿ ಅವುಗಳನ್ನು ಮಾರಾಟ ಮಾಡಲು ಯತ್ನಿಸುವ ಬಗ್ಗೆ ಖಚಿತ ಮಾಹಿತಿ ಲಭ್ಯವಾದ ಹಿನ್ನೆಲೆಯಲ್ಲಿ ಮೈಸೂರು ಅರಣ್ಯ ಸಂಚಾರ ದಳ ಕಾರ್ಯಾಚರಣೆ ನಡೆಸಿ, ಮೈಸೂರು ಕಾರ್ಯವ್ಯಾಪ್ತಿಯ ಹನೂರು ತಾಲೂಕು ಜಲ್ಲಿಪಾಳ್ಯ ಗ್ರಾಮದ ಹೂಗ್ಯಂ ರಸ್ತೆಯಲ್ಲಿ ಆರೋಪಿಗಳನ್ನು ಬಂಧಿಸಿದೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು, ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ವನ್ಯಪ್ರಾಣಿಗಳ ಉಗುರುಗಳಿಂದ ತಾಯಿತ ತಯಾರಿಸಿ ಅದನ್ನು ತೊಡುವುದರಿಂದ ಒಳ್ಳೆಯದಾಗುತ್ತದೆ ಎಂಬ ಮೂಢನಂಬಿಕೆ ಹಾಗೂ ಇವುಗಳನ್ನು ಅಲಂಕಾರಿಕ ಆಭರಣಗಳಿಗೆ ಬಳಸುವುದರಿಂದ ಕಾಳಸಂತೆಯಲ್ಲಿ ಭಾರೀ ಬೇಡಿಕೆಯಿದೆ. ಇದರಿಂದ ಸಾಕಷ್ಟು ಹಣ ಸಂಪಾದಿಸಬಹುದು ಎಂಬ ತಪ್ಪು ತಿಳುವಳಿಕೆಯಿಂದ ಆರೋಪಿಗಳು ಈ ಕೃತ್ಯವೆಸಗಿರುವುದು ವಿಚಾರಣೆ ವೇಳೆ ತಿಳಿದುಬಂದಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ ರವೀಂದ್ರ ಕುಮಾರ್ ಮಾರ್ಗದರ್ಶನ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ನಾಗರಾಜು ನಿರ್ದೇಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ವಲಯ ಅರಣ್ಯಾಧಿಕಾರಿ ವಿವೇಕ್, ಉಪವಲಯ ಅರಣ್ಯಾಧಿಕಾರಿಗಳಾದ ವಿ.ನವೀನ್ ಕುಮಾರ್, ಪ್ರಮೋದ್, ಡಿ.ಎಂ.ವಿನೋದ್ ಕುಮಾರ್, ಅನಿಲ್ ಕುಮಾರ್, ನಾಗರಾಜು, ಅರಣ್ಯ ರಕ್ಷಕರಾದ ಮಹಾಂತೇಶ, ವಿರೂಪಾಕ್ಷ, ಚೆನ್ನಬಸವಯ್ಯ, ಉದಯ್ ಕುಮಾರ್, ಪ್ರಕಾಶ್, ಕುಮಾರ್, ದಿವಾಕರ್, ವಾಹನ ಚಾಲಕರಾದ ಮಧು ಹಾಗೂ ಪುಟ್ಟಸ್ವಾಮಿ ಭಾಗವಹಿಸಿದ್ದರು.